ಅಧ್ಯಕ್ಷರು:- ವಿಭಜಿಸಿದಾಗ ಫಲಿತಾಂಶ ಹೀಗಿದೆ:

ಹೌದು - 48

ಇಲ್ಲ - 15

ಸೂಚನೆಯು "ಹೌದು" ಎನ್ನುವವರ ಪರವಾಗಿದೆ.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಹಾಗೂ ವಿಧೇಯಕವನ್ನು ಮಂಡಿಸಲು ಅನುಮತಿ ನೀಡಲಾಯಿತು.

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜಕಲ್ಯಾಣ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, 1994ನೇ ಸಾಲಿನ ಕರ್ನಾಟಕ ಅನುಸೂಚಿತ ಜಾತಿ, ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳ (ಶೈಕ್ಷಣಿಕ ಸಂಸ್ಥೆಗಳು ಮತ್ತು ರಾಜ್ಯಾಧೀನ ಸೇವೆಗಳಲ್ಲಿ ನೇಮಕಾತಿ ಮತ್ತು ಹುದ್ದೆಗಳಲ್ಲಿ ಮೀಸಲಾತಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:- ವಿಧೇಯಕವನ್ನು ಮಂಡಿಸಲಾಗಿದೆ. ಅನುಬಂಧ IV

ಅಧ್ಯಕ್ಷರು:- ಸಭೆಯ ಕಲಾಪಗಳನ್ನು 3 ಗಂಟೆವರೆಗೆ ಮುಂದೂಡಿದ್ದೇನೆ.

(ಸಭೆಯು 1-55ಕ್ಕೆ ಮುಂದೂಡಿ ಮತ್ತೆ 3 ಗಂಟೆಗೆ ಸೇರಲು ನಿಶ್ಚಯಿಸಿತು)

**3.30. ಪಿ.ಎಂ**

(ಸಭೆಯು ಮತ್ತೆ 3-20ಕ್ಕೆ ಸಮಾವೇಶಗೊಂಡಿತು. ಅಧ್ಯಕ್ಷರು ಶ್ರೀ.ವಿ.ಎಸ್.ಕೌಜಲಗಿಯವರು ಪೀಠವನ್ನು ಅಲಂಕರಿಸಿದ್ದರು) ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪಕಾಲಾವಧಿ ಚರ್ಚೆ

**ವಿಷಯ:- ಭದ್ರಾವತಿಯಲ್ಲಿ ನಡೆದ ಕೋಮು ಗಲಭೆ ಬಗ್ಗೆ:-**

ಶ್ರೀ ಎಸ್.ಬಂಗಾರಪ್ಪ:- ಮಾನ್ಯ ಸಭಾಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಇದು ಮೊನ್ನೆಯೇ ಪ್ರಸ್ತಾಪವಾಗಬೇಕಾಗಿತ್ತು.

ಅಧ್ಯಕ್ಷರು:- ಎರಡು ಬಿಲ್ಲುಗಳನ್ನು ತೆಗೆದುಕೊಂಡು ಆ ನಂತರ ಇದನ್ನು ಚರ್ಚೆ ಮಾಡೋಣ.

Sri S.Bangarappa:-We are very sorry. We have been waiting here with lot of patience.

ಮೊನ್ನೆ ಈ ವಿಚಾರ ನಾನು ಪ್ರಸ್ತಾಪ ಮಾಡಿದಾಗ ತಾವು ಏನು ಹೇಳಿದಿರಿ ಎಂದು ದಯವಿಟ್ಟು ತಾವು ನೆನಪು ಮಾಡಿಕೊಳ್ಳಬೇಕು. ಸಭಾನಾಯಕರು ಕೂಡ ಏನು ಹೇಳಿದರು, ಇವತ್ತೇ ಮೊದಲನೇ ಸಬ್ಜೆಕ್ಟ್ ಆಗಿ ನಾವು ಇದನ್ನು ತೆಗೆದುಕೊಳ್ಳಬೇಕು ಎಂದಾಗ ತಾವು ಕೂಡ

ಒಪ್ಪಿದಿರಿ, ಅವರೂ ಒಪ್ಪಿಕೊಂಡರು. ಆದರೂ ಸಹ ಅಜೆಂಡಾ ಕೂಡ ಬದಲಾವಣೆಯಾಗಿದೆ. ಅಷ್ಟಾದರೂ ಕೂಡ ತಮ್ಮ ಗಮನಕ್ಕೂ ಕೂಡ ನಾವು ತಂದೆವು. ಇಲ್ಲಿ ವಿಚಾರ ಪ್ರಸ್ತಾಪ ಮಾಡೋಣ ಎಂದಾಗ ಇಷ್ಟೊತ್ತು ನಾನು ಕೂಡ ಬೆಳಿಗ್ಗೆಯಿಂದ ಕಾಯುತ್ತಿದ್ದೇನೆ. There must be some limit. The Government should co-ordinate with the subjects that are sent by the Hon'ble Members also.

ತಮಗೂ ಕೂಡ ಸರ್ಕಾರ ಸಹಕಾರವನ್ನು ಕೊಡಬೇಕು. ಅವರ ಮಾತನ್ನು ಅವರು ಉಳಿಸಿಕೊಳ್ಳಬೇಕು. ಭದ್ರಾವತಿಯಲ್ಲಿ ನಡೆದಿರತಕ್ಕಂಥದ್ದು it is not a small thing. ನಮಗೂ ನಿಮಗೂ ಕೂಡ ಗೊತ್ತಿರುವ ಹಾಗೆ ಇವತ್ತು ಕೊನೆಯ ದಿವಸ. ಆದ್ದರಿಂದ ಬಿಲ್ಲುಗಳನ್ನು ಆಮೇಲೆ ತೆಗೆದುಕೊಳ್ಳೋಣ. ನಾವು ಕೂಡ ಕುಳಿತುಕೊಳ್ಳುತ್ತೇವೆ. ನಾವು ಬೇಡ ಎಂದು ಹೇಳುವುದಿಲ್ಲ. ಇಷ್ಟಾದರೂ ಇಲ್ಲಿಯವರೆಗೂ ಕೂಡ ಬಿಲ್ ಇಂಟ್ರಡ್ಯೂಸ್ ಮಾಡುವುದು, ಮತ್ತೊಂದು, ಪ್ರತಿಯೊಂದು ತಾವು ಹೇಳಿದ ಹಾಗೆ ನಾವು ಪೇಷನ್ಸ್ ಇಟ್ಟುಕೊಂಡು ಬೆಳಿಗ್ಗೆಯಿಂದ ಇಲ್ಲಿಯವರೆಗೂ ಕಾಯುತ್ತಿದ್ದೇವೆ. All the members have waited. ಈಗ ತಾವು ದಯವಿಟ್ಟು ಭದ್ರಾವತಿ ವಿಚಾರವನ್ನು ಮುಗಿಸೋಣ. ಇದರಲ್ಲಿಯೇ ಹೆಚ್ಚು ಕಾಲ ಕಳೆಯಬೇಕೆಂಬ ಆಸೆ ನಮಗೇನೂ ಇಲ್ಲ. ಇದಾದ ಮೇಲೆ ಬೇರೆ ಬಿಲ್ಸ್‌ಗಳನ್ನು ಕೂಡ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-ಮಾನ್ಯ ಅಧ್ಯಕ್ಷರೇ, ಭದ್ರಾವತಿ ವಿಚಾರ ಚರ್ಚೆ ಮಾಡುವುದಕ್ಕೆ ಸರ್ಕಾರದ ಅಭ್ಯಂತರವೇನೂ ಇಲ್ಲ. ತಾವು ಈ ದಿವಸದ ಕಾರ್ಯಕ್ರಮದಲ್ಲಿ ಹಾಕಿದ್ದೀರಿ. ಆದರೆ ತಮ್ಮಲ್ಲಿ ನನ್ನ ಅರಿಕೆ ಏನೆಂದರೆ ಇಂದಿನ ಕಾರ್ಯಕ್ರಮದ ಪ್ರಕಾರ ಅನೇಕ ವಿಧೇಯಕಗಳು ಇವೆ. ಅದನ್ನು ಮುಗಿಸಿಕೊಂಡು ಆಮೇಲೆ ಇದನ್ನು ಚರ್ಚೆಗೆ ತೆಗೆದುಕೊಳ್ಳೋಣ. ಎಷ್ಟು ಹೊತ್ತು ಬೇಕಾದರೂ ಚರ್ಚೆ ಮಾಡೋಣ. ರಾತ್ರಿ ಹತ್ತು ಗಂಟೆಯಾದರೂ ಕುಳಿತುಕೊಂಡು ಚರ್ಚೆ ಮಾಡಲಿಕ್ಕೆ ನಾವು ಸಿದ್ಧರಿದ್ದೇವೆ.

ಶ್ರೀ ಎ.ಕೆ. ಅನಂತಕೃಷ್ಣ :- ಮಾನ್ಯ ಅಧ್ಯಕ್ಷರೇ, ಎಷ್ಟು ಹೊತ್ತಿಗೆ ತೆಗೆದುಕೊಳ್ಳುತ್ತೇವೆ ಎಂದು ಹೇಳಿಬಿಡಿ. ಅದನ್ನು ನಿಗದಿ ಮಾಡಿದರೆ ನಮ್ಮಲ್ಲಿರುವಂಥ ಶಂಕೆ ದೂರವಾಗುತ್ತದೆ. ಇಷ್ಟೊತ್ತಿಗೆ ತೆಗೆದುಕೊಳ್ಳುತ್ತೇವೆ ಎಂದು ಹೇಳಿಬಿಡಿ. ಏಕೆಂದರೆ ನಮ್ಮಗೂ ಬೆಂಗಳೂರು ನಗರದಲ್ಲಿ ಓಡಾಡುವುದು ಬಹಳ ಕಷ್ಟವಾಗಿದೆ ನಮ್ಮ ಕ್ಷೇತ್ರದಲ್ಲಂತೂ. ನನ್ನನ್ನು ಪ್ರತಿಯೊಬ್ಬರೂ. ಕೇಳುತ್ತಿದ್ದಾರೆ. ಭದ್ರಾವತಿ ವಿಷಯ ಬಂತೇ? ನೀವೇನು ಮಾಡಿದಿರಿ ಎಂದು ಕೇಳುತ್ತಿದ್ದಾರೆ. ಆ ವಿಷಯದ ಬಗ್ಗೆ ನಾವು ಸ್ವಲ್ಪ ಮಾತನಾಡಬೇಕಾಗಿದೆ. ದಯವಿಟ್ಟು ತಾವು ಅದಕ್ಕೆ ಅವಕಾಶ ಮಾಡಿಕೊಡಬೇಕು. ಇದನ್ನು ಮಾನ್ಯ ಪಾರ್ಲಿಮೆಂಟರಿ ಮಂತ್ರಿಗಳು ಕೂಡ ಇದಕ್ಕೆ ಗಮನವನ್ನು ಕೊಡಬೇಕು. ಇಷ್ಟೊತ್ತಿಗೆ ತೆಗೆದುಕೊಳ್ಳುತ್ತೇವೆ ಎಂದು ಹೇಳಿ ಸಾಕು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:-ಮಾನ್ಯ ಅಧ್ಯಕ್ಷರೇ, ಚರ್ಚೆ ಮಾಡುವುದಕ್ಕೆ ವಿರೋಧ ಇಲ್ಲ. ಚರ್ಚೆ ಮಾಡಬೇಕು ಎಂದು ಒಪ್ಪಿ ಈಗಾಗಲೇ ಕಾರ್ಯಕ್ರಮದ ಪಟ್ಟಿಯಲ್ಲಿ ಬಂದಿದೆ. ಕಾರ್ಯಕ್ರಮದ ಪಟ್ಟಿಯ ಪ್ರಕಾರ ನಾವು ಈ ಸಭೆಯ ಕಾರ್ಯ ಕಲಾಪಗಳನ್ನು ಮುಗಿಸೋಣ ಎಂದು ಅರಿಕೆ ಮಾಡುತ್ತಿದ್ದೇನೆ.

ಶ್ರೀ ಎಸ್.ಬಂಗಾರಪ್ಪ:-ಮಾನ್ಯ ಸಭಾಧ್ಯಕ್ಷರು ಮನ್ನಿಸುತ್ತೀರಿ ಎಂದು ನಾನು ಭಾವಿಸಿದ್ದೇನೆ. ಆವತ್ತು ಈ ವಿಚಾರ ಪ್ರಸ್ತಾಪ ಮಾಡಿದಾಗ ತಾವು ಏನು ಹೇಳಿದಿರಿ, All these things are on record. I am sorry to tell all these things. ಇವತ್ತು ನಾವು ಸಭಾಧ್ಯಕ್ಷರ ಬಗ್ಗೆ ಅಪಾರವಾದ ಗೌರವವನ್ನು ಇಟ್ಟೇ ನಾವು ಯಾವಾಗಲೂ ಮಾತನಾಡುತ್ತೇವೆ. ಇವತ್ತು ನಾನು ಪ್ರಸ್ತಾಪ ಮಾಡಿದಾಗ ಸಭಾನಾಯಕರೂ ಒಪ್ಪಿ ಕೊಂಡಹಾಗೆ, ತಾವು ಒಪ್ಪಿದ ಹಾಗೆ, ತಾವು ಓಪನ್ ಹೌಸ್‌ನಲ್ಲಿ ಹೇಳಿದ ಹಾಗೆ ನಾನು ಪ್ರಸ್ತಾಪ ಮಾಡಿರತಕ್ಕಂಥ ವಿಚಾರವನ್ನು ಅಲ್ಲಿಗೆ ನಿಲ್ಲಿಸಿ ಮತ್ತು ಇವತ್ತು ತೆಗೆದುಕೊಳ್ಳುವುದಕ್ಕೆ ಕೂಡ ನಾವು ಕಾಯ್ದೆವು. ಕಾಯ್ದಿದ್ದಕ್ಕೋಸ್ಕರ ಇದು ಪಟ್ಟಿಯಲ್ಲಿಕೊನೆಗೆ ಬಂದಿದೆ. ಆದರೆ ಕೊನೆಗೆ ಏತಕ್ಕೆ ಹಾಕಿದ್ದೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಅಷ್ಟಾದರೂ ಕೂಡ ಮತ್ತೆ ಈಗ ಬೇಡ, ಮಧ್ಯೆ ತೆಗೆದುಕೊಳ್ಳೋಣ ಕೆಲವು ವಿಚಾರ ಪ್ರಸ್ತಾಪವಾದ ಮೇಲೆ ಎಂದು ತಾವು ಹೇಳಿದ ಮೇಲೆ ಅದಕ್ಕೂ ನಾವು ಒಪ್ಪಿಕೊಂಡೆವು. ಇದಕ್ಕೆ too much of patience ಟೆಸ್ಟ್ ಮಾಡುವುದು ಅಷ್ಟು ಒಳ್ಳೆಯದಲ್ಲ. ನಾನು ವಿನಂತಿ ಮಾಡುತ್ತಿದ್ದೇನೆ, ಈಗ ಭದ್ರಾವತಿ ಮ್ಯಾಟರ್‌ನ್ನು ತೆಗೆದುಕೊಳ್ಳೋಣ. ಇದಾದ ಮೇಲೆ ಬಿಲ್‌ಗಳನ್ನು ತೆಗೆದುಕೊಳ್ಳೋಣ. ಬೇಡ ಎಂದು ನಾವು ಹೇಳುವುದಿಲ್ಲ ಅದನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರ ತಮಗೆ ಯಾವಾಗಲೂ ಇದೆ. ಅದನ್ನು ತಾವು ಪ್ರಯೋಗ ಮಾಡಬೇಕು. ದಯವಿಟ್ಟು ಈ ವಿಚಾರದ ಪ್ರಸ್ತಾಪಕ್ಕೆ ತಾವು ಅನುವು ಮಾಡಿಕೊಡಬೇಕು ಎಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. ನಾವು ಪ್ರಾರಂಭ ಮಾಡಬಹುದೇ?

ಶ್ರೀ ಡಿ.ಬಿ.ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ, ಈ ವಿಚಾರ ಪ್ರಸ್ತಾಪಕ್ಕೆ ಬಂದಿದ್ದು ನಿಲುವಳಿ ಸೂಚನೆಯ ಮೂಲಕ. ನಿಲುವಳಿ ಸೂಚನೆಯನ್ನು ನಿಯಮ 68 ರಂತೆ ಬದಲಾವಣೆ ಮಾಡಿ ಎಂದು ನಾನೇ ಸಲಹೆ ಮಾಡಿದೆ. ಆಗ ತಾವು ಒಂದು ಮಾತು ಹೇಳಿದಿರಿ, ಏನೆಂದರೆ, ನಿಯಮ 68 ರಂತೆ ಬದಲಾವಣೆಯನ್ನೂ ಮಾಡೋಣ. ಇದಕ್ಕೆ ಅತ್ಯಂತ ಪ್ರಾಮುಖ್ಯವಾದ ಜಾಗವನ್ನು ಕೊಡುತ್ತೇನೆ ಹಾಗೂ ಆದ್ಯತೆಯ ಮೇರೆಗೆ ತೆಗೆದು ಕೊಳ್ಳುತ್ತೇನೆ ಎಂದು ಹೇಳಿದಿರಿ. ನಮಗೆ ಬಿಲ್ಸ್‌ನ ಬಗ್ಗೆ ಆಧ್ಯತೆ ಇಲ್ಲ ಅಂತಲ್ಲ. ನಾವು ಬಿಲ್ಲುಗಳನ್ನು ಪಾಸು ಮಾಡಿಕೊಡೋಣ. ಬಿಲ್ಲಿಗೆ ಚರ್ಚೆ ಬೇಕಾಗುತ್ತದೆ. ಆದರೆ ಅದೂ ಅಷ್ಟೇ ಮುಖ್ಯವಾದಂತಹ ವಿಚಾರ. ಶ್ರೀಮಾನ್ ಬಂಗಾರಪ್ಪನವರು ಹೇಳಿದ ಹಾಗೆ ನನ್ನನ್ನು ಕೇಳಿದರೆ ಇದು ಸದನ ಪ್ರಾರಂಭವಾದ ದಿವಸವೇ ಚರ್ಚೆಯಾಗ ಬೇಕಾಗಿತ್ತು. ನಾವು ನೋಟೀಸ್‌ಗಳನ್ನು ಕಳುಹಿಸಿದ್ದೆವು. ಇವತ್ತು, ನಾಳೆ. ನಾಡಿದ್ದು ಎಂದು ಹೀಗೆ ಮುಂದಕ್ಕೆ ಹೋಗಿದೆ ಸಹಸ್ರಾರು ಕುಟುಂಬಗಳ ಜನರು ಬೀದಿಯಲ್ಲಿದ್ದಾರೆ.

ಆಸ್ತಿ, ಭೂಮಿ, ಮನೆ, ಮಠಗಳನ್ನು ಕಳೆದುಕೊಂಡು ಸಹಸ್ರಾರು ಕುಟುಂಬಗಳು ಬೀದಿಪಾಲಾಗಿವೆ. ಇದರ ಬಗ್ಗೆ ಕನಿಷ್ಠ ಪಕ್ಷ ಚರ್ಚೆ ಮಾಡಿ ಸರ್ಕಾರದ ಗಮನ ಸೆಳೆಯದಿದ್ದರೆ ಏನಾಗಬಹುದು? ಈದ್ಗಾ ಮೈದಾನದ ಬಗ್ಗೆ ಚರ್ಚಿಸಿದೆವು; ಆದರೆ, ಭದ್ರಾವತಿಯಲ್ಲಾದ ಘಟನೆ ಕುರಿತು ಚರ್ಚಿಸದೆ ಹಾಗೆ ಬಿಟ್ಟರಿ. ಅದನ್ನು ಕೂಡ ಆವೊತ್ತೇ ಸೇರಿಸಿ ಚರ್ಚಿಸಿದ್ದರೆ ಮುಗಿದುಹೋಗುತ್ತಿತ್ತು. ಇವೊತ್ತು ಅದರ ಬಗ್ಗೆ ಚರ್ಚೆಗೆ ಅವಕಾಶವಿಲ್ಲವೆಂದರೆ ಇದು ಸರಿಯಾದ ಕ್ರಮವಲ್ಲ. ಯಾವುದೇ ಬಿಲ್‌ಗಳಿರಲಿ, ಎಷ್ಟೇ ಹೊತ್ತಾಗಲಿ ನಾವು ಕುಳಿತುಕೊಂಡು ಪಾಸ್ ಮಾಡಿಕೊಡುತ್ತೇವೆ. ತಾವು ದಯಮಾಡಿ ಅದಕ್ಕೆ ಅನುಮತಿ ಕೊಡಬೇಕು.

ಶ್ರೀ ಎಸ್.ಬಂಗಾರಪ್ಪ:- ಮಾನ್ಯ ಅಧ್ಯಕ್ಷರೇ, ಈಗ ನಾನು ಪ್ರಸ್ತಾಪಿಸಬಹುದೇ?

ಸಭಾಧ್ಯಕ್ಷರು:- ತಾವು ಎಷ್ಟು ಹೊತ್ತು ಮಾತನಾಡುತ್ತೀರೆಂದು ಹೇಳಿದರೆ ಕಾಲ ನಿಗದಿಪಡಿಸಲು ಅನುಕೂಲವಾಗುತ್ತದೆ.

ಶ್ರೀ ಎಸ್.ಬಂಗಾರಪ್ಪ:- ನನಗೆ ಹೆಚ್ಚು ಕಾಲಾವಕಾಶ ಬೇಕಾಗುವುದಿಲ್ಲ.

ಅಧ್ಯಕ್ಷರು:-ಏಕೆಂದರೆ, ಮಾನ್ಯ ವಿರೋಧ ಪಕ್ಷದ ನಾಯಕರಾದ ದೇಶಪಾಂಡೆ ಯವರು ಹಾಗೂ ಸದಸ್ಯರಾದ ಯಡಿಯೂರಪ್ಪನವರು ಸಹ ನೋಟೀಸ್ ಕೊಟ್ಟಿದ್ದು ಮಾತ ನಾಡುವವರಿದ್ದಾರೆ.

ಶ್ರೀ ಆರ್.ವಿ.ದೇಶಪಾಂಡೆ:-ನಾನು ಇಂದು ಬೆಳಿಗ್ಗೆ 9.30 ಗಂಟೆಗೆ ಪ್ರಸ್ತಾಪ ಮಾಡಿ ತಮ್ಮನು ಕೇಳಿದೆ. ಆಗ ಬಂಗಾರಪ್ಪನವರು ಇರಲಿಲ್ಲ. ನಮ್ಮ ಅಂಡರ್ ಸ್ಟಾಂಡಿಗ್ ಏನು ಆಗಿತ್ತೆಂದರೆ ತಕ್ಷಣ ಮೊದಲು ಇದನ್ನು ತೆಗೆದುಕೊಳ್ಳಬೇಕೆಂಬುದು. ಇದನ್ನು ಬೆಳಿಗ್ಗೆ ತಮ್ಮ ಗಮನಕ್ಕೆ ತಂದೆ. ಆದುದರಿಂದ ಹೇಳುತ್ತಿದ್ದೇನೆ; ಬಿಲ್‌ಗಳನ್ನು ತೆಗೆದುಕೊಳ್ಳುವುದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ, ಮೊದಲು ನಮ್ಮ ವಿಷಯವನ್ನು ತೆಗೆದುಕೊಳ್ಳಬೇಕಾಗಿದ್ದು ಕೊನೆಗೆ ಹೋದೆ. ಇದನ್ನು ನಾನು ತಮ್ಮ ಗಮನಕ್ಕೆ ತಂದೆ. ಇವೊತ್ತು ಅದಿವೇಶನದ ಕೊನೆಯ ದಿವಸ. ಹಲವಾರು ಮಸೂದೆಗಳು ಅಂಗೀಕಾರವಾಗಬೇಕು. ಅದನ್ನು ನಾವು ಸರಿಪಡಿಸುತ್ತೇವೆ. ಇದು ಬಹಳ ಮಹತ್ವದ ವಿಚಾರವಾಗಿರುವುದರಿಂದ ತಾವು ಇದಕ್ಕೆ ಕಾಲಮಿತಿ ಹಾಕಿ. ನಮ್ಮ ಕಡೆಯಿಂದ 2-3 ಜನ ಸದಸ್ಯರು ಮಾತ್ರ ಮಾತನಾಡುತ್ತಾರೆ. ಬಂಗಾರಪ್ಪನವರು ಮಾತನಾಡಿದರೆ ನಂತರ ನಾವು ಚರ್ಚೆ ಮಾಡಿ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅಷ್ಟೋತ್ತಿಗೆ ಸಭಾ ನಾಯಕರು ಸದನಕ್ಕೆ ಬರಲು ಹೇಳಿರಿ.

*ಶ್ರೀ ಎಸ್.ಬಂಗಾರಪ್ಪ(ಸೊರಬ):- ಮಾನ್ಯ ಸಭಾಧ್ಯಕ್ಷರೇ, ಬಹಳ ಗಂಭೀರವಾದ ವಿಚಾರವನ್ನು ನಿಯಮ 68ರ ಪ್ರಕಾರ ಸದನದಲ್ಲಿ ಚರ್ಚಿಸಲು ಅನುಮತಿ ಕೊಟ್ಟಿದ್ದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ. ಭದ್ರಾವತಿ ನಗರದಲ್ಲಿ ನಡೆದಿರತಕ್ಕ ಘಟನೆಗಳ ಬಗ್ಗೆ ನಾನು ವಿವರವಾಗಿ ಚರ್ಚೆ ಮಾಡುವುದಕ್ಕಿಂತ ಮೊದಲು ಒಂದು ಮಾತನ್ನು ಪೂರ್ವ ಪೀಠಿಕೆಯಾಗಿ ಹೇಳಿದರೆ ಅದು ಉಪಯುಕ್ತವಾಗುತ್ತದೆಂದು ಭಾವಿಸಿದ್ದೇನೆ. ನಮ್ಮ ದೇಶದ ಸಮಾಜದಲ್ಲಿ

ಹಲವಾರು ಧರ್ಮ, ಜಾತಿ, ಮತ, ನಂಬಿಕೆಗಳು ಹಾಗೂ ಭಾಷೆಗಳಿವೆ. ಭೌಗೋಳಿಕವಾಗಿ ಬೃಹತ್ ರಾಷ್ಟ್ರವಾಗಿ ಸಹಜ ವೈವಿಧ್ಯತೆಯಿಂದ ಕೂಡಿದ್ದರೂ ಏಕತೆ ಅಥವಾ ಒಗ್ಗಟ್ಟಿನಿಂದ ಕೆಲಸ ಮಾಡುವುದು ಅಷ್ಟೇ ಸುಲಭ. ಇದನ್ನು ನಮ್ಮ ಪೂರ್ವಜರು ನಮಗೆ ಮಾಡಿ ತೋರಿಸಿ ಹೋಗಿದ್ದಾರೆ. ಈ ಸಂದರ್ಭದಲ್ಲಿ ಪೂಜ್ಯ ಮಹಾತ್ಮಗಾಂಧಿಜಿಯವರನ್ನು ನೆನಪಿಸಿಕೊಳ್ಳುವುದು ನನ್ನ ಆದ್ಯ ಕರ್ತವ್ಯವೆಂದು ಭಾವಿಸಿದ್ದೇನೆ. ನಮ್ಮ ಕರ್ನಾಟಕ ಕಾಂಗ್ರೆಸ್ ಪಕ್ಷದ ಪರವಾಗಿ ಒಂದು ಮಾತನ್ನು ಹೇಳುವುದಾದರೆ ಪೂಜ್ಯ ಮಹಾತ್ಮಾ ಗಾಂಧೀಜಿಯವರ ಮಹಾನ್ ನಾಯಕತ್ವದಲ್ಲಿ ಪಂಡಿತ ಜವಹರಲಾಲ್ ನೆಹರು, ಅಬ್ದುಲ್ ಕಲಂ ಅಜಾದ್ ಮುಂತಾದವರು ಜಾತಿ, ಧರ್ಮ, ಮತದಲ್ಲಿ ನಂಬಿಕೆಯಿಟ್ಟು ಲಕ್ಷಾಂತರ ಜನರ ಜತೆಗೂಡಿ ಅಪಾರವಾದ ತ್ಯಾಗ ಮಾಡಿ ಸ್ವಾತಂತ್ರ್ಯ ಗಳಿಸಿಟ್ಟು ಹೋಗಿದ್ದಾರೆ, ನಿಜ. ನಮ್ಮ ಸಮಾಜದಲ್ಲಿ ಕೆಲವೊಮ್ಮೆ ಕೆಲವು ಅಹಿತಕರ ಘಟನೆಗಳು ಉದ್ಭವಿಸಿದರೂ ಕೂಡ ಅದನ್ನು ನಾವು ಮರೆತು ಶಾಂತಿಪ್ರಿಯತೆಯನ್ನು ಉಳಿಸಿಕೊಂಡು ಬಂದಿದ್ದೇವೆ. ಅದನ್ನು ಯಾವಾಗಲೂ ನಾವು ಕಾಪಾಡಿಕೊಂಡು ಬರಬೇಕು. ಗಳಿಸಿರತಕ್ಕಂಥ ಸ್ವಾತಂತ್ರ್ಯವನ್ನು ಧರ್ಮದ ಹೆಸರಿನಲ್ಲಿ ಹಾಳು ಮಾಡತಕ್ಕಂಥ ಒಂದು ಪರಿಸ್ಥಿತಿಯನ್ನು ಉದ್ಭವ ಮಾಡಬಾರದು ಇವೊತ್ತು ಯಾವುದೇ ಒಬ್ಬ ವ್ಯಕ್ತಿ ಅಥವಾ ರಾಜಕೀಯ ಪಕ್ಷ ತನ್ನ ಸ್ವಾರ್ಥಕ್ಕಾಗಿ ಅದನ್ನೇನಾದರೂ ದುರುಪಯೋಗ ಪಡಿಸಿಕೊಂಡರೆ ನಾವು ಅದನ್ನು ದಂಡಿಸಬೇಕು. ಅಧಿಕಾರ ಬರುತ್ತದೆ, ಹೋಗುತ್ತದೆ, ಇದು ಅಮುಖ್ಯವಾಗುತ್ತದೆ. ಈ ಒಂದು ದೃಷ್ಟಿಯಿಂದ ನಾವು ಇಲ್ಲಿ ಆಡತಕ್ಕಂಥ ಮಾತು ಭವಿಷ್ಯದ ಪೀಳಿಗೆಗೆ ಮತ್ತು ಪ್ರಸ್ತುತ ಪೀಳಿಗೆಗೆ ಅದು ಒಗ್ಗಟ್ಟನ್ನು ನಿರೂಪಣೆ ಮಾಡುವ ಒಂದು ವಿಷಯವಾಗಬೇಕೇ ವಿನಹ ನಿರುಪಯುಕ್ತ ವಿಷಯವಾಗಿ ಅದನ್ನು ಆ ರೀತಿ ನಾವು ಕಾಣುವುದರಿಂದ ಸಹಜವಾಗಿ ಇದರ ದುರ್ಲಾಭ ಪಡೆಯತಕ್ಕಂಥ ಕೆಲವು ಜನರು ನಮ್ಮ ದೇಶದಲ್ಲಿದ್ದಾರೆಂಬುದನ್ನು ಸಹ ಮರೆಯಕೂಡದು. ಅದಕ್ಕಾಗಿ ಪೂರ್ವಪೀಠಿಕೆಯಾಗಿ ತಮ್ಮ ಗಮನಕ್ಕೆ ತರುವುದೇನೆಂದರೆ, ಇಂತಹ ಘಟನೆಗಳು ಹಿಂದೆ ಕೆಲವೊಮ್ಮೆ ನಡೆದಿವೆ. ಆ ಘಟನೆಗಳು ನಡೆದಿರತಕ್ಕಂಥ ಸಂದರ್ಭದಲ್ಲಿ ಆಯಾ ಪ್ರದೇಶದಲ್ಲಿ ಶಾಂತಿ ಸಂಘ-ಸಂಸ್ಥೆಗಳನ್ನು ರಾಷ್ಟ್ರಮಟ್ಟದಲ್ಲಿ, ಪ್ರಧಾನಿಯವರ ನಾಯಕತ್ವದಲ್ಲಿ ಆರಂಭಿಸಿದ್ದರೆ ರಾಜ್ಯಮಟ್ಟದಲ್ಲಿ ಮುಖ್ಯಮಂತ್ರಿಯವರ ನಾಯಕತ್ವದಲ್ಲಿ, ಕೆಲವೊಮ್ಮೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟಗಳಲ್ಲೂ ಪ್ರಾರಂಭ ಮಾಡಿದ್ದೇವೆ. ಶಾಂತಿಯನ್ನು ಕದಡದೆ ಇರತಕ್ಕ ವಾತಾವರಣವನ್ನು, ಪರಿಸರವನ್ನು ಸೃಷ್ಟಿ ಮಾಡುವುದಕೋಸ್ಕರ ಸರ್ವಪಕ್ಷಗಳು ಸರ್ವ ಜಾತಿ, ಮತ ಧರ್ಮಗಳಿಗೆ ಸೇರಿರತಕ್ಕ ಜನರನ್ನು ಅಲ್ಲಿ ಜವಾಬ್ದಾರಿಯುತ ಸದಸ್ಯರನ್ನಾಗಿ ಅಂಥ ಸಮಿತಿಗಳಲ್ಲಿಟ್ಟು ಅವರಲ್ಲಿ ಒಗ್ಗಟನ್ನು ಕಾಪಾಡಿಕೊಂಡು ಬರಬೇಕು. ಅದನ್ನು ನಿರೂಪಣೆ ಮಾಡಬೇಕು. ಜನರು ತಪ್ಪು ಹೆಜ್ಜೆಯನ್ನಿಡಬಾರದು. ಆ ರೀತಿಯಾದ ವಿವೇಕಯುತದ ಒಂದು ಮಾತನ್ನು ಪದೇ ಪದೇ ಗಮನದಲ್ಲಿಟ್ಟು ಕೊಂಡು ಆಯಾ ರಾಜ್ಯಗಳು ಅದನ್ನು ಮಾಡಿಕೊಂಡೇ ಬಂದಿವೆ. ಅದಕ್ಕಾಗಿ ನಾನು ಈ ಸಂದರ್ಭದಲ್ಲಿ ಪೂರ್ವ ಪೀಠಕೆಯಾಗಿ ಇದನ್ನು ಹೇಳುತ್ತಿದ್ದೇನೆ. ಇವತ್ತು ಹುಬ್ಬಳ್ಳಿಯಲ್ಲಿ ನಡೆದಿರುವ ಘಟನೆ ಇರಬಹುದು, ಅಥವಾ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ಇರಬಹುದು,

ಇತ್ತೀಚೆಗೆ ನಡೆದಿರತಕ್ಕ ಘಟನೆಗಳ ಬಗ್ಗೆ ನಾನು ಹೇಳುವಂತಿಲ್ಲ. ಅಥವಾ ಹಿಂದೆ ನಡೆದಿರುವ ಘಟನೆಗಳಿರಬಗುದು. ಇದಕ್ಕೆ ಕಾರಣಕರ್ತರು ಯಾರೇ ಇರಬಹುದು. ಅವರೆಲ್ಲರನ್ನೂ ಕೂಡ ಜಾತ್ಯಾತೀತ ಸಮಾಜದ ನಿರ್ಮಾಣದ ಕಲ್ಪನೆಯನ್ನಿಟ್ಟು ಕೊಂಡಿರುವ ಜನರು ಖಂಡಿಸತಕ್ಕ ವಿಚಾರ ಮಾತ್ರವಲ್ಲ, ಭವಿಷ್ಯದಲ್ಲೂ ಸಹ ಅವರುಗಳ ಬಗ್ಗೆ ಬಹಳ ಜಾಗ್ರತೆಯಾಗಿ ಇರತಕ್ಕ ಜವಾಬ್ದಾರಿ ಸಂಬಂಧಪಟ್ಟಿರುವ ಎಲ್ಲರ ಮೇಲೂ ಇರತಕ್ಕ ಒಂದು ಪ್ರಶ್ನೆಯಾಗಿದೆ ಎನ್ನತಕ್ಕ ಮಾತನ್ನು ಅಧ್ಯಕ್ಷರ ಅನುಮತಿಯನ್ನು ಪಡೆದು ಹೇಳುತ್ತಿದ್ದೇನೆ. ಈ ಸಂದರ್ಭದಲ್ಲಿ ನಾನು ಹುಬ್ಬಳ್ಳಿಯ ವಿಚಾರವನ್ನು ಮಾತನಾಡಲು ಹೋಗುವುದಿಲ್ಲ. ಏಕೆಂದರೆ ಅದರ ಬಗ್ಗೆ ಈ ಸದನದಲ್ಲಿ ಈಗಾಗಲೆ ಪ್ರಸ್ತಾಪಕ್ಕೆ ಒಳಪಟ್ಟಿದೆ. ನಾನು ನನ್ನ ಮಾತನ್ನು ನಮ್ಮ ಶಿವಮೊಗ್ಗ ಜಿಲ್ಲೆಯ ಭದ್ರಾವತಿಗೆ ಸೀಮಿತಗೊಳಿಸಿ ಇಲ್ಲಿ ವಿವರಗಳನ್ನಿಟ್ಟು ಹೇಳತಕ್ಕ ಅವಶ್ಯಕತೆ ಇದೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ಶಿವಮೊಗ್ಗ ಜಿಲ್ಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ನಾನು ಕಂಡಂತೆ ಇಂಥ ಘಟನೆಗಳು ನಡೆದಿರಲಿಲ್ಲ. ನನಗೆ ಒಂದು ಸಂತೋಷದ ವಿಚಾರವೇನೆಂದರೆ ಕರ್ನಾಟಕ ರಾಜ್ಯದಲ್ಲಿ ಬಾಬರಿ ಮಸೀದಿಯ ಘಟನೆ 1992ರ ಡಿಸೆಂಬರ್ 6ರಂದು ಆದಮೇಲೆ ರಾಷ್ಟ್ರದಾದ್ಯಂತ ನಡೆದಿರುವ ಘಟನೆಗಳ ಸರಮಾಲೆಯ ಜೊತೆಯಲ್ಲಿ ಕರ್ನಾಟಕದಲ್ಲಿ ಕೆಲವು ಘಟನೆಗಳು ನಡೆದಿರುವುದನ್ನು ಬಿಟ್ಟರೆ ಅನಂತರ ಇಂತಹ ಘಟನೆಗಳು ನಡೆದಿಲ್ಲವೆನ್ನತಕ್ಕ ವಿಚಾರ ಮನಸ್ಸಿಗೆ ಎಷ್ಟೋ ಸಮಾಧಾನದ ಸಂಗತಿ. ಪುನ: ಪುನ: ನಾವು ನೋಡುತ್ತಿದ್ದೇವೆ, ಇಂಥ ಅಹಿತಕರ ಘಟನೆಗಳು ಈ ಜಾತಿ, ಮತ, ಧರ್ಮದ ಹೆಸರಿನಲ್ಲಿ ಇಂಥ ದಳ್ಳುರಿಯನ್ನು ಹುಟ್ಟಿಸಿ ಎಬ್ಬಿಸತಕ್ಕ ವಿಚಾರ ಧಾರೆಗಳು, ಕೆಟ್ಟ ಪ್ರವೃತ್ತಿಗಳು ನಮ್ಮ ಮುಂದೆ ಹುಟ್ಟಿ ಬೆಳೆದು ಶಾಂತಿಯನ್ನು ಕದಡತಕ್ಕಂಥ ವಿಚಾರ ನಮ್ಮ ಗಮನಕ್ಕೆ ಬಂದಿದೆ. ನಾಳೆ ತಮ್ಮ ಮುಖಾಂತರ ಈ ಸಂದರ್ಭ ಬರಬಹುದು, ಏನೇ ಬರಬಹುದು, ನಾವು ಸರ್ವ ಜಾತಿ ಮತ್ತು ಧರ್ಮಕ್ಕೆ ಸೇರಿರತಕ್ಕ ಜನರು. ಹಿಂದು, ಮುಸಲ್ಮಾನ್, ಕ್ರೈಸ್ತ್, ಜೈನ್,ಭೌದ ಪಾರ್ಸಿ ಇತ್ಯಾದಿ ಇತ್ಯಾದಿ ಧರ್ಮಕ್ಕೆ ಸೇರಿರತಕ್ಕ ಜನರು ನಾವು ಅಖಂಡ ಭಾರತಕ್ಕೇ ಹೇಳತಕ್ಕ ಮಾತು ಇದು ಕರ್ನಾಟಕ ರಾಜ್ಯ ಅಖಂಡ ಭಾರತದ ಅವಿಭಾಜ್ಯ ಅಂಗ ಇವತ್ತು ದೇಶ ಒಂದು ದೇಹವಿದ್ದಂತೆ. ಅದರಲ್ಲಿ ಒಂದು ಬೆರಳಿಗೆ ನೋವಾದರೆ, ಹೇಗೋ ಹಾಗೆಯೇ ಕರ್ನಾಟಕದಲ್ಲಿ ಒಂದು ಘಟನೆಯಾದರೆ ಇದು ಕೇವಲ ಬೆರಳಿಗೆ ಮಾತ್ರ ನೋವಾಗದೆ, ದೇಹಕ್ಕೆ ಏನೂ ಸಂಬಂಧವಿಲ್ಲ ಎನ್ನತಕ್ಕ ಮಾತನ್ನು ಯಾರಾದರೂ ಆಡಿದರೆ ಅದು ತಪ್ಪು ಗ್ರಹಿಕೆಯಾಗುತ್ತದೆ. ಬೆರಳಿಗೆ ಆಗಿರತಕ್ಕ ನೋವು ಇಡೀ ದೇಹವನ್ನೇ ಕಂಪಿಸುತ್ತದೆ ಎನ್ನತಕ್ಕ ಮಾತನ್ನು ನಾವು ಮರೆಯಬಾರದು. ಹಿಂದೆ ನಡೆದಿರತಕ್ಕಂಥ ಕಲವು ಜಾಗದ ಘಟನೆಗಳನ್ನು ನಾವು ಪುನಃ ಪ್ರಸ್ತಾಪ ಮಾಡುವ ಆಸೆ ನನಗಿಲ್ಲ. ಅದು ಬಟ್ಕಳ ಇತ್ಯಾದಿ ಇತ್ಯಾದಿ. ಇವತ್ತು ನನಗೆ ಸಂತೋಷವಾಯಿತು. ಅನೇಕ ಜಾಗದಲ್ಲಿ ನಡೆದಿರುವ ಈ ರೀತಿಯ ಘಟನೆಗಳು ಎಲ್ಲಾ ಧರ್ಮಗಳಿಗೆ ಸೇರಿರುವ ಜನರನ್ನು ಪ್ರಶಂಸೆ ಮಾಡಬೇಕು, ಪ್ರೀತಿ, ವಿಶ್ವಾಸದಿಂದ ಅವರು ಅಣ್ಣ ತಮ್ಮಂದಿರ ಹಾಗೆ ಮತ್ತು ಅಕ್ಕತಂಗಿಯರ ರೂಪದಲ್ಲಿ ಜೀವನ ಮಾಡುತ್ತಿದ್ದಾರೆ. ಅದಕ್ಕಾಗಿ ನಾನು ಈ ಸದನದಲ್ಲಿ ಹೇಳತಕ್ಕ ಮಾತು, ಬೇರೆ ಮಾನ್ಯ ಸದಸ್ಯರಿಗೆ ಈ ಮಾತನ್ನು

ಹೇಳುವುದಕ್ಕೆ ಹಕ್ಕಿಲ್ಲವೆಂದು ಹೇಳತಕ್ಕ ಹೃದಯ ಶ್ರೀಮಂತಿಕೆ ಅವರಿಗೆ ಇಲ್ಲ ಎನ್ನತಕ್ಕ ಮಾತನ್ನು ನಾನು ಹೇಳುತ್ತಿಲ್ಲ. ಆದರೆ ನಾನು ಏನೇ ಹೇಳಿದರೂ ಸಹ ನಮ್ಮ ವಿಚಾರಧಾರೆ ಈ ಒಂದು ದಿಸೆಯಲ್ಲಿಯೇ ಹೋಗಬೇಕು ಎನ್ನತಕ್ಕ ಮಾತನ್ನು ಮರೆಯಬಾರದು. ಅದು ಸರ್ವ ಧರ್ಮ, ಜಾತಿ ಮತಗಳಲ್ಲಿ ವೈವಿಧ್ಯತೆ ಇರತಕ್ಕಂಥ ನಮ್ಮಂಥ ಸಮಾಜದಲ್ಲಿ ಏಕತೆ, ಸಮಾನತೆಯನ್ನು ನಮ್ಮ ಕಲ್ಪನೆಯ ಮುಖಾಂತರ ರೂಢಿಸಿ ಅದನ್ನು ಕಾರ್ಯ ಕ್ಷೇತ್ರದಲ್ಲಿ ಕೂಡ ಜಾರಿಗೆ ತರಬೇಕು ಮತ್ತು ಜಾರಿಗೊಳಿಸಬೇಕು ಎನ್ನತಕ್ಕ ವಿಚಾರ ನಮ್ಮ ಮನಸ್ಸಿನಲ್ಲಿರಬೇಕು. ಈ ಒಂದು ಸದುದ್ದೇಶದಿಂದ ಮಾತ್ರ ನಾನು ನಮ್ಮ ಕರ್ನಾಟಕ ಕಾಂಗ್ರೆಸ್ ಪಕ್ಷದ ಪರವಾಗಿ ಮತ್ತು ಈ ಸದನದ ಸದಸ್ಯನಾಗಿ ಜವಬ್ದಾರಿಯುತವಾಗಿ ಈ ಮಾತನ್ನು ಆಡುತ್ತಿದ್ದೇನೆ. ಯಾರಾದರೂ ಈ ವಿಚಾರಧಾರೆಗೆ ಅಡ್ಡ ಬಂದರೆ ವಿರೋಧವಾಗಿ ಹೋದರೆ ಅದು ರಾಷ್ಟ್ರದ ಏಕತೆ ಮತ್ತು ಸಮಗ್ರತೆಗೆ ನಮ್ಮ ರಾಷ್ಟ್ರಕ್ಕೆ ಅವಿಭಾಜ್ಯ ಅಂಗವಾಗಿರತಕ್ಕಂಥ ಒಗ್ಗಟಿಗೆ ಅದು ಧಕ್ಕೆ ತರುತ್ತದೆ ಎಂಬ ಮಾತನ್ನು ಗಮನದಲ್ಲಿಟ್ಟುಕೊಂಡು ನಾನು ಈ ಮಾತನ್ನು ಆಡುತ್ತಿದ್ದೇನೆ. ಅದಕ್ಕಾಗಿ ನಾನು ಇವತ್ತು ನೇರವಾಗಿ ಬೇರೆ ವಿಚಾರಕ್ಕೆ ಹೋದಷ್ಟೂ ಕೂಡ ನಾನು ಡಿಸ್‌ಸರ್ವಿಸ್ ಟು ಡಿಸ್ ಯೂನಿಟಿ ಮಾಡುತ್ತೇನೋ ಎಂಬ ಆತಂಕ ಕೂಡ ನನ್ನ ಮನಸ್ಸಿನಲ್ಲಿದೆ. ಆದ್ದರಿಂದ ನಾನು ಈ ಸದನದ ಸದಸ್ಯನಾಗಿ 1967ರಿಂದ ನೋಡುತ್ತಿದ್ದೇನೆ. ಸುಮಾರು 27-28 ವರ್ಷಗಳ ನನ್ನ ಸುದೀರ್ಘ ಸದಸ್ಯತ್ವದ ಅವಧಿಯಲ್ಲಿ ಈ ರಾಜಕಾರಣವನ್ನು ಕಂಡಿದ್ದೇನೆ. ಜನಕ್ಕೆ ಇದ್ಯಾವುದು ಕೂಡ ಬೇಡವಾಗಿದೆ. ಯಾವ ಜಾತಿ ಮತಗಳು ಸೇರಿದರೂ ಕೂಡ, ಅವರು ಬಗ್ಗಟ್ಟಿನಿಂದ ಹೋಗಬೇಕು. ಬೆಳಗಾದರೆ ರೊಟ್ಟಿ, ಅನ್ನ, ಅಥವಾ ಕೂಲಿ ಹುಡುಕುವಂತಹ ಜನ ಅಥವಾ ಮಧ್ಯಮವರ್ಗದ ಜನ ಒಂದು ಕಡೆಗೆ ಇದ್ದರೆ, ಮತ್ತೊಂದು ಕಡೆಗೆ ತಮ್ಮ ರಾಜಕೀಯ ದಾಳವನ್ನು ಎಸೆದು ಸ್ವಾರ್ಥ ರಾಜಕಾರಣ ಮಾಡುವಂತಹ ಜನರು ನಮ್ಮಲ್ಲಿದ್ದಾರೆ ಎನ್ನುವುದನ್ನು ಮರೆಯಬಾರದು. ಈ ಒಂದು ದೃಷ್ಟಿಯಿಂದ ಮಾನ್ಯ ಸಭಾಧ್ಯಕ್ಷರೆ, ನಾನು ಒಂದು ವಿನಂತಿ ಹಿಂದೆ ಕೂಡ ಮಾಡಿದ್ದೆ, ಈಗಲೂ ಕೂಡ ಅವರಿಗೆ ತಮ್ಮ ಮುಖಾಂತರ ಪ್ರಾರ್ಥನೆ ಮಾಡುತ್ತೇನೆ. ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ದೇವರೇ ಅವರಿಗೆ ಈಗಲಾದರೂ ಸದ್ಬುದ್ಧಿಯನ್ನು ಕೊಡು ಎಂದು; ಅವರು ಯಾರು ಎಂಬ ಮಾತನ್ನು ನಂತರ ಹೇಳುತ್ತೇನೆ. ಇದು ಬೇಡ ಅಮಾಯಕರು, ನಿರಪರಾಧಿಗಳು, ಅವರು ಜೀವನದಲ್ಲಿ ಪಡುತ್ತಿರುವಂಥ ಪರಿಸ್ಥಿತಿಯನ್ನು ನೋಡಿದರೆ ಎಲ್ಲೆಲ್ಲಿ ಈ ಘಟನೆಗಳು ನಡೆದಿದೆ ಆದನ್ನು ಸಂಪೂರ್ಣ ವಿಶ್ಲೇಷಣೆ ಮಾಡುವಂತಹ ಹೃದಯ ಶ್ರೀಮಂತಿಕೆ ನಮ್ಮಲ್ಲಿ ಯಾರಿಗಾದರೂ ಇದ್ದರೆ ಈ ಒಂದು ವಿಚಾರದ ಅರಿವು ಸ್ಪಷ್ಟವಾಗುವುದೆಂದು ನಮಗೆ ಅರ್ಥವಾಗುತ್ತದೆ. ನಾವು ಇದರಿಂದ ಬಹಳ ದೂರವಿರಬೇಕು. ನಾವು ಮೊದಲೇ ಏನಾದರೂ ಚಿಂತನೆ ಮಾಡಿ ನಮ್ಮ ಕರ್ತವ್ಯ ಪ್ರಜ್ಞೆಯ ಮುಖಾಂತರ ಕಾರ್ಯಕ್ರಮವನ್ನು ರೂಪಿಸಿದರೆ ಆ ಕಾರ್ಯಕ್ರಮಗಳ ಐಕ್ಯತೆ ಧಾರ್ಮಿಕ ವಿಚಾರಧಾರೆಗಳು ಜಾತಿ ವಿಚಾರಧಾರೆಗಳು ಅದು ಸಂಪೂರ್ಣವಾಗಿ ಐಕ್ಯತೆ ಕಡೆಗೆ ಅದು ಬೆರಳನ್ನು ಮಾಡಿ ಎತ್ತಿ ತೋರಿಸುವಂತಹ ವಿಚಾರಧಾರೆಯಾಗಿ ಹೊರಮೂಡಿ ಬರುವಂತಹ ವಿಚಾರಧಾರೆಯಾಗಬೇಕು. ನಾನು ಈ ಒಂದು ಸದುದ್ದೇಶದಿಂದ ಈ

ಮಾತುಗಳನ್ನು ಆಡಿದ್ದೇನೆ. ನಾನು ಇದಕ್ಕೆ ನೀತಿ ಭ್ರಷ್ಟನಾಗಿ ಮಾತನಾಡಲಾರೆ. ರಾಷ್ಟ್ರದ ಮತ್ತು ರಾಜ್ಯದ ಹಿತವನ್ನು ಗಮನದಲ್ಲಿಟ್ಟು ಈ ಮಾತನ್ನು ಆಡಿದ್ದೇನೆ. ಇವತ್ತು ನೇರವಾಗಿ ಭದ್ರಾವತಿಯಲ್ಲಿ ನಡೆದಿರುವ ಘಟನೆಗಳಿಗೆ ಬರೋಣ, ಮಾನ್ಯ ಸಭಾಧ್ಯಕ್ಷರೇ, ಇದು ಎಂದಾದರೂ ತಡವಾಗಿಯಾದರೂ ಈ ವಿಚಾರ ಪ್ರಸ್ತಾಪಕ್ಕೆ ಬರಬೇಕಾಗಿತ್ತು ತಾವು ನನಗೆ ಇದರ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ತಮಗೆ ಅಭಿನಂದಿಸುತ್ತೇನೆ. ಇದರ ಸಂಪೂರ್ಣ ಫಲಿತಾಂಶ ಒಳ್ಳೆಯದಾಗಿ ಮೂಡಿ ಬರಲಿ ಎಂಬುದೇ ನನ್ನ ಆಸೆ. ಅದು ಬಿಟ್ಟರೆ ಇನ್ನಾವ ಆಸೆಯಿಟ್ಟು ನಾನು ಮಾತನಾಡುತ್ತಿಲ್ಲ. ಬೇರೆ ಯಾವ ರಾಜಕೀಯವು ನನಗೆ ಬೇಕಾಗಿಲ್ಲ. ನಮ್ಮ ರಾಜಕೀಯ ಜೀವನದಲ್ಲಿ ಒಂದು ನೀತಿಯನ್ನು ಅಳವಡಿಸಿಕೊಂಡು ಬಂದಮೇಲೆ ಅದನ್ನು ತೊರೆದು ನಾವು ಮತ್ತೊಂದು ನೀತಿಯನ್ನು ಅಳವಡಿಸಿಕೊಳ್ಳುವ ಸಂದರ್ಭ ನನಗಾಗಿ ಉಳಿದಿಲ್ಲ ಎಂಬ ಮಾತನ್ನು ಕೂಡ ಒಂದು ನೆನಪಿನ ವಿಚಾರವಾಗಿ ತಮ್ಮ ಮುಖಾಂತರ ಈ ಸದನದ ಮುಖಾಂತರ ರಾಜ್ಯದ ಜನತೆಯ ಗಮನಕ್ಕೆ ಕೂಡ ತರುತ್ತಿದ್ದೇನೆ. ಈ ಘಟನೆ ನಡೆದಿರುವುದಕ್ಕೆ ಇವತ್ತು ಕಾರಣರ್ಯಾರು ಎಂಬುದು ವಿಚಾರವಾಗಬೇಕು ಹಾಗೂ ತನಿಖೆಯಾಗಬೇಕು. ಅದು ಯಾವ ಕೀರ್ತಿಯಾಗಬೇಕು ಎಂಬುದನ್ನು ತಮಗೆ ಕೊನೆಯಲ್ಲಿ ಹೇಳುತ್ತೇನೆ. ಆದರೆ ಅಲ್ಲಿ ನಡೆದಿರುವಂತಹ ಘಟನೆಗಳು ಅನ್ಯಾಯವಾಗಿ ನಡೆದಿರುವಂಥಾದ್ದು. ಅದನ್ನು ಯಾರಾದರೂ ನೋಡಿಬಿಟ್ಟರೆ, ಮನಸ್ಸಿಗೆ ನೋವಾಗುತ್ತದೆ. ಇದು ಕಳೆದ ತಿಂಗಳು 21ನೇ ತಾರೀಖು ನಡೆದಿದೆ. ನಮ್ಮಲ್ಲಿ ಮುಸಲ್ಮಾನ್ ಭಾಂದವರು ಅಲ್ಪ ಸಂಖ್ಯಾತರು ಏನಿದ್ದಾರೆ. ಅವರಿಗೆ ರಾಜ್ಯಾಂಗ ಬದ್ಧವಾಗಿ ಅವರಿಗೆ ರಕ್ಷಣೆಯನ್ನು ಕೊಡಬೇಕು. They are to be given sufficient protection under the constitution of the country. ಈ ದೇಶದಲ್ಲಿ ರಾಜ್ಯಾಂಗವನ್ನು ಬಿಟ್ಟು ಜೀವನ ಮಾಡುವುದಕ್ಕೆ ಸಾಧ್ಯವಿಲ್ಲ. ಏತಕ್ಕಾಗಿ ನಾವು ರಾಜ್ಯಾಂಗವನ್ನು ತಂದಿದ್ದೇವೆ. ಡಾ.ಬಾಬಾ ಸಾಹೆಬ್ ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಈ ವಿಚಾರವನ್ನು ಇಡಬೇಕಾದರೆ ಮೊದಲೇ ಅವರು ಸಾಮಾಜಿಕವಾಗಿ ವಿಶೇಷವಾಗಿ ವಿಶ್ಲೇಷಣೆ ಮಾಡಿ ಇಟ್ಟಿದ್ದಾರೆ. ಇದಕ್ಕೆ ನಾವು ಸಂಪೂರ್ಣವಾಗಿ ರಕ್ಷಣೆ ಕೊಡದಿದ್ದರೆ ಬಹಳ ಕಷ್ಟವಾದೀತು, ಎನ್ನುವ ಮಾತು, ರಕ್ಷಣೆ ಕೊಡತಕ್ಕಂಥ ಸಂದರ್ಭದಲ್ಲಿ ಯಾವುದೇ ಜಾತಿ, ಧರ್ಮ, ಮತ ಒಂದು ನಂಬಿಕೆ ಇರತಕ್ಕಂಥ ಜನ due protection under the existing law ಅದನ್ನು ಅವರಿಗೆ ಕೊಡಬೇಕಾಂಥ ವಿಚಾರ ಕೂಡ ನಮಗೆಲ್ಲರಿಗೂ ಗೊತ್ತಿರತಕ್ಕಂಥದ್ದು. ಸಂವಿಧಾನದಲ್ಲಿ ಕೂಡ ರಿಲಿಜಿಯನ್ ಅಂಡ್ ಲಿಂಗ್ವಿಸ್ಟಿಕ್ ಮೈನಾರಿಟಿಯವರಿಗೆ ರಕ್ಷಣೆ ಕೊಡತಕ್ಕಂತಹ ವಿಚಾರ ಬರೆದಿತ್ತು ರಕ್ಷಣೆ ಕೊಡಬೇಕು ಎನ್ನುವಂತಹ ವಿಚಾರವನ್ನು ನಾವು ಆಡಿದಾಗ ಆಡಳಿತದಲ್ಲಿರತಕ್ಕಂತಹ ಯಾವುದೇ ಪಕ್ಷ ಇರಬಹುದು, ಅವರು ತಮ್ಮ ಕರ್ತವ್ಯವನ್ನು ಮಾಡದೇ ಇದ್ದರೆ ಆಗ ಕರ್ತವ್ಯಲೋಪ ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಅದಕ್ಕೆ ಎರಡು ರೀತಿಯ ದಂಡವನ್ನು ಒಂದು ಆಡಳಿತದಲ್ಲಿ ಇರತಕ್ಕಂತಹ ಒಂದು ಪಕ್ಷ ಅಥವಾ ವ್ಯಕ್ತಿಗಳು ತೆರಬೇಕಾಗುತ್ತದೆ. ತಕ್ಷಣ ಇರತಕ್ಕಂತಹ ಪರಿಸ್ಥಿತಿ ಒಂದಾದರೆ ಇನ್ನೊಂದು ರಾಜಕೀಯ. ಮುಂದೆ ಬರತಕ್ಕಂತಹ

ಚುನಾವಣೆಯಲ್ಲಿ ಅದರ ಪರಿಣಾಮ ಬಹಳ ವಿಶೇಷವಾಗಿ ತೊಂದರೆಯಾಗಿರತಕ್ಕಂತಹ ವಿಚಾರ ಧಾರೆಯ ಜೊತೆಯಲ್ಲಿ ಅದು ಫಲಿತಾಂಶದ ಜೊತೆಗೆ ಕೊಡುತ್ತದೆ ಎನ್ನುವ ಮಾತನ್ನು ಕೂಡ ನಾವು ಮರೆಯಬಾರದು. ಹಿಂದೆ ಕೂಡ ಇದೆಲ್ಲಾ ಬೇಕಾದಷ್ಟು ಸಲ ನಡೆದಿತ್ತು. ಇದು ನಮಗೆಲ್ಲಾ ಗೊತ್ತಿರತಕ್ಕಂತಹ ವಿಚಾರಗಳು. ಅದರೆ ಮಾನ್ಯ ಸಭಾಧ್ಯಕ್ಷರೇ, ಅವತ್ತು ಏನಾಯಿತು, ಕಳೆದ ತಿಂಗಳು 21ನೆ ತಾರೀಖು ನಡೆದಿರತಕ್ಕಂತಹ ಸಂದರ್ಭದಲ್ಲಿ ಮುಸಲ್ಮಾನ್ ಬಾಂಧವರು ಒಂದು ಧರ್ಮಕ್ಕೆ ಸೇರಿರತಕ್ಕಂಥವರು. ಅವರ ಮತ ಪದ್ಧತಿಯ ಪ್ರಕಾರ ಅಂದು ತಮಗೆ ಗೊತ್ತಿರುವ ಹಾಗೆ ಮೆರವಣಿಗೆಯನ್ನು ಅವರು ಮಧ್ಯಾಹ್ನದ ಮೇಲೆ ತೆಗೆದುಕೊಂದು ಹೋಗುತ್ತಿದ್ದರು. ಅದಕ್ಕೆ ಅವರು ಪರ್ಮಿಷನ್ ತೆಗೆದುಕೊಂಡಿದ್ದರು. ಅವರು ಈ ರೀತಿ ಹೋಗುತ್ತಿರುವುದು ಮೊದಲನೆ ಸಾರಿ ಅಲ್ಲ. ಪ್ರತಿ ವರ್ಷವೂ ಕೂಡ ಹೋಗುತ್ತಿದ್ದಾರೆ. ಅವರು ಹೋಗುವ ರೂಟ್ ಅನ್ನು ಕೂಡ ಪೊಲೀಸ್‌ನವರಿಗೆ ತಿಳಿಸಿದ್ದಾರೆ. ಎಲ್ಲಾ ರೀತಿಯ ಒಪ್ಪಿಗೆಯನ್ನು ಪಡೆದು ಅವರು ಮೆರವಣಿಗೆಯಲ್ಲಿ ಹೋಗಿರತಕ್ಕಂಥಾದ್ದು. ಅದು ಬಿಟ್ಟು ಬೇರೆ ದಾರಿಯಲ್ಲಿ ಹೋಗಿದ್ದರೆ ಅವರು ತಪ್ಪುಮಾಡಿದ್ದಾರೆ ಅದಕ್ಕೆ ಈ ರೀತಿ ನಡೆಯಿತು ಎನ್ನುವ ಮಾತನ್ನು ಯಾರಾದರೂ ಆಡಬಹುದಾಗಿತ್ತು. ಆದರೆ ಆ ವಿಚಾರವನ್ನು ಎಳಷ್ಟೂ ಕೂಡ ಯಾರೂ ಕೂಡ ಈವತ್ತಿನವರೆಗೆ ಎತ್ತಿಲ್ಲ. ಆ ವಿಚಾರ ನಮ್ಮ ಮುಂದೆ ಚರ್ಚೆಗೆ ಗ್ರಾಸವಾಗಿ ಕೂಡ ಉಳಿದಿಲ್ಲ. ನಮ್ಮ ಮುಂದಿರತಕ್ಕಂತಹ ಪ್ರಶ್ನೆ ಇಷ್ಟು; ಅವರು ಹೋಗಿರತಕ್ಕಂತಹ ಸಂದರ್ಭದಲ್ಲಿ ಅವರು ಶಾಂತಿಯುತವಾಗಿ ಹೋಗುತ್ತಿದ್ದರು ಎನ್ನುವ ಮಾತನ್ನು ಹೇಳುತ್ತಾರೆ. ಏಕೆಂದರೆ ಇಲ್ಲಿ ನಾನು ಆ ಅಧಿಕಾರಿಯ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. ವಿಚಾರಣೆ ಕಾಲಕ್ಕೆ ಅದರ ವಿವರಗಳು ಹೊರಗಡೆ ಬರಲಿ ಎನ್ನುವ ಒಂದು ಸದುದ್ದೇಶದಿಂದ ನಾನು ಆ ಅಧಿಕಾರಿಯ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. ನಾನು ಸಂಪರ್ಕ ಬೆಳಸಿದಾಗ ಅವರು ಅಲ್ಲಿ ಏನೇನೂ ತಪ್ಪು ಮಾಡಿರಲಿಲ್ಲ. ಅಂದು ಮೆರವಣಿಗೆ ಹೊಗತಕ್ಕಂತಹ ಕಾಲದಲ್ಲಿ ಆ ಧರ್ಮಕ್ಕೆ ಸೇರಿರತಕ್ಕಂತಹ ಜನ ಶಾಂತಿಯುತವಾಗಿ ಅವರವರಷ್ಟಕ್ಕೆ ಅಲ್ಲಾನ ಹೆಸರನ್ನು ಕೂಗಿಕೊಂಡು ಹೋಗುತ್ತಿದ್ದರು ಎನ್ನುವ ಮಾತನ್ನು ಕೂಡ ಅವರು ಹೇಳಿದರು. ಇದನ್ನು ಹೇಳಿರತಕ್ಕಂಥವರು ಅಧಿಕಾರಿ. ಅವರು ಆ ಧರ್ಮಕ್ಕೆ ಸೇರಿರುವವರು ಅಲ್ಲ. ಅವರೂ ಕೂಡ ಹಿಂದೂ ಧರ್ಮಕ್ಕೆ ಸೇರಿರತಕ್ಕಂಥವರು. ಪ್ರೀತಿ ವಿಶ್ವಾಸದಿಂದ, ಸಂತೋಷದಿಂದ ಅವರ ಜಾತಿ ಮತದ ಪದ್ಧತಿಯ ಪ್ರಕಾರ ಅವರವರೇ ಕೂಗಿಕೊಂಡು ಹೋಗುವಂತಾದ್ದು, ಏನಿದೆ, ಇದು ಹೊಸದಲ್ಲ. ಒಂದೇ ಬಾರಿಗೆ ಆಸಿಡ್ ಬಾಟಲ್ಸ್ ಬೀಳುತ್ತದೆ. ಆಗ ಮೆರವಣಿಗೆಯಲ್ಲಿ ಇರತಕ್ಕಂತಹ ಒಬ್ಬ ಮುಸ್ಲಿಂ ಬಾಂಧವ ನನ್ನ ಕಾಲಮೇಲೆ ಈ ರೀತಿ ಒಂದು ಬಾಟಲ್ ಬಿದ್ದಿದೆ ಎಂದು ಹೇಳಿ ಅದನ್ನು ಅಲ್ಲಿರತಕ್ಕಂತಹ ಡಿವೈಎಸ್‌ಪಿಯವರಿಗೆ ತೋರಿಸಿ ಅದನ್ನು ಅವರ ಕೈಗೆ ಕೊಟ್ಟಂತಹ ವಿಚಾರವನ್ನು ಕೂಡ ಅಲ್ಲಿ ಹೇಳಿದ್ದಾರೆ. ಇದು ಎಲ್ಲರ ಕಣ್ಣೆದುರಿನಲ್ಲಿಯೇ ಆಗಿದೆ ಅಷ್ಟರಲ್ಲಿ ಒಂದೆರಡು ಕಲ್ಲುಗಳು ಬೀಳುತ್ತವೆ, this is how the incident has triggered of that day, on the afternoon of 21st of last month.

ಇಷ್ಟೆಲ್ಲಾ ಆದತಕ್ಷಣ ಅವರನ್ನು ಅಲ್ಲಿಗೇ ಸಮಾಧಾನ ಮಾಡಿ, ಆಯಿತು ಇನ್ನು ಮೇಲೆ ಈ ರೀತಿ ನಡೆಯದ ಹಾಗೆ ನೋಡಿಕೊಳ್ಳುತ್ತೇವೆ ಎಂದು ಸಮಾಧಾನದಿಂದ ಮೆರವಣಿಗೆಯನ್ನು ತೆಗೆದುಕೊಂಡು ಹೋಗಿಬಿಟ್ಟಿದ್ದರು ಏನೂ ಕೂಡ ಆಗುತ್ತಿರಲಿಲ್ಲ. ಇದರಿಂದ ಸ್ಪಷ್ಟವಾಗಿ ಏನು ಗೊತ್ತಾಗುತ್ತದೆಯೊಂದರೆ ಇದು ಪ್ರೀ ಪ್ಲಾನ್ಡ್, ಆಗಿ ನಡೆದಿದೆ ಎಂದು ಇಲ್ಲಿ ರಾಜಕೀಯರ ಒಂದು ವಿಚಾರ ಕೂಡ ಅಡಗಿದ್ದು ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ವಾಗೇಶ್ ಎನ್ನುವ ಥಿಯೇಟರ್ ಹತ್ತಿರ ಇರುವಂತಹ ವಿಚಾರ ಧಾರೆ. ಅಲ್ಲಿ ಕೆಲವೇ ಕೆಲವು ಜನ ರಕ್ಷಣೆ ತೆಗೆದುಕೊಳ್ಳುವುದಕ್ಕೆ ಹೋದಾಗ ಸಿಕ್ಕಾಪಟ್ಟೆ ಗಲಾಟೆಯಾಗಿದೆ. ಸುಮಾರಾಗಿ ಒಟ್ಟು ನಷ್ಟವಾಗಿರತಕ್ಕಂಥಾದ್ದು, ನನಗೆ ಪಟ್ಟಿ ಸಿಕ್ಕಿರುವುದು ಇಷ್ಟು. ಇದರಲ್ಲಿ ಇನ್ನೂ ವ್ಯತ್ಯಾಸ ಕೂಡ ಬರಬಹುದು. ಈ ಅಂಕಿಅಂಶಗಳು ಕರಾರುವಾಕ್ಕು ಎಂದು ನಾನು ಹೇಳುವುದಿಲ್ಲ. ಏಕೆಂದರೆ ಪಟ್ಟಿ ಮಾಡುವುದಕ್ಕೆ ಕರ್ಫ್ಯೂ ಇದ್ದಂಥ ಜಾಗದಲ್ಲಿ ಹೋದರೆ ನಮಗೆ ಸಂಪೂರ್ಣ ಮಾಹಿತಿ ಪಡೆಯುವುದಕ್ಕೆ ಕೂಡ ಆಗಲ್ಲ. House looted and burnt about 83. ನನಗೆ ಸಿಕ್ಕಿದ್ದು ಸುಮಾರು ನೂರಕ್ಕೆ ಹತ್ತಿರ ಹೋಗಿದೆ. ಮತ್ತು ಲೂಟಿ ಆಗಿರತಕ್ಕಂತಹ ವಿಚಾರದಲ್ಲಿ ಒಂದು ಮಾತು. ಇಲ್ಲಿ ಕೇವಲ ಮುಸ್ಲಿಂ ಜನಾಂಗದವರಿಗೆ ಹಾನಿಯಾಗಿದೆ ಎಂದು ನಾನು ಹೇಳಲಾರೆ. ಹಿಂದೂಗಳಿಗೂ ಸಹ ಆಗಿದೆ. ಆದರೆ ಹಿಂದೂಗಳಿಗೆ ಸ್ವಲ್ಪ ಕಡಿಮೆಯಾಗಿದೆ. ಮುಸ್ಲಿಮರಿಗೆ ಸಿಕ್ಕಾಪಟ್ಟೆ ಆಗಿದೆ. ಈ ವರದಿ ನಮ್ಮದೂ ಅಲ್ಲ. ನಿಮ್ಮ ಅಧಿಕಾರಿಗಳ ಸಂಪೂರ್ಣವಾಗಿರತಕ್ಕಂತಹ ಅಫಿಷಿಯಲ್ ವರದಿ. House looted & burnt about 83 to 100 Esimated loss. ಎಷ್ಟು ಅಂದರೆ 37 ಲಕ್ಷದ 60 ಸಾವಿರ ಸುಮಾರು ಸ್ವಲ್ಪ ಹೆಚ್ಚುಕಡಿಮೆ 40 ಲಕ್ಷ ಎಂದು ಇಟ್ಟುಕೊಳ್ಳಿ; shops looted and burnt about 140, subject to verification of these numbers.

ಇದು 1 ಕೋಟಿ 30 ಲಕ್ಷ ಚಿಲ್ಲರೆ, ಅದು ಎಷ್ಟೋ ರೂಪಾಯಿಗಳು ಎಂದು ಹಾಕಿದ್ದಾರೆ, ವಾಹನಗಳು, ಲಾರಿಗಳು 8, ಬಸ್ಸುಗಳು 3, ಸೈಕಲ್‌ಗಳು 300, ಜೀಪ್ 3, ಮೆಟಡಾರ್ 1, ಕಾರುಗಳು 3, ದ್ವಿಚಕ್ರ ವಾಹನಗಳು 60, ಒಟ್ಟು 41 ಲಕ್ಷದ 10 ಸಾವಿರ ರೂಪಾಯಿಗಳ ಅಂದಾಜಿನ ನಷ್ಟ. ನಾಲ್ಕು ಮಸೀದಿಗಳಿಗೆ ಡ್ಯಾಮೇಜಾಗಿದೆ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ 4, ಉರ್ದು ಶಾಲೆಗಳು 4, ಇವೆಲ್ಲವೂ ಕೂಡ ಎರಡೂವರೆ ಲಕ್ಷ, ಒಂದು ಲಕ್ಷ, ಒಂದೂವರೆ ಲಕ್ಷ. ಆಮೇಲೆ ಸತ್ತಿರತಕ್ಕಂತದ್ದು ನನಗೆ ಬಂದಿರತಕ್ಕ ವರದಿ ಪ್ರಕಾರ 4, ಸರ್ಕಾರಿ ಹೇಳಿಕೆ ಪ್ರಕಾರ 2, ಏನೋ ಆ ರೀತಿ ಹೇಳಿಕೆಯನ್ನು ಇವರು ಕೊಟ್ಟಿದ್ದಾರೆ. ಗಾಯಾಳುಗಳು 6, 1 ಲಕ್ಷದಂತೆ ಎರಡು ಜನಕ್ಕೆ ಮಾತ್ರ ಪರಿಹಾರ ಕೊಟ್ಟಿದ್ದಾರೆ. ಅನಂತರ ಬಂಧಿತ ಜನರಲ್ಲಿ ಮುಸ್ಲಿಂ ಜನಾಂಗದವರು 160, ಅವರನ್ನು ಹೊರತುಪಡಿಸಿ ಬೇರೆ ಎಲ್ಲರನ್ನೂ ಸೇರಿಸಿ 100. ಅದು ಎಷ್ಟು ಜನ ಎಂದು ಈಗಲೂ ಕೂಡ ಗೊತ್ತಾಗಿಲ್ಲ, ಇದರಲ್ಲಿ ಸುಮಾರು 500 ರಿಂದ 600 ವರೆಗೆ ಇರಬಹುದು. ತನಿಖೆಯಿಂದ ಅದೆಲ್ಲವೂ ಕೂಡ ಹೊರ ಬರುತ್ತದೆ. ಇದರಲ್ಲಿ ಬಿಡುಗಡೆ ಹೊಂದಿದ ಮುಸ್ಲಿಂ ಜನರು 33 ಮತ್ತು ಅವರನ್ನು ಹೊರತುಪಡಿಸಿ ಬಿಡುಗಡೆ ಮಾಡಿದ ಜನರು 50. ಇಲ್ಲಿ ಅಂಕಿ ಅಂಶ ಸ್ವಲ್ಪ ವ್ಯತ್ಯಾಸ ಆಗಬಹುದು ಎಂಬ ಮಾತನ್ನು ತಮಗೆ ನಾನೀಗ

ಹೇಳಿದ್ದೇನೆ. ಮೈಸೂರಿನಿಂದ ಬಂದಿರತಕ್ಕ ಒಬ್ಬ ಮುಸ್ಲಿಂ ಹುಡುಗ a muslim boy, he was doing his ATS course; ಕೆಲವು miscreants ಸೇರಿ ಅವನನ್ನು ಹೊಡೆದುಹಾಕಿದ್ದಾರೆ. ಅವನು ಸತ್ತುಹೋದ. Hindu boy was killed in police firing. ಅವನು ಸತ್ತುಹೋದ. ಅಮೇಲೆ ಕರ್ಫ್ಯೂ ಹಾಕಿದ್ದಾರೆ. ಸುಮಾರಾಗಿ ಈ ಲೂಟಿ ಆಗಿರತಕ್ಕ ಅಂಗಡಿಗಳು ಮತ್ತೆನಿದ್ದಾವೆ ಅಫಿಷಿಯಲ್ ವರದಿ ಪ್ರಕಾರ about 95% they belong to muslim minorities. ಇದು ಎಲ್ಲರಿಗೂ ಗೊತ್ತಿರತಕ್ಕಂತದ್ದು. ಅದೇ ರೀತಿಯಾಗಿ ಭದ್ರಾವತಿ ನಗರದ ಪಕ್ಕದಲ್ಲಿರತಕ್ಕಂತ ಬಂದಾರಳ್ಳಿ, ಮಾವಿನಕೆರೆ, ದೊಡ್ಡೇರಿ, ಮತ್ತು ಉಳಿದಿರತಕ್ಕ ಸಣ್ಣಪುಟ್ಟ ಅನೇಕ ಗ್ರಾಮಗಳಿಗೂ ಕೂಡ ಇವೆಲ್ಲಾ ಹರಡಿದ್ದಾವೆ. ಇಲ್ಲಿ ಹರಡುವುದಕ್ಕೆ ಏನು ಕಾರಣ ಅನ್ನುವ ವಿಚಾರ, ಯಾರು ಕಾರಣ ಎಂಬುದನ್ನೂ ಕೂಡ ನಾನು. ಆಮೇಲೆ ಹೇಳುತ್ತೇನೆ. ಇಲ್ಲಿ ತಮಗೆಲ್ಲಾ ಗೊತ್ತಿರುವ ಹಾಗೆ ಪೋಲೀಸರಲ್ಲಿ ಹಿಂದುಗಳಿರುತ್ತಾರೆ, ಮುಸ್ಲಿಂ ಇರುತ್ತಾರೆ, ಮತ್ತೊಬ್ಬರು ಇರುತ್ತಾರೆ. ಒಬ್ಬ ಜಮೀಲ್ ಅನ್ನತಕ್ಕ ಸರ್ಕಲ್ ಇನ್‌ಸ್ಪೆಕ್ಟರ್; ಅವರು ಮನೆ ಹೆಣ್ಣುಮಕ್ಕಳನ್ನು man handle ಮಾಡಿದ್ದಾರೆ, and she was molested ವಾಗೇಶ್ ಆ ಹೆಣ್ಣುಮಕ್ಕಳು ರಕ್ಷಣೆ ತೆಗೆದುಕೊಳ್ಳುವುದಕ್ಕೆ ಹೋದರೆ they were also beaten well inside that Vagesh theatre. ಇದೂ ಕೂಡ ಎಲ್ಲರಿಗೂ ಗೊತ್ತಿರತಕ್ಕಂತದ್ದು ಇದಲ್ಲದೆ ನನಗೆ ಒಂದು ಸಂತೋಷದ ವಿಚಾರ ಏನು ಅಂದರೆ, ಈ ತರಹದ ಘಟನ ನಡೆದಾಗ ಅಕ್ಕಪಕ್ಕದ ಹಳ್ಳಿಗಳಿಗೆ ಮುಸ್ಲಿಂ ಜನ ಹೆದರಿ ಓಡಿಹೋಗಿಬಿಟ್ಟಿದ್ದಾರೆ, ಹಿಂದೂಗಳು ತಮ್ಮ ಮನೆಯಲ್ಲಿ ಮುಸ್ಲಿಂ ಬಾಂಧವರಿಗೆ ರಕ್ಷಣೆ ಕೊಟ್ಟಿದ್ದಾರೆ; ಅದನ್ನು ಮುಸ್ಲಿಂ ಬಾಂಧವರೇ ಹೇಳಿರತಕ್ಕ ಮಾತು. ನನ್ನ ಎದುರಿಗೆ ಹೇಳಿದ ಮಾತಿನಿಂದ ನನಗೆ ಎಷ್ಟು ಸಂತೋಷವಾಗುತ್ತದೆ ಅಂದರೆ ನಿಜವಾಗಲೂ ಹಿಂದೂ ಮತ್ತು ಮುಸ್ಲಿಂರಿಗೆ ಯಾವುದೇ ಗಲಾಟೆ ಬೇಕಾಗಿಲ್ಲ ಗಲಾಟೆ ಆದಾಗ ಅಲ್ಲಿ ಗಂಡಸರಿಗೆ, ಹೆಂಗಸರಿಗೆ, ಹೆಣ್ಣುಮಕ್ಕಳಿಗೆ ರಕ್ಷಣೆ ಕೊಡುವ ಕೆಲಸ ಮಾಡದೆ ಇದ್ದಿದ್ದರೆ ಇನ್ನೂ ಅನೇಕ ಜನರನ್ನು ಕೊಂದು ಹಾಕಿಬಿಡುತ್ತಿದ್ದರು ಎನ್ನತಕ್ಕಂಥ ಮಾತನ್ನೂ ಕೂಡ, ಮುಸಲ್ಮಾನ್ ಪಂಥಕ್ಕೆ ಸೇರಿರತಕ್ಕಂಥ ಬಾಂಧವರು ಹೇಳತಕ್ಕದ್ದರಲ್ಲಿ ಬಹಳ ಅರ್ಥ ಇದೆ. ಆದ್ದರಿಂದ ಇದು ಹಿಂದೂ ಮುಸಲ್ಮಾನ್ ವರ್ಗಗಳಿಗೆ ಸೇರಿರತಕ್ಕ ಎಲ್ಲಾ ಜನರ ಜಗಳ ಅಲ್ಲ, ಇದು ಕೆಲವರಿಗೆ ಮಾತ್ರ ಬೇಕಾಗಿರತಕ್ಕಂಥ ಒಂದು ಕೋಮಿನ ವಿಚಾರ ಎಂಬ ಮಾತನ್ನು ಅನಿವಾರ್ಯವಾಗಿ ಹೇಳಬೇಕಾಗಿದೆ. ಇವತ್ತು ಏನಾಗಿದೆಯೆಂದರೆ, ತಮಗೆಲ್ಲಾ ಗೊತ್ತಿರುವ ಹಾಗೆ ಡೆಪ್ಯೂಟಿ ಪೋಲೀಸ್ ಸೂಪರಿಡೆಂಟ್ ಪೊಲೀಸ್ ಆಫೀಸ್ ಏನಿದೆ ಅಲ್ಲಿಂದ ಸುಮಾರು 400 ಮೀಟರ್ ದೂರದಲ್ಲೇ ಅನೇಕ ಮನೆಗಳು ಲೂಟಿಯಾಗಿವೆ, ಅ ಮುಸ್ಲಿಂ ಸರ್ಕಲ್ ಇನ್‌ಸ್ಪೆಕ್ಟರ್ ಜಮೀಲ್ ಎನ್ನತಕ್ಕಂಥವರ ಮನೆಯೂ ಕೂಡ ಲೂಟಿಯಾಗಿ ಒಂದು ಸಾಮಾನು ಕೂಡ ಉಳಿದಿಲ್ಲ. ಮನೆಗಳ, ಅಂಗಡಿಗಳ ಸಾಮಾನುಗಳನ್ನೆಲ್ಲಾ ಸಂಪೂರ್ಣವಾಗಿ ಹೊರಗಡೆ ತೆಗೆದುಕೊಂಡು ಬರುವುದು, ಬೆಂಕಿ ಹಚ್ಚುವುದು ಇಲ್ಲವೇ ತೆಗೆದುಕೊಂಡು ಹೋಗುವುದು ಹೀಗೆ ಎಲ್ಲಾ ಸೇರಿ ಕಂಪ್ಲೀಟ್ ಆಗಿ ಮುಗಿಸಿದ್ದಾರೆ. ಇದಲ್ಲದೆ 29-8-94ರ ಡೆಕನ್ ಹೆರಾಲ್ಡ್ ಪತ್ರಿಕೆಯನ್ನು ತಾವು ಓದಿ ನೋಡಬಹುದು; 530 ಫ್ಯಾಮಿಲೀಸ್ ಒಟ್ಟು ಅಫೆಕ್ಟ್ ಆಗಿವೆ

ಎಂಬುದು ಅದರಲ್ಲಿ ವರದಿಯಾಗಿದೆ. ಟೋಟಲ್ ಎಷ್ಟು ಡಿಸ್ಟ್ರಕ್ಷನ್ ಆಗಿದೆ ಎಂಬ ಮಾತು ಸಹ ಇದೆ. Unofficially about 800 families were completely affected on account of this Bhadravathi incident ಎಂಬುದು ಸ್ಪಷ್ಟವಾಗಿ ನಮಗೆಲ್ಲಾ ಗೊತ್ತಿರತಕ್ಕದ್ದು. ಇದಲ್ಲದೆ, ಮುಸೀದಿಯಲ್ಲಿರತಕ್ಕ ಹೋಲಿ ಖುರಾನ್ ಡ್ಯಾಮೇಜ್ ಮಾಡಿರತಕ್ಕ ಕಾಲದಲ್ಲಿ ರಿಲಿಜಿಯಸ್ ಬುಕ್ಸ್ ಎಲ್ಲಾ ಸುಟ್ಟು ಹಾಕಿದ್ದಾರೆ. ಇವತ್ತು ಒಬ್ಬಿಬ್ಬರು ಗಲಾಟೆ ಮಾಡಿಕೊಂಡಿದ್ದರೆ ಆ ಪ್ರಶ್ನೆ ಬೇರೆ ಇತ್ತು. ಖುರಾನೆ ಸುಟ್ಟು, ಮತ್ತೊಂದೆಲ್ಲಾ ಹಾಳು ಮಾಡುವುದಕ್ಕೆ ಏನು ಕಾರಣ? ಇದಕ್ಕೆ ಯಾರು ಕಾರಣ? ಇದನ್ನು ನಾವು ವಿಚಾರ ಮಾಡಬೇಕಾಗಿದೆ. ಸಾಮಿಲ್‌ಗಳೆಲ್ಲಾ ಹೊರಟು ಹೋಗಿದ್ದಾವೆ ಮನೆಯಲ್ಲಿರತಕ್ಕ ಟಿ.ವಿ. ಸೆಟ್ಟುಗಳು, ಬೇರೆ ಎಲ್ಲಾ ಸಾಮಾನುಗಳು ಸಂಪೂರ್ಣವಾಗಿ ಹಾಳಾಗಿವೆ. ಇದು ಸಂಪೂರ್ಣವಾಗಿ ನಮಗೆ ಗೊತ್ತಿರತಕ್ಕದ್ದು. ಅಧ್ಯಕ್ಷರೇ, ನಾನು ತಮ್ಮ ಗಮನಕ್ಕೆ ತರತಕ್ಕದ್ದು ಇವತ್ತು ಸಂಪೂರ್ಣವಾಗಿ ಅಲ್ಲಿರತಕ್ಕ ಪೊಲೀಸ್ ಇಲಾಖೆ ಸರಿಯಾದ ನಿರ್ದೇಶನ ಕೊಟ್ಟು ಸಿಚ್ಯುಯೇಷನ್ ಕಂಟ್ರೋಲಿಗೆ ತರತಕ್ಕ ವಿಚಾರದಲ್ಲಿ ಜಾಗ್ರತೆ ವಹಿಸಿದ್ದರೆ ಇದು ಆಗುವುದಕ್ಕೆ ಕಾರಣ ಇರಲಿಲ್ಲ. ನಾನು ಕೇಳುತ್ತಿದ್ದೇನೆ, ಈ ಸರ್ಕಾರ ಏನು ಮಾಡುತ್ತಿತ್ತು? ನಿಮ್ಮ Intelligence wing of the State Government, what was it doing?

**4.00 ಪಿ.ಎಂ**

ಇಷ್ಟೆಲ್ಲಾ ಗಲಾಟೆ ಆಗತಕ್ಕ ವಿಚಾರ ಮತ್ತೊಂದು ಸಿದ್ಧತೆ ಎಲ್ಲಾ ಮಾಡಿಕೊಂಡು ಹಾಳು ಮಾಡಬೇಕೆಂಬ ವಿಚಾರ ಎಲ್ಲವನ್ನೂ ಅಲ್ಲಿನ ಜನರು ಓಪನ್ ಆಗಿ ಹೇಳತಕ್ಕ ಸಂದರ್ಭಗಳಿದ್ದಾಗ ಇಂಟಲಿಜೆನ್ಸ್ ವಿಂಗ್‌ನವರು ಏನು ಮಾಡುತ್ತಿದ್ದರು? ನೀವು ಅಲ್ಲ ಪೊಲೀಸ್ ಅಧಿಕಾರಿಗಳಿಗೆ ರಕ್ಷಣೆ ಕೊಡಬೇಕೆಂಬ ವಿಚಾರವನ್ನು ಹೇಳಿ, ಜನರು ಕೊತಿದ್ದರೆ ನಾವು ಏನು ಮಾಡೋಣ ಪೊಲೀಸ್ ಇಲ್ಲ. ಪೊಲೀಸ್ ಕೇಳಿದರೆ ನಮಗೆ ಜಾಸ್ತಿ ಪೊಲೀಸ್ ಕೊಡಬೇಕಲ್ಲ. ಅವರು ಹೆಚ್ಚಿನ ಪೊಲೀಸ್ ಕೊಡದಿದ್ದರೆ ನಾವು ರಕ್ಷಣೆ ಕೊಡುವುದಕ್ಕಾಗುವುದಿಲ್ಲವೆಂಬ ಮಾತನ್ನು ಸ್ಥಳೀಯ ಪೊಲೀಸರು ಹೇಳುವ ಮಟ್ಟಕ್ಕೆ ಹೋದರೆ, ಜಿಲ್ಲಾ ಪೋಲೀಸರು ಹೇಳುವ ಮಟ್ಟಕ್ಕೆ ಹೋದರೆ ನಾನು ಅಧ್ಯಕ್ಷರ ಮೂಲಕ ಕೇಳುವುದು, ಈ ಸರ್ಕಾರ ಏನು ಮಾಡುತ್ತಿತ್ತು? ಇವರ ಇಂಟೆಲಿಜೆನ್ಸ್ ವಿಂಗ್ ಏನು ಮಾಡುತ್ತಿತ್ತು? ನೀವು ಏತಕ್ಕೆ ಕಾರ್ಯಕ್ರಮ ಹಾಕಲಿಲ್ಲ? ಪೊಲೀಸ್ ಸಿಬ್ಬಂದಿಯನ್ನು ಜಾಸ್ತಿ ಏಕೆ ಭದ್ರಾವತಿಗೆ ಕಳುಹಿಸಿಕೊಡಲಿಲ್ಲವೆಂದು ಈ ಸಂದರ್ಭದಲ್ಲಿ ನಾನು ತಮ್ಮನ್ನು ಕೇಳುತ್ತೇನೆ. ಇದರಿಂದ ಏನು ತೋರಿಸುತ್ತದೆಂದರೆ ಇದು ಪ್ಲಾನ್ಡ್ ಅಟ್ಯಾಕ್ ಎಂದು ಸ್ಪಷ್ಟವಾಗಿ ಉದ್ದಕ್ಕೂ ಗೊತ್ತಾಗಿದೆ. ಇವತ್ತು ಕೆಲವು ಪೋಟೋಗಳು ನನ್ನ ಹತ್ತಿರ ಇವೆ. ಅವನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ಈ ಫೋಟೋ ನೋಡಿದರೆ ಒಂದು ಕಡೆ ಒಂದು ಸಾಮಾನು ಸಹ ಬಿಡದೆ ಸಂಪೂರ್ಣವಾಗಿ ನಾಶ ಮಾಡಿರತಕ್ಕದ್ದು ಇದರಲ್ಲಿ ವೇದ್ಯವಾಗುತ್ತದೆ. ಇದಲ್ಲದೆ, ಕಾಂಪನ್‌ಸೇಷನ್ ಯಾವ ರೀತಿ ಕೊಟ್ಟಿದ್ದಾರೆ ಅಂದರೆ ಒಂದು ಮನೆ ಹೋದರೆ 200 ರೂಪಾಯಿಗಳು ಎಂದು ಕೊಟ್ಟಿದ್ದಾರೆ. Houses totally burnt with all the

articles inside, ಇಲ್ಲ ಚೆಕ್ಕಿನ ಜೆರಾಕ್ಸ್ ಕಾಪಿ ನನ್ನ ಹತ್ತಿರ ಕೂಡ ಇದೆ. ಇವತ್ತು ನಾಚಿಕೆಯಾಗಬೇಕು ಈ ಸರ್ಕಾರಕ್ಕೆ. ದೊಡ್ಡ ದೊಡ್ಡ ಮನೆ ಹೋದುದ್ದಕ್ಕೆ ಕೇವಲ 200 ರೂಪಾಯಿಗಳನ್ನು ಕೊಟ್ಟಿದ್ದೀರಿ. ಡ್ಯಾಮೇಜ್ ಆದದ್ದು ಸಾವಿರಗಟ್ಟಲೆ. 8 ಸಾವಿರ ರೂಪಾಯಿಗಳ ಚೆಕ್ ಕೊಟ್ಟಿದ್ದೀರಿ. ಅವರಿಗೆ 2ರಿಂದ 3 ಲಕ್ಷ ರೂಪಾಯಿಗಳು ನಷ್ಟವಾಗಿದೆ. ಒಟ್ಟು 20 ಸಾವಿರ ರೂಪಾಯಿಗಳನ್ನು ನೀವು ಕಾಂಪನ್‌ಸೇಷನ್ ಕೊಡಬೇಕೆಂದು ಇಟ್ಟಿದ್ದೀರಿ. ನಾನು ಹೇಳತಕ್ಕದ್ದು ಇಷ್ಟು; ನಾನು ಮುಖ್ಯ ಮಂತ್ರಿ ಇದ್ದ ಕಾಲದಲ್ಲಿ ಸ್ಪಷ್ಟವಾಗಿ ತೀರ್ಮಾನ ಮಾಡಿದ್ದೆ. ಕಾಂಪನ್‌ಸೇಷನ್ ಮ್ಯಾಕ್ಸಿಮಂ ಲಿಮಿಟ್ ಏನಿದೆ ಅದನ್ನು ತಕ್ಷಣ ಕೊಡಬೇಕು, ಲೇಟ್ ಮಾಡಬಾರದು ಎಂದು ಮಹಜರ್ ಡ್ರಾ ಅಪ್ ಮಾಡಬೇಕಾದರೆ ಅನ್ಯಾಯವಾಗಿದೆ ಎಂದು ಬೇಕಾದಷ್ಟು ಮನವಿಗಳನ್ನು ಕಳುಹಿಸಿಕೊಟ್ಟಿದ್ದಾರೆ, ಸರ್ಕಾರಕ್ಕೆ ಕೊಟ್ಟಿದ್ದಾರೆ, ಸಚಿವರನ್ನು ಕಂಡಿದ್ದಾರೆ, ಮುಖ್ಯ ಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದಾರೆ. ಇನ್ನು ಏನು ಮಾಡಬೇಕು? ನಾನು ಬರೀ ಮುಸ್ಲಿಂ ಬಾಂಧವರ ಪರವಾಗಿ ಮಾತನಾಡುತ್ತಿಲ್ಲ. ಹಿಂದೂಗಳು ಇರಬಹುದು ಮತ್ತೊಬ್ಬರು ಇರಬಹುದು. ಮುಸ್ಲಿಮರ ಪರವಾಗಿ ಹೆಚ್ಚಿಗೆ ಹೇಳಬೇಕಾಗುತ್ತದೆ. ಏಕೆಂದರೆ, 95% of total destructed houses, shops, they belonged to the muslim minorities.

ನಾನು ಹೇಳತಕ್ಕ ಸಂದರ್ಭದಲ್ಲಿ, ಹಿಂದೂಗಳಿಗೆ ಅನ್ಯಾಯವಾಗಿ ಹೋದರೆ ಹೋಗಬೇಕೆಂದು ಯಾರೂ ಹೇಳುವುದಿಲ್ಲ. ಆ ಕಾಂಪನ್‌ಸೇಷನ್ ಅವರಿಗೂ ಕೊಡಿ ಅವರು ಬೋತ್ ಬ್ರದರ್ಸ್ ಅಂಡ್ ಸಿಸ್ಟರ್ಸ್ ಆಗಿ ಜೀವನ ಮಾಡತಕ್ಕ ಸಂದರ್ಭದಲ್ಲಿ ಕೇವಲ 8 ಸಾವಿರ ರೂಪಾಯಿ ಚೆಕ್ ಕೊಟ್ಟಿದ್ದಾರೆ. ಅಲ್ಲಿ 2-3 ಲಕ್ಷ ರೂಪಾಯಿ ನಷ್ಟವಾಗಿದೆ. ಮಹಜರ್ ಸರಿಯಾಗಿ ಆಗಿಲ್ಲ. ನಾನು ಮುಖ್ಯ ಮಂತ್ರಿ ಇದ್ದಾಗ ಅಧಿಕಾರ ತೆಗೆದುಕೊಳ್ಳುವುದಕ್ಕೆ ಮುಂಚೆ ದಾವಣಗೆರೆಯಲ್ಲಿ ಇದೇ ರೀತಿ ಗಲಾಟೆ ನಡೆದಿತ್ತು, ಜನರು ಸತ್ತಿದ್ದರು. ನಾನೇ ಸ್ಪಾಟಿಗೆ ಹೋಗಿ ಬಂದ ಸಂದರ್ಭದಲ್ಲಿ ಕೂಡಲೇ ಕ್ಯಾಬಿನೆಟ್ ತೀರ್ಮಾನ ಮಾಡಿದ್ದೇವೆ. ಏನು ಮಾಡಿದ್ದೇವೆಂದರೆ, ಮಹಜರ ಅನ್ನು ರೀಡ್ರಾ ಅಪ್ ಮಾಡಬೇಕು, ಯಾವ ಯಾವ ಸಾಮಾನುಗಳು ಎಲ್ಲೆಲ್ಲಿ ಏನೇನು ಹೋಗಿವೆ ಆ ಮನೆ ಮಾಲೀಕರು ಒಬ್ಬ ಲೇಡಿ ಇರಬಹುದು, ಜಂಟ್ಸ್ ಇರಬಹುದು, ಯಾರೇ ಇರಬಹುದು. ಅವರನ್ನು ಕರೆಸಿ ಎಷ್ಟು ಏನು ಎಂದು ಕೇಳಬೇಕು. ನಾಲ್ಕು ಸಾಮಾನು ವ್ಯತ್ಯಾಸ ಹೇಳಿದರು ಎಂದು ಇಟ್ಟುಕೊಳ್ಳೋಣ, while giving compensation Government should be liberal.

ಈ ಮಾತನ್ನು ಶಾಸನಸಭೆಯಲ್ಲಿ ನಾನು ಮುಖ್ಯ ಮಂತ್ರಿಯಾಗಿದ್ದಾಗ ಹೇಳಿದ್ದು ರೆಕಾರ್ಡ್‌ನಲ್ಲಿ ಕೂಡ ಇದೆ. ಏಕೆ ನಿಮ್ಮ ಬಾಯಲ್ಲಿ ಬರುತ್ತಿಲ್ಲ? ಇಲ್ಲಿ ಮಹಜರ್‌ನಲ್ಲಿ ಕಂಪ್ಲೀಟ್ ಆಗಿ ವ್ಯತ್ಯಾಸ ಮಾಡಿದ್ದಾರೆ. ಡೆಪ್ಯೂಟಿ ಕಮಿಷನರ್ ಇನ್‌ಸ್ಟ್ರಕ್ಷನ್ ಏನೆಂದರೆ, ಇಷ್ಟೇ ಇರಬೇಕು, ಇದರ ಮೇಲೆ ಹೋಗಬಾರದು ಎಂದು; ಏತಕ್ಕೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇವತ್ತು ಯಾರಾದರೂ ಲೂಟಿ ಮಾಡಿಕೊಂಡು ಹೋದರೆ ಸಂಬಂಧ ಇಲ್ಲ. ಏಕೆ ಸ್ವಾಮಿ? ನಾವು ಹಿಂದೆ ಕೊಟ್ಟಿರತಕ್ಕದ್ದು ಏನೂ ಇಲ್ಲವೇನು? ಲೂಟಿ ಆರ್ಸನ್ ಯಾವುದು ಇದ್ದರೂ ಕೂಡ ಸಂಪೂರ್ಣವಾಗಿ ಆಗಿರತಕ್ಕದ್ದಕ್ಕೆ ನಾವೇ ಸಂಪೂರ್ಣವಾಗಿ ಕಾಂಪನ್‌ಸೇಷನ್ ಕೊಟ್ಟಿರತಕ್ಕ

ಉದಾಹರಣೆಗಳಿವೆ. ಕರ್ನಾಟಕದ ಜಿಲ್ಲೆಗಳಲ್ಲಿ ಎಲ್ಲೆಲ್ಲಿ ನಡೆದರೂ ಕೂಡ ನಾವು ಕಾಂಪನ್‌ಸೇಷನ್ ಕೊಟ್ಟಿದ್ದೇವೆ. ಜೊತೆಗೆ ಅಪ್ಪರ್ ಲಿಮಿಟ್ ಇದ್ದಾಗ ನಾವು ಏನು ಮಾಡಿದ್ದೇವೆಂದರೆ interest-free loans to the house owners or shop owners..

ಅವರಿಗೆ ಕೊಡತಕ್ಕ ಕೆಲಸವನ್ನು ನಾವು ಕ್ಯಾಬಿನೆಟ್ ತೀರ್ಮಾನದ ಪ್ರಕಾರ ಮಾಡಿದ್ದೇವೆ. ಇವತ್ತು ಮಹಜರ್ ರೀಡ್ರಾಪ್ಟ್ ಮಾಡದೆ ಇವೆಲ್ಲಾ ಬರುವುದಿಲ್ಲ. --- ಎಷ್ಟು ಎಂದು ಕೊಡುತ್ತೀರಿ? ಹೇಗೆ ಅಸೆಸ್ ಮಾಡುತ್ತೀರಿ ನೀವು? ಇದನ್ನೆಲ್ಲಾ ಮಾಡದಿದ್ದರೆ ಸಂಪೂರ್ಣವಾಗಿ ಅಲ್ಲಿ ಅನ್ಯಾಯವಾಗಿ ಕಳೆದು ಕೊಂಡಿರತಕ್ಕವರಿಗೆ ಹಣ ಕೊಟ್ಟಾಕ್ಷಣ ರಿಪೇರಿ ಮಾಡುವುದಕ್ಕಾಗುವುದಿಲ್ಲ. ಹಣ ಕೊಟ್ಟಾಕ್ಷಣ ಎಲ್ಲಾ ಸಾಮಾನುಗಳು ಬಂದು ಬಿಡುವುದಕ್ಕಾಗುವುದಿಲ್ಲ. again to bring the house in order or a shop in order it is not that easy. It is not the only money that is going to help the owner of the House or the shop concerned. ಅವನಿಗೆ ಮೊದಲು ಮೆಂಟಲ್ ಸ್ಟೆಬಿಲಿಟಿ ಕೊಡಬೇಕು, ಧೈರ್ಯ ಕೊಡಬೇಕು. ಹಣವನ್ನು ಕೊಟ್ಟು ಧೈರ್ಯ ಕೂಡ ತುಂಬಬೇಕು ಆಗ ಮಾತ್ರ. Here is a Government it has to come to help.

ಎಂಬ ತೀರ್ಮಾನಕ್ಕೆ ಆ ಒಬ್ಬ ವ್ಯಕ್ತಿ ಅಲ್ಲಿ ಬರುತ್ತಾನೆ. ಈ ದೃಷ್ಟಿಯಿಂದ ಈ ಚೆಕ್‌ಗಳನ್ನು ನಾನು ನಿಮಗೆ ಕಳುಹಿಸಿಕೊಡುತ್ತೇನೆ. ಫೋಟೋ ಕಳುಹಿಸಿಕೊಡುತ್ತೇನೆ. ಆಗಿರತಕ್ಕ ಅನ್ಯಾಯವನ್ನು ನೀವು ನೋಡಿದರೆ ನಿಮಗೆ ಗೊತ್ತಾಗುತ್ತದೆ. ಇದರಂತಹ ಅನ್ಯಾಯದ ವಿಚಾರ ಮತ್ತೊಂದು ಇಲ್ಲವೆಂದು ನಾನು ತಮ್ಮ ಗಮನಕ್ಕೆ ತರುತ್ತೇನೆ. ಇವತ್ತು ಫೋಟೋ ಡೆಕ್ಕನ್ ಕ್ರಾನಿಕಲ್ ಎಂಬ ಪತ್ರಿಕೆಯಲ್ಲಿ ಬಂದಿದೆ. ಅದು ಹೈದರಾಬಾದ್ ಪೇಪರ್. Those press men have gone to Bhadravathi; they have visited and taken photographs also.

ಫೋಟೋಗ್ರಾಫ್ ಏನಾಗಿದೆ ಎಂದರೆ ಅಲ್ಲಿರತಕ್ಕ ಮಸೀದಿ ಮೇಲೆ ಧ್ವಜವನ್ನು ಹಾರಿಸತಕ್ಕ ಕೆಲಸವನ್ನು ಮಾಡಿದ್ದಾರೆ. ಆ ಫೋಟೋ ಇಲ್ಲಿ ಹಾಕಿದ್ದಾರೆ. ಅದನ್ನು ಕೂಡ ತಮಗೆ ಕಳುಹಿಸಿಕೊಡುತ್ತೇನೆ, ತಾವು ನೋಡಬಹುದು. ಒಂದು ಕಡೆ ಹುಬ್ಬಳ್ಳಿ ಈದ್ಗಾ ಮೈದಾನ ಆಯಿತು, ಮತ್ತೊಂದು ಕಡೆ ನಿಮ್ಮ ಮಸೀದಿ ಆಯಿತು. ಮಸೀದಿ ಮೇಲೆ ರಾಷ್ಟ್ರಧ್ವಜ ಹಾರಿಸುವುದು ಇದ್ದರೆ ಹಿಂದೂ ದೇವಾಲಯದ ಮೇಲೆ ರಾಷ್ಟ್ರಧ್ವಜ ಹಾರಿಸತಕ್ಕ ಕೆಲಸ; ಜೈನ್ ಮಂದಿರದ ಮೇಲೆ ಹಾಗಯೇ ಬಿಡುತ್ತಾರೆಯೇ? ಚೌದ್ಧ ಸ್ಥೂಪಗಳ ಮೇಲೆ ಬಿಡುತ್ತಾರೆಯೇ?

ಸಿಕ್ ಮಂದಿರದ ಮೇಲೆ ಬಿಡುತ್ತಾರೆಯೇ? Is it humanly possible? What is this?

ಈ ರೀತಿ ನಾವು ಮಾಡುತ್ತಾ ಹೋದರೆ ಇದರಿಂದ ಏನು ತೋರಿಸುತ್ತದೆಂದರೆ ಗ್ಯಾರಂಟಿಯಾದ ಕೆಲವು ವಿಚಾರಗಳನ್ನು ನಾವು ಹುಟ್ಟು ಹಾಕಲೇಬೇಕಾದಂಥ ಕೆಲವು ಕೆಟ್ಟ ರಾಜಕೀಯ ಶಕ್ತಿಗಳು ಸ್ಪಷ್ಟವಾಗಿ ಇದರಲ್ಲಿ ಶಾಮೀಲಾಗಿವೆ ಎಂಬ ಮಾತನ್ನು ಅನಿವಾರ್ಯವಾಗಿ

ಹೇಳಬೇಕಾಗಿದೆ. ಬೇರೆ ದಾರಿ ನಮಗೆ ಯಾವುದೂ ಉಳಿದಿಲ್ಲ. ನಾನು ಇಲ್ಲಿ ತಮಗೆ ಸಂಬಂಧಪಟ್ಟ ಹಾಗೆ, ಇಲ್ಲಿ ಏನಿದೆ ಎಂದರೆ ಮೊದಲು ಅಲ್ಲಿ ಲಾಸ್ ಏನಾಗಿದೆ ಅದಕ್ಕೆ ಮಹಜರ್ ರೀಡ್ರಾಫ್ಟ್ ಮಾಡುವುದಕ್ಕೆ ಇಲ್ಲಿಂದ ಯಾರಾದರೂ ಒಬ್ಬರು ಸೀನಿಯರ್ ಆಫೀಸರನ್ನು ಡೆಪ್ಯೂಟಿ ಮಾಡುವುದು ಬಹಳ ಒಳ್ಳೆಯದು. ಬೇರೆ ಇಲಾಖೆಯಿಂದ ನೀವು ಅಧಿಕಾರಿಗಳನ್ನು ಕಳುಹಿಸಿಕೊಡಿ. ಅವರು ಹೋಗಿ ರೀಡ್ರಾಫ್ಟ್ ಮಾಡಿ ಅನ್ಯಾಯ ಸರಿಪಡಿಸುವ ಕೆಲಸ ಮಾಡಲಿ ಜೊತೆಗೆ ಶಾಂತಿ ಸಮಿತಿಗಳು, ಕೇರಿ ಮೊಹಲ್ಲಾ ಇತ್ಯಾದಿ ಕಡೆಗಳಿಗೆ ಶಾಂತಿ ಸಮಿತಿಗಳನ್ನು ಮಾಡಿ ಇಲ್ಲಿ ಕೂಡ ಧೈರ್ಯ ಕೊಡತಕ್ಕ ಕೆಲಸ ಮಾಡಬೇಕು. ಅಲ್ಲಿ ಏನಾಗಿದೆ? ನಿಜ ಹೇಳಬೇಕೆಂದರೆ ಕಬ್ಬಿನ ಗದ್ದೆಗಳಿಗೆ ಜನರು ಓಡಿ ಹೋಗಿದ್ದಾರೆ. One lady has delivered a baby in the sugar field.. ಈ ಮಟ್ಟಕ್ಕೆ ಹೆಣ್ಣುಮಕ್ಕಳು ಓಡಿ ಹೋಗಿರತಕ್ಕದ್ದು ಇದೆ. ಆ ಹೆಸರುಗಳ ಪಟ್ಟಿ ಬೇಕಾದಷ್ಟು ನನ್ನ ಹತ್ತಿರ ಇದೆ. ನಾನು ಎಲ್ಲವನ್ನೂ ಓದಿ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅನೇಕ ಜನ ಮಾನ್ಯ ಸದಸ್ಯರು ಮಾತನಾಡತಕ್ಕವರು ಇರುವುದರಿಂದ ನಾನು ಎಲ್ಲವನ್ನಾ ಹೇಳಲಾರೆ. ಯಾರ್ಯಾರಿಗೆ ಎಷೆಷ್ಟು ಲಾಸ್ ಆಗಿದೆ, ಏನಾಗಿದೆ ಎಂಬ ಪಟ್ಟಿ ಇದೆ. ನನಗೆ ಬಂದಿರತಕ್ಕ ವರದಿ ಪ್ರಕಾರ it runs to serveral pages. ನಾನು ಎಲ್ಲವನ್ನಾ ಇಲ್ಲಿ ಓದುವುದಕ್ಕೆ ಹೋಗುವುದಿಲ್ಲ. ಈ ಮಟ್ಟಕ್ಕೆ ಇದೆಲ್ಲಾ ಹೀಗೆಲ್ಲಾ ಬಂದಿರಬೇಕಾದರೆ ಇದಕ್ಕೆಲ್ಲಾ ಇವತ್ತು ಯಾರು ಕಾರಣರು ಎಂಬತಕ್ಕ ವಿಚಾರ ಮುಖ್ಯ.

(ಶ್ರೀ ಜಿ.ಎಸ್.ಶಿವನಂಜಪ್ಪನವರು ಅಧ್ಯಕ್ಷರ ಪೀಠವನ್ನಲಂಕರಿಸಿದರು)

ನಮ್ಮ ಕರ್ನಾಟಕ ಕಾಂಗ್ರೆಸ್ ಪಕ್ಷದ ಪರವಾಗಿ ಈ ಮನೆಯ ಮಾನ್ಯ ಸದಸ್ಯನಾಗಿ ಈ ಭದ್ರಾವತಿ ನಗರದಲ್ಲಿ ನಡೆದಿರತಕ್ಕ ಘಟನೆಯನ್ನು ನೋಡಿದ್ದೇನೆ. ಯಾರಾದರೂ ಕೂಡ ಹೋಗಿ ನೋಡಿದ್ದರೆ ಅದು ಎಲ್ಲರಿಗೂ ಗೊತ್ತಾಗುತ್ತಿತ್ತು. ಪದೇಪದೇ ರಾಷ್ಟ್ರದಲ್ಲಿ ಇವತ್ತು ಬಾಬರಿ ಮಸೀದಿ ರಾಮಜನ್ಮಭೂಮಿ ವಿಚಾರದಲ್ಲಿ ಅಲ್ಲಿ ಕೂಡ ಹೋಗಿ ಕೋಮುಗಲಭೆಗೆ ಕಾರಣರಾಗಿರತಕ್ಕ ರಾಜಕಾರಣವನ್ನು ಬಿ.ಜೆ.ಪಿ.ಯ ಮಾನ್ಯ ಮಿತ್ರರು ಈ ದೇಶದಲ್ಲಿ ಮಾಡುತ್ತಿದ್ದಾರೆ. ಅಲ್ಲಿ ಸಾವಿರಾರು ಜನರ ಜೀವ ಹೋಗುವುದಕ್ಕೆ ಏನು ಕಾರಣವಾಯಿತು as after month of December 6th 1992, the same people are responsible. ಎಂಬ ಮಾತನ್ನು ನಾನು ಅನಿವಾರ್ಯವಾಗಿ ಹೇಳಬೇಕಾಗಿದೆ. ಇವತ್ತು ತಮಗೆ ಗೊತ್ತಿರುವಹಾಗೆ ಪತ್ರಿಕೆಯಲ್ಲೂ ಕೂಡ ಬಂದಿದೆ. ಕೆಲವರು ಇಂಥ ಸಂದರ್ಭದಲ್ಲಿ ಏನು ಮಾಡುತ್ತಾರೆಂದರೆ ಕೆಟ್ಟ ರೂಮರ್ಸ್ ಹುಟ್ಟಿಸಿಬಿಡುವುದು. ಅಲ್ಲಿ ಏನೋ ಮಾಡುತ್ತಿದ್ದಾರೆ. Ladies are molested. ನೋಡಿ ಅಲ್ಲಿ ಏನೋ ಮಾಡುತ್ತಿದ್ದಾರೆ, ಇಲ್ಲಿ ನೋಡಿ ಜನರಿಗೆಲ್ಲಾ ಹೊಡೆಯುತ್ತಿದ್ದಾರೆ ಎಂದು ಹೇಳುತ್ತಾರೆ. ಇದಕ್ಕೆಲ್ಲಾ ಪಹರೆ ಇಟ್ಟು ಇಂಟೆಲಿಜೆನ್ಸ್ ಪುಲ್‌ಅಫ್ ಮಾಡಿ ಸಂಪೂರ್ಣವಾಗಿ ಕೆಲಸ ಮಾಡಿದರೆ ಅನ್ಯಾಯವಾಗಿ ರೂಮರ್ಸ್ ಮೇಲೆ ಕೆಲವು ಕಾರಣಗಳಿಂದ ಇಂಥ ಘಟನೆ ನಡೆದರೂ ಕೂಡ ಅನ್ಯಾಯವಾಗಿ ಇಂಥ ಘಟನೆ ನಡೆಯುವುದಕ್ಕೆ ಕಾರಣ ಆಗುತ್ತಾ ಇರಲಿಲ್ಲ. ರೂಮರ್ಸ್‌ನಿಂದ ಬಹಳವಾಗಿ ನಡೆದಿದೆ. ಈ ರೂಮರ್‌ಗಳನ್ನು

ನಿಲ್ಲಿಸುವುದಕ್ಕೆ ವಿಧಾನ ಏನು? ರೂಮರ್‌ಗಳನ್ನು ನಿಲ್ಲಿಸಬೇಕಾದರೆ ಮೊದಲು ಇಂಟೆಲಿಜೆನ್ಸ್ ವಿಂಗನ್ನು ಪುಲ್-ಅಫ್ ಮಾಡಬೇಕು. ಅದನ್ನು ಯಾವಾಗಲೂ ಅಲರ್ಟಾಗಿ ಇಡಬೇಕು. We will have to send the people to take the entire situation under control.. ಲೂಟಿ ಮತ್ತೊಂದು ಮಾಡುತ್ತಾ ಇದ್ದರೆ ಪೋಲೀಸ್ ಇಲಾಖೆ ನೋಡಿಕೊಂಡು ಸ್ವಾಮಿ, ನೀವು ಕಾರ್ಯಕ್ರಮ ಹಾಕಿ ಎಂದರೆ ನಾವೇನು ಮಾಡುವುದು? ಪೋಲೀಸ್ ಇಲಾಖೆಯವರು ನಾವು ಹೋದರೆ ನಮ್ಮನ್ನು ಕೊಂದುಹಾಕಿಬಿಡಬಹುದು, ನಾವು ಹೋಗುವುದಿಲ್ಲ ಎಂಬ ಮಟ್ಟಕ್ಕೆ ಪೋಲೀಸರು ಹೇಳಿದರೆ ಅಲ್ಲಿ ಏನು ಉಳಿಯುತ್ತದೆ. ಮಾನ್ಯ ಸಭಾಧ್ಯಕ್ಷರೇ, ಇಲ್ಲಿ ಹೆಸರುಗಳೂ ಕೂಡ ಬಂದಿವೆ. ತಮಗೆಲ್ಲಾ ಗೊತ್ತಿರುವ ಹಾಗೆ ಇಲ್ಲಿ ಬಿ.ಜೆ.ಪಿ.ಗೆ. ಸೇರಿರತಕ್ಕವರು ಸಂಪೂರ್ಣವಾಗಿ ಇಂಥ ರೂಮರ್‌ಗಳನ್ನು ಹುಟ್ಟಿಸಿ ಹಾಕಿದರು ಎಂಬುದು, ತೆಗೆದುಕೊಂಡು ಹೋಗಿ ಟ್ರೈಕಲರನ್ನು it was hosted on the top if the mosque ಎನ್ನತಕ್ಕ ವಿಚಾರ ಮತ್ತು ಒಬ್ಬ ವ್ಯಕ್ತಿ ಅವರ ಹೆಸರನ್ನು ನಾನು ಮರೆತುಬಿಟ್ಟೆ; ಅವರು ಹೋಗಿ ರೂಮರ್ಸ್ ಹುಟ್ಟಿಸುವುದು. ಮೋಟಾರ್‌ಬೈಕ್ ತೆಗೆದುಕೊಂಡುಹೋಗುವುದು ವಿಚಾರಗಳನ್ನು ಸಂಪೂರ್ಣವಾಗಿ ಹುಟ್ಟಿಸಿ ಹಾಕುವುದು, ಚುನಾವಣೆ ಹತ್ತಿರ ಬರುತ್ತಿದೆ ಎಂದು ನನಗೆ ಗೊತ್ತಿದೆ. ಚುನಾವಣೆ ಹತ್ತಿರ ಬಂದಷ್ಟೂ ಮಾಸ್ಸ್ ಬಗ್ಗೆ ಬಹಳ ರಕ್ಷಣೆ ತೆಗೆದುಕೊಳ್ಳಬೇಕಾಗುತ್ತದೆ. ಅವರವರೇ ಸೆಲ್ಫ್ ಪ್ರೊಟೆಕ್ಷನ್‌ಗೆ ಏನಾದರೂ ಮಾಡಿಕೊಳ್ಳದಿದ್ದರೆ ಬಹಳ ಕಷ್ಟ ಆಗಿಬಿಡಬಹುದು ಎಂಬುದು ನನ್ನ ಭಾವನೆ. ಆಗ ಅನೇಕ ಜನ ನಿರಪರಾಧಿಗಳು ಜೀವ ಕೊಡಬೇಕಾಗುತ್ತದೆ. ನನಗೆ ಗೊತ್ತಿರುವ ಹಾಗೆ ಹಿಂದೂ ಮುಸ್ಲಿಂ ಬಾಂಧವರ ಬಗ್ಗೆ ಎಲ್ಲೂ ವ್ಯತ್ಯಾಸ ಬಂದಿಲ್ಲ. ಈ ಮಾತನ್ನು ಸ್ಪಷ್ಟಪಡಿಸುತ್ತಿದ್ದೇನೆ. ಮಾನ್ಯ ಸಭಾಧ್ಯಕ್ಷರೇ, ಬಿ.ಜೆ.ಪಿ.ಗೆ ಸೇರಿರತಕ್ಕ ಮಾನ್ಯ ಮಿತ್ರರಿಗೆ ಆ ಪಕ್ಷದವರಿಗೆ ಈಗಲಾದರೂ ಕೂಡ ವಿವೇಕ ಬರಲಿ. ದೇಶದ ಹಿತದೃಷ್ಟಿಯಿಂದ ಜನರ ಪ್ರಾಣ, ಆಸ್ತಿಪಾಸ್ತಿಗಳ ರಕ್ಷಣೆ ದೃಷ್ಟಿಯಿಂದ ಈಗಲೂ ವಿವೇಕ ಆಗಲಿ. ದೇವರು ಆ ಸದ್ಬುದ್ಧಿಯನ್ನು ಅವರಿಗೆ ಕೊಡಲಿ ಎಂದು ಹೇಳಿ ಈ ವಿಚಾರ ಏನು ನಡೆದಿದೆ ಇದಕ್ಕೆ ಸಂಬಂಧ ಪಟ್ಟಂತೆ ಈ ಸಂದರ್ಭದಲ್ಲಿ ಜ್ಯುಡಿಷಿಯಲ್ ಎನ್‌ಕ್ವೈರಿಯನ್ನು ನಾನು ಡಿಮ್ಯಾಂಡ್ ಮಾಡುತ್ತಿದ್ದೇನೆ. ಇದು ಆಗಲೇಬೇಕು. ಈದ್ಗಾ ಮೈದಾನ ಮತ್ತೊಂದು ವಿಚಾರದಲ್ಲಿ ಎನ್‌ಕ್ವೈರಿ ಮಾಡುವುದನ್ನು ಅನೌನ್ಸ್ ಮಾಡಿರುವವರು ಭದ್ರಾವತಿ ಪ್ರಕರಣದ ಬಗ್ಗೆ ಏತಕ್ಕೆ ಮಾಡಲಿಲ್ಲ ಎಂಬುದು ನನಗೆ ಅರ್ಥವಾಗುವುದಿಲ್ಲ. ಹಾಲಿ ಹೈಕೋರ್ಟ್ ನ್ಯಾಯಾಧೀಶರಿಂದ ನ್ಯಾಯಾಂಗ ತನಿಖೆ ಆಗಬೇಕು. ಎಲ್ಲ ವಿಚಾರಗಳು ಸಂಪೂರ್ಣವಾಗಿ ಹೊರಬರಲಿ, ಆಡಳಿತದ ವೈಫಲ್ಯಕೂಡ ಹೊರಬರಲಿ. ನಾನು ಭಾರತೀಯ ಜನತಾ ಪಕ್ಷವನ್ನು ಈ ವಿಚಾರದಲ್ಲಿ ಜವಾಬ್ದಾರಿ ಮಾಡುತ್ತಿದ್ದೇನೆ. ಅವರ ನಿಲುವನ್ನು ಅಷ್ಟೇ ಮುಖ್ಯವಾಗಿ ನಿಮ್ಮ ಆಡಳಿತ ವಿಫಲವಾಗಿರುವುದನ್ನೂ ಅದರ ಜೊತೆಯಲ್ಲೇ ಖಂಡಿಸುತ್ತೇನೆ. ಅವರೆಲ್ಲಾ ಅದು ಮಾಡಿದಾಗ ವೀರಪ್ಪಮೊಯಿಲಿ ಸರ್ಕಾರದವರು ನೋಡುತ್ತಾ ಕುಳಿತಿದ್ದೀರಿ ಏನು ಮಾಡುತ್ತಿದ್ದೀರಿ ನೀವು? ಇವತ್ತು ಅವರು ನೀವು ಇಬ್ಬರೂ ಶಾಮೀಲಾಗಿದ್ದೀರಿ ಎಂದು ಜನರು ಆಡತಕ್ಕ ಮಟ್ಟಕ್ಕೆ ಹೋದರೆ ಮೈನಾರಿಟೀಸ್‌ಗೆ ಹಿಂದೂಗಳಿಗೆ ಲೋಕಲ್

ಏರಿಯಾದಲ್ಲಿ ಯಾವ ರಕ್ಷಣೆಯನ್ನು ನೀವು ಕೊಡುತ್ತೀರಿ? ಇದನ್ನು ಸ್ಪಷ್ಟವಾಗಿ ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ. ಏಕೆಂದರೆ innocent people are harassed like anything. ಏತಕ್ಕೆ ಸ್ವಾಮಿ, ನೀವು ಜೈಲಿನಲ್ಲಿ ಇಟ್ಟಿರುವುದು? ಹಿಂದೆ ನಾನು ಮುಖ್ಯಮಂತ್ರಿ ಆಗಿದ್ದಾಗ ಎಲ್ಲಾ ಪಕ್ಷದವರೂ ಒಕ್ಕೊರಲಿನಿಂದ ತಾವೆಲ್ಲಾ ಹೇಳಿದ್ದೀರಿ. ಕೋಮುಗಲಭೆಗಳು ನಡೆದಿರತಕ್ಕ ಸಂದರ್ಭದಲ್ಲಿ ಕೇಸ್‌ಗಳು ಬೇಡ ಹಿಂದೆ ತೆಗೆದುಕೊಳ್ಳಿ ಎಂದು. ರೈತರ ಚಳುವಳಿ ನಡೆದಾಗಲೂ ಹಿಂದೆ ತೆಗೆದುಕೊಳ್ಳಿ ಎಂದು ಹೇಳಿದರು. ಅದೇರೀತಿ ಹರಿಜನ ಗಿರಿಜನರು ಚಳುವಳಿ ಮಾಡುತ್ತಾರೆ ಹೊಟ್ಟೆ ಅನ್ನಕ್ಕೋಸ್ಕರ, ಜಮೀನಿಗೋಸ್ಕರ.

(ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಆ ಕೇಸ್‌ಗಳನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿದಾಗ ನನ್ನ ಕಾಲದಲ್ಲಿನಾನು ಕ್ಯಾಬಿನೆಟ್ ತೀರ್ಮಾನ ಮಾಡಿದೆ. ರೈತ ಚಳುವಳಿಯಲ್ಲಿ ಭಾಗವಹಿಸಿದ್ದಂತಹವರು, ಪರಿಶಿಷ್ಟ ಜಾತಿ ಹಾಗೂ ಪಂಗಡದ ವಿಚಾರದಲ್ಲಿ ಚಳುವಳಿ ಮಾಡಿರತಕ್ಕವರು ಮತ್ತು ಕೋಮುಗಲಭೆಗೆ ಸಂಬಂಧಪಟ್ಟಹಾಗೆ ಕೇಸುಗಳು ಇರತಕ್ಕಂತಹ ಜನರ ಕೇಸುಗಳನ್ನು ಹಿಂದಕ್ಕೆ ಪಡೆಯಬೇಕು ಎಂದು ಹೇಳಿ ಕ್ಯಾಬಿನೆಟ್ ತೀರ್ಮಾನ ಮಾಡಿ ನಾನು ಶಾಸನ ಸಭೆಯಲ್ಲೂ ಕೂಡಾ ಪ್ರಕಟ ಮಾಡಿ ಅನೇಕ ಕೇಸುಗಳನ್ನು ನಾವು ವಾಪಸ್ಸು ಪಡೆದೆವು. ಮತ್ತೆ ಇನ್ನೂ ಸ್ವಲ್ಪ ಬಾಕಿ ಇದ್ದು, ಅವನ್ನೂ ಕೂಡಾ ಹಿಂದೆ ಪಡೆಯಬೇಕೆಂದು ಇದ್ದಾಗ ನಮ್ಮ ಕೈನಿಂದ ಅಧಿಕಾರ ಹೋಯಿತು. ಆಮೇಲೆ ಅದನ್ನು ನಾನು ಮುಕ್ತಾಯ ಮಾಡುವುದಕ್ಕೆ ಆಗಲಿಲ್ಲ. ನನಗೆ ಗೊತ್ತಿರುವಹಾಗೆ ಆಮೇಲೆ ಒಂದು ಕೇಸನ್ನೂ ಸಹ ವಿತ್‌ಡ್ರಾ ಮಾಡಿಲ್ಲ. ಈಗ innocent people are now loitering in the District jail in Shimoga. What right you have got to keep innocent people within four walls of the jail? I am posting this question to the Government. ಇವತ್ತು ಈ ಸರ್ಕಾರದವರಿಗೆ ಯಾರನ್ನು ಹಿಡಿಯಬೇಕು, ಯಾರನ್ನು ಬಿಡಬೇಕು ಎಂದು ನಿಯಮ ಇಲ್ಲ. ಈವತ್ತು ಮನೆಯನ್ನೂ ಕಳೆದುಕೊಂಡಿದ್ದಾರೆ, ಆಸ್ತಿಯನ್ನು ಕಳೆದುಕೊಂಡಿದ್ದಾರೆ. ಪೂರ್ತಿಯಾಗಿ ಗೌರವವನ್ನು ಕಳೆದುಕೊಂಡಿದ್ದಾರೆ. ಹೆಣ್ಣುಮಕ್ಕಳ ಗೌರವ ಹೊರಟು ಹೋಗಿದೆ. ತೆಗೆದುಕೊಂಡು ಹೋಗಿ ಇವತ್ತು ಜೈಲಿನಲ್ಲಿ ಇಟ್ಟಿದ್ದಾರೆ. ಈ ಸರ್ಕಾರದ ಅದಕ್ಷ ಆಡಳಿತದಿಂದ ಸಂಪೂರ್ಣವಾಗಿ ಇವತ್ತು ಇನ್ನೋಸೆಂಟ್ ಜನರ ಮೇಲೆ ತಾವು ಅನ್ಯಾಯವಾಗಿ ನಡೆಸಿರತಕ್ಕ ಧಾಳಿ, ಬಿಜೆಪಿಯವರು ಕೋಮುವಾದದ ವಿಷಬೀಜವನ್ನು ಹುಟ್ಟಿಸಿ, ಈ ವಿಚಾರದಲ್ಲಿ ಮುಂದೆ ಬರುವ ಚುನಾವಣೆಯನ್ನು ಗಮನದಲ್ಲಿ ಇಟ್ಟು ನೀವು ಈ ಕೆಲಸವನ್ನು ಮಾಡಿದರೆ, ನೀವು ಇವತ್ತು ಇದಕ್ಕೆ ಪೂರಕವಾಗಿ ಈ ವೀರಪ್ಪಮೊಯಿಲಿಯವರು ಈ ಸರ್ಕಾರ ಸಂಪೂರ್ಣವಾಗಿ ಇವತ್ತು ಈ ಸಂದರ್ಭದಲ್ಲಿ ಶರೀಖಾಗಿ, ಶಾಮೀಲಾಗಿ ಇವರೊಟ್ಟಿಗೆ ಇದೆ ಎನ್ನತಕ್ಕಂತಹ ಆಪಾದನೆಯನ್ನು ನಾನು ಈ ಸಂದರ್ಭದಲ್ಲಿ ನಾನು ನಿಮ್ಮ ಮುಂದೆ ಹೇಳುತ್ತಿದ್ದೇನೆ. ಬಾಬರೀಮಸೀದಿ ಬೀಳಬೇಕಾದರೆ ಬಿಜೆಪಿ ಪಕ್ಷದ ಜೊತೆಗೆ ಕೇಂದ್ರ ಸರ್ಕಾರ ಯಾವ ರೀತಿ ಶಾಮೀಲಾದರು ಎನ್ನತಕ್ಕ ಆಪಾದನೆ ಬಗ್ಗೆ ಪತ್ರಿಕೆಗಳ ತುಂಬಾ, ದೇಶದ ತುಂಬೆಲ್ಲಾ ಹೇಗೆ

ಬಂದಿದೆಯೋ ಅದೇ ರೀತಿಯಾಗಿ ಇದೂ ಕೂಡ ನೀವು ಎಲ್ಲಿ ಹೋದರೂ ಕೂಡಾ ಶಾಮೀಲು ಆಗಿರತಕ್ಕದ್ದು ಎಲ್ಲಾ ಸ್ಪಷ್ಟವಾಗಿ ತಿಳಿದು ಬಂದಿದೆ. ಆದ್ದರಿಂದ, ಈ ಸಮಯದಲ್ಲಿ ನಾನು ತಮ್ಮ ಗಮನಕ್ಕೆ ತರತಕ್ಕದ್ದು, ಜ್ಯೂಡಿಷಿಯಲ್ ಎನ್‌ಕ್ವೈಯರಿ ಆಗಬೇಕು. ಒಬ್ಬರು ಚೆನ್ನಬಸಪ್ಪ ಎಂದು ಬಿಜೆಪಿ ಪಕ್ಷದ ವೈಸ್ ಪ್ರೆಸಿಡೆಂಟ್. ಅವರ ಬಗ್ಗೆ ನನಗೆ ಬಂದಿರತಕ್ಕ ಮಾಹಿತಿ ಪ್ರಕಾರ ಈ ಮನುಷ್ಯ ಬಹಳ ಹೆಸರುವಾಸಿ. ಐದೋ, ಎಂಟೋ ಹತ್ತೋ ಮೋಟರ್‌ಬೈಕ್‌ಗಳನ್ನು ಬಿಟ್ಟು ರೂಮರ್ಸ್ ಹರಡಿಸುವುದು. ಹೋಗಿ ನೋಡಿ, ಅಲ್ಲಿ ಮುಸ್ಲಿಮ್ ಮಹಿಳೆಯರಿಗೆ ಈ ರೀತಿ ಮಾಡುತ್ತಿದ್ದಾರೆ, ಮುಸ್ಲಿಮ್ ಹುಡುಗರಿಗೆ ಈ ರೀತಿ ಮಾಡುತ್ತಿದ್ದಾರೆ ಎಂದು ಹಬ್ಬಿಸುವುದು. ಆಮೇಲೆ ಇವರೆಲ್ಲಾ ಧ್ವಂಸ ಮಾಡುವುದು. ಇದೆಲ್ಲಾ ಇವರ ಟ್ಯಾಕ್ಟಿಕ್ಸ್. ಈ ಬಗ್ಗೆ ಪತ್ರಿಕೆಯಲ್ಲೂ ಬಂದಿದೆ. ಇದು ಯಾರಿಗೆ ಗೊತ್ತಾಗುವುದಿಲ್ಲ? ಈ ಟ್ಯಾಕ್ಟಿಕ್ಸ್ ಅವರಿಗೆ ಮಾತ್ರ ಬರುವುದಿಲ್ಲ. ನಾಳೆ ಯಾರಾದರೂ ಮತ್ತೊಬ್ಬರು ಮಾಡಿಬಿಟ್ಟರೆ the same BJP will have to become the target for an these on slaghts which will be highly unlawful.

ಆದುದರಿಂದ, ಮಾನ್ಯ ಸಭಾಧ್ಯಕ್ಷರೇ ತಮ್ಮ ಮುಖಾಂತರ ನಾನು ಒಂದೇ ಒಂದು ಮಾತನ್ನು ಈ ಸದನಕ್ಕೆ ಹೇಳುತ್ತೇನೆ. ಇವತ್ತು ಬಿಜೆಪಿ ಪಕ್ಷದ ಬಗ್ಗೆ ಸಂಪೂರ್ಣವಾದ ಜವಾಬ್ದಾರಿಯನ್ನು ನಾವು ಹೊರಿಸುತ್ತಿದ್ದೇವೆ. ಇದಕ್ಕೆಲ್ಲಾ ಮೂಲ ಕಾರಣಕರ್ತರು ಇವರೇ. ಹುಬ್ಬಳಿಯಲ್ಲಿಯೂ ಇವರೇ. ಇಲ್ಲೆಲ್ಲಾ ಮಾಡಿ ಮತ್ತೆ ಮುಂದಕ್ಕೂ ಇಂತಹ ಸಂದರ್ಭಕ್ಕೆ ಕಾಯುತ್ತಿದ್ದಾರೆ. ಏಕೆಂದರೆ ಮುಂದಿನ ಚುನಾವಣೆಯಲ್ಲಿ ಇವರಿಗೆ ಓಟು ಬೇಕಾಗಿದೆ. ಇದು ಬಿಟ್ಟರೆ ಬೇರೆ ಏನೇನೂ ಕೂಡ ಇವರ ಮನಸ್ಸಿನಲ್ಲಿ ಇಲ್ಲ. ಇವತ್ತು ಕಾಂಗ್ರೆಸ್ ಪಕ್ಷದ ನೀತಿಯನ್ನೇ ಇವರು ಇಟ್ಟುಕೊಂಡಿರತಕ್ಕಂತಹದ್ದು. ನೀವು ಯಾವ ರೀತಿ ನೀತಿ ಇಟ್ಟು ಕೊಳ್ಳಬೇಕಾಗಿತ್ತು? ನೀವು, ಅವರು ಏನೇನು ಮಾಡಿದರೂ ಅದನ್ನು ನೋಡುತ್ತಾ ಕುಳಿತುಕೊಂಡಿದ್ದೀರಿ. ಭದ್ರಾವತಿಯಲ್ಲಂತೂ ನಿಮ್ಮ ಅಡ್ಮಿನಿಸ್ಟ್ರೇಷನ್ ಇತ್ತೋ ಇಲ್ಲವೋ ಎಂದು ಒಬ್ಬರಿಗೂ ಗೊತ್ತಿಲ್ಲ. Free for all, everything went scot-free; nobody was there to put any check on the arson and looting that went for days together there day in and day out. One should be ashamed of seeing all these things and they will have to take up the responsibility for what has happened in Bhadravathi. ಆದ್ದರಿಂದ ಮಾನ್ಯ ಅಧ್ಯಕ್ಷರೇ, ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಹೇಳತಕ್ಕದ್ದು ಇಷ್ಟು; please announce the judicial enquiry. I demand a enquiry you have no other way but to announce this. ಏಕೆಂದರೆ, ಈ ಹುಬ್ಬಳ್ಳಿಯ ಘಟನೆ ಇದೆಲ್ಲಾ ಆದಮೇಲೆ ನೀವು ಇಲ್ಲಿಯದನ್ನು ಹಾಗೇ ಇಡುವುದಕ್ಕೆ ಆಗುವುದಿಲ್ಲ ಎನ್ನುವ ಮಾತನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳಿ, ಇನ್ನು ಫೋಟೋಗಳು ನನ್ನ ಹತ್ತಿರ ಬೇಕಾದಷ್ಟು ಇವೆ. ನಾನು ಅವನ್ನು ತಮ್ಮ ಮುಖಾಂತರ ಸರ್ಕಾರಕ್ಕೂ ಕಳುಹಿಸಿಕೊಡುತ್ತೇನೆ. ಇಲ್ಲಿ ದಾಖಲೆಗಳು ಎಲ್ಲಾ

ಇದ್ದಾವೆ. ಇವನ್ನೆಲ್ಲಾ ಜನ ತಂದುಕೊಟ್ಟಿರತ್ತಕ್ಕಂತಹದ್ದು. ಅವನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ. ಹಿಂದೂಗಳೂ ಕೂಡಾ ಬಂದು ನನ್ನ ಹತ್ತಿರ ಹೇಳಿದರು. ನಮ್ಮಲ್ಲಿ ಹಿಂದೂ-ಮುಸ್ಲಿಮ್ ಎಂದು ಬೇಧ ಇಲ್ಲ. ನನ್ನ ಹತ್ತಿರ ನೂರಾರು ಜನ ಹಿಂದೂಗಳೂ, ಮುಸ್ಲಿಮರು ಬಂದು ಎಲ್ಲವನ್ನೂ ಹೇಳಿ ಹೋದರು. ಈಗಲೂ ಕೂಡ ಕೆಲವರು ಇದ್ದಾರೆ. ಕೆಲವರು ಗ್ಯಾಲರಿಯಲ್ಲಿ ಸಹಾ ಇರಬಹುದು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಪಾಪ ಅವರೆಲ್ಲರೂ ಅಣ್ಣತಮ್ಮಂದಿರು, ಅಕ್ಕತಂಗಿಯರಂತೆ ಬಾಳುವುದಕ್ಕೆ ತಯಾರಾಗಿದ್ದಾರೆ. They have been living together as brothers and sisters, Let good things dawn on the minds of our BJP friends and our Congress friends who are there, and they should completely take up the responsibility for all these things. I therefore demand that the Government should agree for a judicial enquiry into the incidents occurred in Bhadravathi. Thank you very much.

ಶ್ರೀ ಕೆ.ಎಸ್ ಈಶ್ವರಪ್ಪ (ಶಿವಮೊಗ್ಗ):- ಸನ್ಮಾನ್ಯ ಅಧ್ಯಕ್ಷರೇ, ಮೊಟ್ಟಮೊದಲನೆಯದಾಗಿ ಹಿರಿಯ ರಾಜಕಾರಣಿಗಳೂ ಹಾಗೂ ಹಿರಿಯ ಶಾಸಕರಾದ ಸನ್ಮಾನ್ಯ ಬಂಗಾರಪ್ಪನವರು ಭದ್ರಾವತಿಯಲ್ಲಿ ನಡೆದ ಗಲಭೆ ಹಾಗೂ ಹಿಂಸಾಚಾರಕ್ಕೆ ಸಂಬಂಧ ಪಟ್ಟಂತೆ ನ್ಯಾಯಾಂಗ ತನಿಖೆಯಾಗಬೇಕು ಎಂದು ಹೇಳಿ ಏನು ಒತ್ತಾಯ ಮಾಡಿದ್ದಾರೆ ಅದಕ್ಕೆ ಸಂಪೂರ್ಣ ಬೆಂಬಲವನ್ನು ನಾನು ಕೊಡುತ್ತಾ ನ್ಯಾಯಾಂಗ ತನಿಖೆಗೆ ತುರ್ತು ಆಜ್ಞೆಯನ್ನು ಈ ಸರ್ಕಾರ ಹೊರಡಿಸಬೇಕೆಂದು ನಾನು ಸಹ ಒತ್ತಾಯ ಮಾಡುತ್ತೇನೆ. ಈ ಭದ್ರಾವತಿಯ ಗಲಭೆ ಹಾಗೂ ಹಿಂಸಾಚಾರದ ಬಗ್ಗೆ ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಭದ್ರಾವತಿಯ ಹಿಂದೂಗಳಾಗಲೀ, ಮುಸಲ್ಮಾನರಾಗಲೀ ಇದಕ್ಕೆ ಕಾರಣ ಅಲ್ಲ. ಕೆಲವು ರಾಷ್ಟ್ರದ್ರೋಹಿ ವ್ಯಕ್ತಿಗಳು, ಕೆಲವು ರಾಷ್ಟ್ರದ್ರೋಹಿ ಶಕ್ತಿಗಳು ಈ ಗಲಭೆ ಆಗುವುದಕ್ಕೆ ಪ್ರಮುಖವಾದ ಕಾರಣ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಗಲಭೆ ನಡೆದ ಬಗ್ಗೆ ವರದಿಯನ್ನು, ಗಲಭೆ ಆದ ವಿಚಾರವನ್ನು ಇಡೀ ರಾಜ್ಯಕ್ಕೆ ಬಿತ್ತರಿಸಿದಂತಹ ಪತ್ರಿಕೆಗಳ ವರದಿ ಬಗ್ಗೆ ಹೇಳುವುದಾದರೆ ಒಂದು ಪತ್ರಿಕೆಯ ವರದಿಯನ್ನು ನಾನು ಈ ಸದನದಲ್ಲಿ ಓದುವುದಕ್ಕೆ ಇಷ್ಟಪಡುತ್ತೇನೆ. 22.8.94ರಲ್ಲಿ ಕನ್ನಡಪ್ರಭ ಪ್ರತ್ರಿಕೆಯಲ್ಲಿ ಈ ರೀತಿ ವಿಚಾರ ಬಂದಿದೆ.

''ಈದ್ ಮೆರವಣಿಗೆ ಸಂದರ್ಭದಲ್ಲಿ ಕೆಲವು ಕಿಡಿಗೇಡಿಗಳು ಅಂಗಡಿಗಳ ಮೇಲೆ ಕಲ್ಲು ಎಸೆದು ಬಲವಂತವಾಗಿ ಅವುಗಳನ್ನು ಮುಚ್ಚಿಸಲು ಯತ್ನಿಸಿದಾಗ ಗಲಭೆ ಆರಂಭವಾಯಿತೆಂದು ವರದಿಗಳು ತಿಳಿಸಿವೆ. ಮೆರವಣಿಗೆ ನಡೆಸಿ ಹಿಂದಿರುಗುತ್ತಿದ್ದಾಗ ಕೂಡ ಈ ಜನರು ಅಂಗಡಿಗಳು ಮತ್ತು ಇನ್ನೊಂದು ಕೋಮಿಗೆ ಸೇರಿದ ಪೂಜಾ ಸ್ಥಳಗಳ ಮೇಲೆ ಕಲ್ಲೆಸೆದರು. ಇದರಿಂದ ಕೆರಳಿದ ಆ ಕೋಮಿನ ಜನರು ಪ್ರತೀಕಾರಕ್ಕೆ ಹೊರಟರು. ತತ್ಪರಿಣಾಮವಾಗಿ ವ್ಯಾಪಕವಾದ ಹಿಂಸಾಚಾರ ಮತ್ತು ಘರ್ಷಣೆ ನಡೆಯಿತು.''

ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಹಾಗೂ ಈ ದೇಶದಲ್ಲೂ ಕೂಡ ಒಂದು ವಾಡಿಕೆ ಆಗಿಹೋಗಿದೆ ಮುಸಲ್ಮಾನರ ವಾರಸುದಾರರು ಯಾರು ಎನ್ನುವ ಸ್ಪರ್ಧೆ ರಾಜಕೀಯ ಕ್ಷೇತ್ರದಲ್ಲಿ ಬೇರೆಬೇರೆ ಪಕ್ಷಗಳಲ್ಲಿ ಇವತ್ತು ಪ್ರಾರಂಭವಾಗಿದೆ. ನನಗನ್ನಿಸುತ್ತದೆ, ಈ ರಾಜ್ಯದಲ್ಲಿ ಇವತ್ತಿನವರೆಗೆ ಮುಸಲ್ಮಾನರ ವಾರಸುದಾರರು ಯಾರೂ ಇರಲಿಲ್ಲ; ನಾನು ಬಂದಿದೇನೆ, ಈ ರಾಜ್ಯದಲ್ಲಿ ನಾನು ಹುಟ್ಟಿಕೊಂಡಿದ್ದೇನೆ ಎಂಬ ಪ್ರತಿಪಾದನೆಯನ್ನು ಈ ಸದನದ ಮುಖಾಂತರ ಇಡೀ ಕರ್ನಾಟಕ ರಾಜ್ಯದ ಮುಸಲ್ಮಾನರಿಗೆ ಸನ್ಮಾನ್ಯ ಬಂಗಾರಪ್ಪನವರು ಇವತ್ತು ಘೋಷಣೆ ಮಾಡಿ ತೋರಿಸುತ್ತಿದ್ದಾರೆ ಎಂದು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ.

ಶ್ರೀ ಕೆ. ಎ. ನಿಸಾರ್ ಅಹಮದ್:- ಯಾರಾದರೂ ಒಬ್ಬರು ಇದ್ದಾರಲ್ಲಾ ಎಂದು ನಾನು ಸ್ವಾಗತ ಮಾಡುತ್ತೇನೆ.

*ಶ್ರೀ ಕೆ ಎಸ್ ಈಶ್ವರಪ್ಪ:- ಇದೇ ಬಂಗಾರಪ್ಪನವರ ಪಕ್ಷದ ಕಾರ್ಯಕರ್ತರು ಭದ್ರಾವತಿಯಲ್ಲಿ ಏನು ಹೇಳುತ್ತಾರೆ? ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಶಿವಮೊಗ್ಗ ಜಿಲ್ಲೆಯಲ್ಲಿ ಏನು ಹೇಳುತ್ತಾರೆ, ಜನತಾದಳದ ನಾಯಕರು ಭದ್ರಾವತಿಯಲ್ಲಿ ಏನು ಹೇಳುತ್ತಾರೆ ಎಂಬುದು ಬಹಳ ಪ್ರಮುಖವಾದುದು. ಏಕೆಂದರೆ, ರಾಜ್ಯದ ತುದಿಯಿಂದಲೋ ಅಥವಾ ಕಾಶ್ಮೀರದ ತುದಿಯಿಂದಲೋ ಭದ್ರಾವತಿಯ ಘಟನೆಗೆ ಯಾರು ಕಾರಣರು ಎಂಬುದರ ಬಗ್ಗೆ ಯಾರ ಮೇಲೋ ಒಂದು ರೀತಿ ಕೆಸರನ್ನು ಎರಚುವುದು ಬಹಳ ಸುಲಭ.

''ಈದ್ ಮೆರವಣಿಗೆ ಸಂದರ್ಭದಲ್ಲಿ ಸಾಕಷ್ಟು ಪೋಲೀಸ್ ಬಂದೋಬಸ್ತ್ ಮಾಡದಿರುವ ಕಾರಣದಿಂದಲೇ ಗಲಭೆ ಹುಟ್ಟಿಕೊಂಡಿತು ಎಂದು ಕೆಸಿಪಿಯ ಯುವಘಟಕದ ಅಧ್ಯಕ್ಷ ಎ.ವಿ. ಅಂಟೋನಿ ಆರೋಪಿಸಿದ್ದಾರೆ.''

ಅಧ್ಯಕ್ಷರೇ, ಕಾಂಗ್ರಸ್ ಪಕ್ಷದ ನಾಯಕರು ಹೇಳುತ್ತಾರೆ.

'' ಈ ಗಲಭೆಗೆ ಕೆಲವು ಮುಖ್ಯ ಬೇಜವಾಬ್ದಾರಿಯೇ ಕಾರಣವೆಂದು ಯಾರಾದರೂ ಹೇಳಬಹುದಾಗಿದ್ದು, ಅವರ ಮೇಲೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವಂತೆ ಶೀರ್ನಾಳಿ ಚಂದ್ರಶೇಖರ್ ಅವರು ಆಗ್ರಹಿಸಿದ್ದಾರೆ''

'' ಮೆರವಣಿಗೆಕಾರರು ತಾವು ಒಂದು ಧಾರ್ಮಿಕ ಕಾರ್ಯಕ್ರಮದಲ್ಲಿ ತೊಡಗಿದ್ದೇವೆ ಎನ್ನುವುದನ್ನು ಮರೆತವರಂತೆ ಅಂಗಡಿಗಳನ್ನು ಮುಚ್ಚಿಸಲು ಯತ್ನಿಸಿದ್ದು ಸರಿಯಲ್ಲ ಎಂದು ಜನತಾದಳದ ತಾಲ್ಲೂಕು ಅಧ್ಯಕ್ಷ ಅಪ್ಪಾಜಿಗೌಡ ಹೇಳಿದ್ದಾರೆ''

ಅಧ್ಯಕ್ಷರೇ, ನಾನು ಏತಕ್ಕೆ ಈ ಹೇಳಿಕೆಗಳನ್ನು ತಮ್ಮ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ ಎಂದರೆ, ಭಾರತೀಯ ಜನತಾ ಪಕ್ಷಕ್ಕೂ ಈ ಘಟನೆಗೂ ಎಳ್ಳಷ್ಟು ಕೂಡ ಸಂಬಂಧ ಇಲ್ಲ. ಈ ಘಟನೆ ಆರಂಭವಾದಂಥ ಅಂಶ ನನಗೂ ಮತ್ತು ಮಾನ್ಯ ಯಡಿಯೂರಪ್ಪನವರಿಗೂ ಗೊತ್ತಾದದ್ದು, ನಾನು ಮತ್ತು ಮಾನ್ಯ ಯಡಿಯೂರಪ್ಪನವರು

ಬೆಂಗಳೂರಿನಿಂದ ಶಿವಮೊಗ್ಗಕ್ಕೆ ನಮ್ಮ ಹಿಂದಿನ ಶಾಸಕರಾದ ಮಾನ್ಯ ಆನಂದರಾಯರಿಗೆ ಹುಷಾರಿಲ್ಲ ಎಂದು ಗೊತ್ತಾಗಿದ್ದಂಥ ಸಂದರ್ಭದಲ್ಲಿ, ತರೀಕೆರೆಗೆ ಹೋದಾಗ ನಮಗೆ ಗೊತ್ತಾಯಿತು. ಸ್ವಾಮಿ, ಭದ್ರಾವತಿ ಮೇಲೆ ಹೋಗಬೇಡಿ, ಅಲ್ಲಿ ಸ್ವಲ್ಪ ಗಲಾಟೆ ಆಗಿದೆ, ಬೇರೆ ಕಡೆಯಿಂದ ಹೋಗಿ ಎಂದು ಹೇಳಿದಾಗ, ನಾವು ಅದೇ ರೀತಿ ಹೋದೆವು. ದುರಾದೃಷ್ಟವಶಾತ್ ಸನ್ಮಾನ್ಯ ಆನಂದರಾಯರು ತೀರಿಹೋದ ವಿಷಯ ನಮಗೆ ಗೊತ್ತಾಯಿತು. ತಕ್ಷಣ ನಾನು ಒಂದೆರಡು ಹಾರಗಳನ್ನು ತೆಗೆದುಕೊಂಡು ಹೋಗೋಣ ಎಂದು ಶಿವಮೊಗ್ಗದಲ್ಲಿ ಒಂದು ಅಂಗಡಿಗೆ ಹೋದಾಗ, ಇಬ್ಬರು ಪೋಲಿಸ್ ಅಧಿಕಾರಿಗಳು ಓಡಿಬಂದರು. ಸ್ವಾಮಿ, ಭದ್ರಾವತಿಯಲ್ಲಿ ಗಲಾಟೆಯಾಗಿದೆ. ಗಲಾಟೆಗೆ ಕೆಲವು ದುಷ್ಕರ್ಮಿಗಳು ಕಾರಣರಿದ್ದಾರೆ. ಶಾಂತಿಯಿಂದ ಸಾಕಷ್ಟು ನಿಮ್ಮ ಪಕ್ಷದ ಕಾರ್ಯಕರ್ತರು ಶ್ರಮಪಡುತ್ತಿದ್ದಾರೆ, ನಿಮ್ಮ ಸಹಕಾರದ ಪೂರ್ಣ ಅವಶ್ಯಕತೆ ನಮಗೆ ಇದೆ. ತಾವು ಒಂದು ಶವಸಂಸ್ಕಾರಕ್ಕೆ ಹೊರಟಿದ್ದೀರಿ, ನಿಮಗೆ ತೊಂದರೆ ಕೊಡುವುದಕ್ಕೆ ನಮಗೆ ಇಷ್ಟ ಇಲ್ಲ. ಆದರೆ ನಿಮಗೆ ಸುದ್ದಿ ಕೊಡುತ್ತೇನೆ ಎಂದು ಆ ಪೋಲೀಸ್ ಅಧಿಕಾರಿಗಳು ನಮಗೆ ಹೇಳಿದ್ದಾರೆ. ನಾನು ಈ ಸಭೆಯಲ್ಲಿ ಆ ಹೆಸರುಗಳನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅದಕ್ಕೋಸ್ಕರ ನಾನು ವಿಚಾರ ಹೇಳುವುದಕ್ಕೆ ಇಷ್ಟಪಡುತ್ತೇನೆ ಅದೇನೆಂದರೆ ಈ ಘಟನೆ ಬಗ್ಗೆ, ನ್ಯಾಯಾಂಗ ತನಿಖೆಯಾದರೆ ಯಾರು ಈ ಘಟನೆಗೆ ಸಂಬಂಧಪಟ್ಟವರು ಎಂಬುದು ಗೊತ್ತಾಗುತ್ತದೆ. ಅಧ್ಯಕ್ಷರೇ, ಗಲಾಟೆ ಆದ ದಿನ, ಗಲಾಟೆಯನ್ನು ತಡೆಯಬೇಕೆಂದು ಹೇಳಿ, ಪೋಲೀಸರು ನಮ್ಮ ಪಕ್ಷದ ನಾಯಕರಾದ ವಿಶ್ವನಾಥ ಕೋಟಿ, ವಿಶ್ವನಾಥ್, ಈ ರೀತಿಯ ವ್ಯಕ್ತಿಗಳಲ್ಲಿ ಮುಂಚೆ ಮನವಿಮಾಡಿಕೊಂಡು ಮನೆಗೆ ಹೋಗಿ ಕರೆದುಕೊಂಡು ಬಂದರು. ಭದ್ರಾವತಿಯಲ್ಲಿ ಗಲಾಟೆಯಾಗುತ್ತಿದೆ, ದಯವಿಟ್ಟು ಬನ್ನಿ, ಸ್ವಲ್ಪ ಶಾಂತಿಯನ್ನು ಕಾಪಾಡಿ ಎಂದು ಈ ರೀತಿಯಾಗಿ ಪೋಲೀಸರು ಹೇಳಿದಾಗ, ನಮ್ಮ ಕಾರ್ಯಕರ್ತರು ಗಲಾಟೆಯಾಗುತ್ತಿದ್ದಂಥ ಜಾಗಕ್ಕೆ ಹೋಗಿ, ಶಾಂತಿಯನ್ನು ಕಾಪಾಡುವ ದಿಕ್ಕಿನಲ್ಲಿ ಸಾಕಷ್ಟು ಪ್ರಯತ್ನಮಾಡಿ, ವಾಪಸ್ಸು ಬಂದರು. ಆದರೆ ಅಧ್ಯಕ್ಷರೇ, ನಾನು ತುಂಬಾ ನೊಂದು ಹೇಳುತ್ತಿದ್ದೇನೆ, ಅದೇ ಪೋಲೀಸರು ಮಾರನೇ ದಿವಸ ಬೆಳಿಗ್ಗೆ ಮೂರು ಗಂಟೆಗೆ, ನಮ್ಮ ಅದೇ ಕಾರ್ಯಕರ್ತರ ಮನೆಗಳಿಗೆ ಹೋಗಿ, ಅವರನ್ನು ಬಂಧಿಸಿ ಇವತ್ತು ಜೈಲಿನಲ್ಲಿಟ್ಟಿದ್ದಾರೆ. ಇದಕ್ಕೂ ಮೊದಲು ನನಗೂ ಕೂಡ ಇದೇ ಗತಿ ಬಂದಿತ್ತು. ಶಿವಮೊಗ್ಗದಲ್ಲಿ ಕಳೆದವರ್ಷ ಗಣಪತಿ ಮೆರವಣಿಗೆ ನಡೆದ ಸಂದರ್ಭದಲ್ಲಿ ಪೋಲೀಸ್ ಅಧಿಕಾರಿಗಳು ಬಂದು ಹೇಳಿದರು ‘ ಸ್ವಾಮಿ, ಮೆರವಣಿಗೆ ವೈಭವದಿಂದ ಆಗುತ್ತಾ ಇದೆ. ಇಪ್ಪತ್ತು-ಮೂವತ್ತು ಸಾವಿರ ಜನ ಯುವಕರು ಸೇರುತ್ತಿದ್ದಾರೆ ದಯವಿಟ್ಟು ಶಾಂತಿಯನ್ನು ಕಾಪಾಡುವ ದಿಕ್ಕಿನಲ್ಲಿ ಪ್ರಯತ್ನ ಮಾಡಿ’ ಎಂದು ಅವರು ಹೇಳಿದಾಗ, ನಾನು ಸಂಪೂರ್ಣವಾಗಿ ಆ ಮೆರವಣಿಗೆಯಲ್ಲಿದ್ದೆ. ಒಂದು ಮಸೀದಿಯಿಂದ ಎಲ್ಲಾ ಯುವಕರನ್ನು ಕಳುಹಿಸಿದ ನಂತರ, ಪೋಲೀಸ್ ಅಧಿಕಾರಿಗಳು ಬಂದು ಅಭಿನಂದನೆಗಳನ್ನು ಸಲ್ಲಿಸಿ, ‘ ಸ್ವಾಮಿ, ತುಂಬಾ ಸಂತೋಷವಾಯಿತು, ತಾವೆಲ್ಲರೂ ಮುಂದೆ ನಿಂತು ಶಾಂತಿಯನ್ನು ಕಾಪಾಡಿದ್ದೀರಿ. ನಿಮಗೆ ಅಭಿನಂದನೆಗಳು’ ಎಂದು ಹೇಳಿ ನಮ್ಮನ್ನು ಕಳಿಸಿಕೊಟ್ಟರು. ಅಲ್ಲಿಂದ ಹೊರಟ ನಾನು, ಹುಬ್ಬಳ್ಳಿಗೆ ಬಂದಮೇಲೆ ನಾನು ಪತ್ರಿಕೆಯನ್ನು ಓದಿದಾಗ, ಕರ್ನಾಟಕ ರಾಜ್ಯ

ಬಿ.ಜೆ.ಪಿ. ಅಧ್ಯಕ್ಷರಾದ ಈಶ್ವರಪ್ಪ ಅವರ ಮೇಲೆ ಕೇಸು ದಾಖಲೆಯಾಗಿದೆಯೆಂದು. ಗೊತ್ತಾಯಿತು. ಇದೇ ವ್ಯಕ್ತಿಗಳು ಬರುತ್ತಾರೆ, ಶಾಂತಿ ಕಾಪಾಡಿ ಎನ್ನುತ್ತಾರೆ. ಇದೇ ವ್ಯಕ್ತಿಗಳು, ಅಂದರೆ ಸರ್ಕಾರ ನನ್ನಮೇಲೆ ಕೇಸು ಹಾಕತಕ್ಕಂಥ ಪ್ರಯತ್ನವನ್ನು ಸರ್ಕಾರ ನಡೆಸುತ್ತಾ ಇರಬೇಕಾದರೆ, ಇದರಲ್ಲಿ ಏನೋ ಅಡಗಿದೆ ಎಂದು ಇಡೀ ರಾಜ್ಯದ ಜನತೆಗೆ ತಮ್ಮ ಮುಖೇನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಅಧ್ಯಕ್ಷರೇ, ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, 6.2.92ಕ್ಕೆ ಇಡೀ ದೇಶದಲ್ಲಿ ಹಿಂದೂ-ಮುಸ್ಲಿಂ ಗಲಭೆಯಾದಾಗ, ಶಿವಮೊಗ್ಗ, ಭದ್ರಾವತಿಯಲ್ಲಿ ಏನೂ ಗಲಾಟೆಯಾಗಲಿಲ್ಲ, ಆಗ ಶಾಂತಿಯನ್ನು ಕಾಪಾಡಿಕೊಂಡು ಬರುವ ದಿಕ್ಕಿನಲ್ಲಿ ಯಶಸ್ವಿಯಾಗಿದ್ದೇವೆ. ಆದರೆ ಇವತ್ತು ಯಾಕೆ ಆಗುತ್ತಾ ಇದೆ? ಒಂದು ಅಂಶವನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತಿದ್ದೇನೆ; ಪಾಕೀಸ್ತಾನದಲ್ಲಿ ಉಗ್ರಗಾಮಿಗಳು ಈ ದೇಶದ ರಾಷ್ಟ್ರಧ್ವಜವನ್ನು ಸುಡಬೇಕು ಎಂದು ಪ್ರಯತ್ನ ಮಾಡಿದಂಥ ಸಂದರ್ಭದಲ್ಲಿ, ಇದು ಅನ್ಯಾಯ ಇದೆ, ಇದಕ್ಕೆ ನಾವು ಧಿಕ್ಕಾರ ಹಾಕುತ್ತೇವೆ, ನಮ್ಮ ದೇಶದ ಧ್ವಜವನ್ನು ಇಡೀ ಪ್ರಪಂಚದಲ್ಲಿ ಎಲ್ಲಿ ಕೂಡ ಸುಡಕೂಡದು, ಅದನ್ನು ನಾವು ವಿರೋಧ ಮಾಡುತ್ತೇವೆ ಎಂದು ಹೇಳಿದಾಗ, ಭದ್ರಾವತಿಯಲ್ಲಿ ಅಖಿಲ ಭಾರತ ವಿದ್ಯಾರ್ಥಿಪರಿಷತ್ತಿನ ಕಾರ್ಯಕರ್ತರು ಪಾಕೀಸ್ತಾನ ಧ್ವಜವನ್ನು ಸುಡುತ್ತೇವೆ, ಹುಷ್‌ರ್ ಎಂದಂಥ ಸಂದರ್ಭದಲ್ಲಿ ಅಲ್ಲಿ ಒಬ್ಬ ಸರ್ಕಲ್ ಇನ್‌ಸ್ಪೆಕ್ಟರ್ ಜಮಿಲ್ ಎನ್ನತಕ್ಕಂಥ ವ್ಯಕ್ತಿ ಇದ್ದಾನೆ; ನಾನು ಈ ದೇಶದ ಎಲ್ಲಾ ಮುಸಲ್ಮಾನರು ದೇಶದ್ರೋಹಿಗಳು ಎಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಈ ದೇಶದ ಸ್ವಾತಂತ್ರ್ಯಕ್ಕೋಸ್ಕರ ಅನೇಕ ಮುಸ್ಲಿಂ ಬಂಧುಗಳು ತಮ್ಮ ಬಲಿದಾನ ಮಾಡಿದ್ದಾರೆ. ಅಂತಹ ವ್ಯಕ್ತಿಗಳಿಗೆ ದೇಶಭಕ್ತರು ಎಂದು ಹೇಳಿ ಭಾರತೀಯ ಜನತಾಪಕ್ಷ ಸಾಷ್ಟಾಂಗ ನಮಸ್ಕಾರ ಮಾಡುತ್ತದೆ. ಆದರೆ ಈ ಜಮಿಲ್ ಎನ್ನುವ ವ್ಯಕ್ತಿ, ಏನು ಮಾಡಿದ ಎಂದರೆ, ಯಾರು ರಾಷ್ಟ್ರದ್ರೋಹಿಗಳು ಪಾಕೀಸ್ತಾನದಲ್ಲಿ ನಮ್ಮ ಧ್ವಜವನ್ನು ಸುಡುವುದಕ್ಕೆ ಹೊರಟಿದ್ದರೋ, ಅಂತಹ ವ್ಯಕ್ತಿಗಳಿಗೆ ಧಿಕ್ಕಾರ ಹಾಕುವುದಕ್ಕೋಸ್ಕರ, ಈ ದೇಶದಲ್ಲಿ ಈ ಕೃತ್ಯ ನಡೆಯುವುದಕ್ಕೆ ಬಿಡುವುದಿಲ್ಲ ಎಂದು ಹೇಳಿ ಅವರಿಗೆ ಎಚ್ಚರಿಕೆ ಕೊಡಲು ಹೊರಟ್ಟಿದ್ದಂಥ, ಈ ಯುವಕರನ್ನು ಬಂಧಿಸಿ, ಬೂಟುಕಾಲಿನಿಂದ ಹೊಡೆದು ಲಾಠಿಚಾರ್ಜ್ ಮಾಡಿ ಅವರೆಲ್ಲರನ್ನೂ ಜೈಲಿನಲ್ಲಿಟ್ಟಂಥ ಈ ವ್ಯಕ್ತಿ ಬಗ್ಗೆ ನಾನು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದೆ. ತಮ್ಮ ಇಂಟಲಿಜನ್ಸ್ ರಿಪೋರ್ಟ್ ಪ್ರಕಾರ, ಶಿವಮೊಗ್ಗ ಜಿಲ್ಲೆಗೆ ಸಂಬಂಧಪಟ್ಟಂತೆ ಪೋಲೀಸ್ ವರಿಷ್ಟ ಅಧಿಕಾರಿಗಳಿಂದ, ಇದನ್ನು ತಾವು ವಿಚಾರಿಸಿನೋಡಿ ಅದರ ವಿವರಕ್ಕೆ ನಾನು ಹೋಗುವುದಕ್ಕೆ ಇಷ್ಟಪಡುವುದಿಲ್ಲ. ನಾನು ಯಾಕೆ ಆ ವ್ಯಕ್ತಿಯ ಹೆಸರನ್ನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ ಎಂದರೆ, ಅಂದು ಶಾಂತಿಯಿಂದ ಹೋಗುತ್ತಾ ಇರತಕ್ಕಂಥ ಆ ಮೆರವಣಿಗೆಯಲ್ಲಿ, ಕೆಲವು ರಾಷ್ಟ್ರ ದ್ರೋಹಿಗಳು, ಅಂದರೆ ಎಲ್ಲರೂ ರಾಷ್ಟ್ರದ್ರೋಹಿಗಳು ಎಂದು ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಕೆಲವು ರಾಷ್ಟ್ರದ್ರೋಹಿಗಳು ಅಂಗಡಿಗಳ ಮೇಲೆ ಕಲ್ಲು ಹೊಡೆಯುವುದಕ್ಕೆ ಪ್ರಯತ್ನ ಮಾಡಿದರು. ಅ ಸಂದರ್ಭದಲ್ಲಿ ಆ ಅಂಗಡಿಗಳ ವರ್ತಕರು, ಯಾರು ಈ ಕಲ್ಲುಗಳನ್ನು ಹೊಡೆದರೋ, ಅವರುಗಳನ್ನು ಹಿಡಿದು, ಈ ಜಮಿಲ್ ಹತ್ತಿರ ತೆಗೆದುಕೊಂಡು ಹೋಗಿ ಕೊಟ್ಟರು. ' ನೋಡಿ, ಇವರು ಕಲ್ಲು ಹೊಡೆಯುತ್ತಿದ್ದಾರೆ. ಭದ್ರಾವತಿಯಲ್ಲಿ

ಗಲಭೆ ಪ್ರಾರಂಭವಾಗುತ್ತಿದೆ. ಈ ವ್ಯಕ್ತಿಯನ್ನು ಅರೆಸ್ಟ್ ಮಾಡಿ, ಇವನ ಮೇಲೆ ಕೇಸ್ ಹಾಕಿ ಎಂದು ಹೇಳಿದರು. ಆದರೆ ಆ ಸರ್ಕಲ್ ಇನ್‌ಸ್ಪೆಕ್ಟರ್ ಉತ್ತರ ಕೊಟ್ಟಿದ್ದು ಏನು ಗೊತ್ತೇ? ' ಇಲ್ಲಿ ನಾನು ಕೇಸು ದಾಖಲೆ ಮಾಡುವುದಿಲ್ಲ. ಪೋಲೀಸ್ ಸ್ಟೇಷನ್‌ಗೆ ಬಂದು ಕಂಪ್ಲೇಂಟ್ ಕೊಡಿ ಎಂದು ಅಧ್ಯಕ್ಷರೇ, ಅಲ್ಲೇನೇ, ಯಾರು ಅಂಗಡಿಗಳ ಮೇಲೆ ಕಲ್ಲುಗಳನ್ನು ಹೊಡೆದಿದ್ದರೋ ಅ ವ್ಯಕ್ತಿಗಳನ್ನು ಅಲ್ಲೇ ಬಂಧಿಸಿದ್ದರೆ, ಆ ವ್ಯಕ್ತಿಗಳ ಬಗ್ಗೆ ಕ್ರಮ ತೆಗೆದುಕೊಂಡಿದ್ದರೆ, ತಕ್ಷಣವೇ ಭದ್ರಾವತಿಯಲ್ಲಿ ಏನೂ ಆಗುತ್ತಿರಲಿಲ್ಲ. ಮೆರವಣಿಗೆ ಮುಂದೆ ಹೋಯಿತು. ರಾಘವೇಂದ್ರಸ್ವಾಮಿ ಮಠದ ಮೇಲೆ ಕಲ್ಲುಗಳನ್ನು ಹೊಡೆದರು. ಹಾಗೆಯೇ ಮುಂದಕ್ಕೆ ಹೋದಾಗ, ವಾಗೇಶ್ ಥಿಯೇಟರ್‌ಗೆ ಸುಮಾರು ಇನ್ನೂರು-ಮುನ್ನೂರು ಜನ ನುಗ್ಗಿದರು. ವಾಗೇಶ್ ಥಿಯೇಟರ್‌ನಲ್ಲಿ ನಡೆಯಬಾರದಂಥ ಗಲಾಟೆಯಾಯಿತು. ಹೆಣ್ಣುಮಕ್ಕಳ ಮೇಲೆ ಕೈಮಾಡಿದರು. ಬಟ್ಟೆಹರಿದರು, ಬಂಗಾರ ಕಸಿದುಕೊಂಡರು. ಇನ್ನುಮುಂದೆ ನಡೆದ ಘಟನೆಯನ್ನು ನಾನು ಈ ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ನ್ಯಾಯಾಂಗ್ ತನಿಖೆಯಾಗಲಿ; ಆಗ ಎಲ್ಲವೂ ಗೊತ್ತಾಗುತ್ತದೆ. ಹಿಂದೂ ಹೆಣ್ಣುಮಕ್ಕಳ ಮೇಲೆ ಏನೇನು ನಡೆಯಿತು, ಎಂದು ಹೇಳುವುದಕ್ಕೆ ನನಗೆ ಸಂಕೋಚ ಹಾಗೂ ನಾಚಿಕೆಯಾಗುತ್ತದೆ. ನಾನು ಏತಕ್ಕೆ ಇದನ್ನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ ಎಂದರೆ, ಈ ಘಟನೆಗೆ ಮೂಲವನ್ನು ನಾವು ಹುಡುಕಬೇಕಾಗಿದೆ. ಯಾವ ವ್ಯಕ್ತಿಗಳು ಮೂಲತ: ಈ ದುಷ್ಕೃತ್ಯಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೋ, ಅವರು ಹಿಂದೂ ಇರಲಿ, ಮುಸ್ಲಿಂ ಇರಲಿ, ಆ ವ್ಯಕ್ತಿಗಳನ್ನು ಗಮನಿಸಿ ತಕ್ಷಣ ಸೂಕ್ತ ಕ್ರಮ ತೆಗೆದುಕೊಂಡರೆ, ಈ ರಾಜ್ಯದಲ್ಲಿ, ಈ ದೇಶದಲ್ಲಿ ಮುಂದೆಂದೂ ಇಂತಹ ಘಟನೆಗಳು ನಡೆಯಲಿಕ್ಕಿಲ್ಲ. ಹಿಂದೆ ಆ ಸರ್ಕಲ್ ಇನ್‌ಸ್ಪೆಕ್ಟರ್ ಬಗ್ಗೆ ವರದಿ ಇತ್ತು. ಆತನನ್ನು ಸಸ್ಪೆಂಡ್ ಮಾಡಬೇಕೆಂದು ಒತ್ತಾಯ ಇತ್ತು. ಆದರೆ ಅವನನ್ನು ಹಾಗೆಯೇ ಮುಂದುವರೆಸಿದರು. ಈಗ ಶಿವಮೊಗ್ಗ ಜಿಲ್ಲೆಯಲ್ಲಿ ಎಲ್ಲಾ ಪಕ್ಷಗಳೂ ಸೇರಿ, ಬೇರೆ ಬೇರೆ ವರ್ತಕರು ಎಲ್ಲಾ ಸೇರಿ, ಒತ್ತಾಯ ಮಾಡಿದ ನಂತರ, ಆ ವ್ಯಕ್ತಿಗೆ ಬಲಾತ್ಕಾರದ ನಾಲ್ಕುದಿನ ರಜೆ ಕೊಟ್ಟು ಆಮೇಲೆ ಆತ ಇಷ್ಟಪಟ್ಟ ಸ್ಥಳಕ್ಕೆ ವರ್ಗಾವಣೆ ಮಾಡಿದರು. ವಾಗೇಶ್ ಚಿತ್ರಮಂದಿರದಲ್ಲಿ ಈ ಘಟನೆ ನಡೆದ ನಂತರ ಏಕೆಂದರೆ ಆ ಸಮಯದಲ್ಲಿ ಗ್ರಾಮಾಂತರ, ನಗರ ಪ್ರದೇಶದ ಜನರು ಸಿನೇಮಾಕ್ಕೆ ಹೋಗಿರುತ್ತಾರೆ. ಕಣ್ಣಿಂದ ನೋಡಿದ ಜನರು ಇದ್ದರು. ಅವರವರ ಊರಿಗೆ, ಅವರವರ ಹಳ್ಳಿಗೆ ಅವರು ಓಡಿದರು. ಸುದ್ದಿ ಊರೆಲ್ಲಾ ಹರಡಿ, ಭದ್ರಾವತಿಯಲ್ಲಿ ಗಲಾಟೆ ಶುರುವಾಯಿತು. ಅಧ್ಯಕ್ಷರೇ, ನಾನ್ಯಾಕೆ ಈ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ ಎಂದರೆ, ಯಾವ ವ್ಯಕ್ತಿ ತಪ್ಪು ಮಾಡುತ್ತಾನೆ ಎಂದು ಗೊತ್ತಾದಾಗ, ತಕ್ಷಣ ಬೇರೆ ಯಾವ ವ್ಯಕ್ತಿಗಳೂ ನಿಮ್ಮ ಸಹಾಯಕ್ಕೆ ಬರುವುದಿಲ್ಲ, ನಾವು ನಿಮ್ಮ ರಕ್ಷಣೆಗೆ ಬರುವುದಿಲ್ಲ ಎನ್ನತಕ್ಕಂಥ ಎಚ್ಚರಿಕೆಯನ್ನು ಎಲ್ಲಾ ಪಕ್ಷಗಳ ವ್ಯಕ್ತಿಗಳು ಕೊಟ್ಟಾಗ, ಅಂತಹ ಸಂದರ್ಭದಲ್ಲಿ ಆ ರಾಷ್ಟ್ರದ್ರೋಹಿ ವ್ಯಕ್ತಿಗಳು ಇಂತಹ ಕೃತ್ಯ ಮಾಡುವುದಕ್ಕೆ ಹಿಂದೇಟು ಹಾಕುತ್ತಾರೆ. ಅಲ್ಲಿಂದಲೇ ಗೊಂದಲ ಶುರುವಾಯಿತು. ಎಷ್ಟೆಂದರೆ ಅಧಕ್ಕೆ ಲೆಕ್ಕವೇ ಇಲ್ಲ. ನಾನು ಜಿಲ್ಲಾಧಿಕಾರಿಗಳ ಹತ್ತಿರ ಹೋಗಿ ಮಾತನಾಡಿದೆ. ಇಷ್ಟು ಗಲಾಟೆ ನಡೆಯುತ್ತಿದೆ, ತುಂಬಾ ಅನ್ಯಾಯ ನಡೆಯುತ್ತಿದೆ, ಅಮಾಯಕರನ್ನು

ಬಂಧಿಸುತ್ತಿದ್ದಾರೆ, ದಯವಿಟ್ಟು ಇದನ್ನು ನಿಲ್ಲಿಸಿ, ಎಷ್ಟು ದಿವಸ ಅಂತ ಇದನ್ನು ಮುಂದುವರೆಸಿಕೊಂಡು ಹೋಗುತ್ತೀರಿ? ಈ ಮಾತನ್ನು ನಾವು ಹೇಳಿದರೂ ಕೂಡ, ಅವರು ಕ್ರಮತೆಗೆದುಕೊಳ್ಳಲಿಲ್ಲ. ಈ ಬಗ್ಗೆ ಕಾಂಗ್ರೆಸ್ (ಐ)ನ ತಾಲ್ಲೂಕು ಅಧ್ಯಕ್ಷರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ:-

'ಕಳೆದವಾರ ಭದ್ರಾವತಿಯಲ್ಲಿ ಸಂಭವಿಸಿದ ಗಲಭೆ ಸಂಬಂಧದಲ್ಲಿ ಪೋಲೀಸರು ಇಂದಿಗೂ ನಿರಪರಾಧಿಗಳನ್ನು ಬಂಧಿಸುತ್ತಿರುವ ಬಗ್ಗೆ ತಾಲ್ಲೂಕು ಕಾಂಗ್ರೆಸ್(ಐ) ಅಧ್ಯಕ್ಷ ಎಸ್.ಜಿ.ಕೃಷ್ಣೇಗೌಡ ಆತಂಕ ವ್ಯಕ್ತಪಡಿಸಿದ್ದಾರೆ. ನಿರಪರಾಧಿಗಳನ್ನು ಬಿಡುಗಡೆ ಮಾಡದಿದ್ದಲ್ಲಿ ಭದ್ರಾವತಿಯಲ್ಲಿ ಕಾಂಗೈ ಸೋಲು ಖಚಿತವೆಂದು ಅವರು ನೊಂದು ನುಡಿದಿದ್ದಾರೆ...

**4.30ಪಿ.ಎಂ**

ಅಲ್ಲಿ ದಿನವೂ ರಾತ್ರಿ ಬೆಳಗ್ಗೆ ಯಾರ್‍ಯಾರೋ ಮನೆಗೆ ಹೋಗುವುದು ಅರ್‍ಸ್ಟ್ ಮಾಡಿ ಕರೆದುಕೊಂಡು ಹೋಗಿ ಜೈಲಿಗೆ ಹಾಕುವುದು ಇವತ್ತಿನವರೆಗೂ ನಡೆಯುತ್ತಿದೆ. ಯಾರು ದುಷ್ಕೃತ್ಯವನ್ನು ಮಾಡಲು ಪ್ರಯತ್ನ ಮಾಡಿದರೋ ಯಾರು ಕಲ್ಲು ಹೊಡೆದರೋ ಅಂತಹ ವ್ಯಕ್ತಿಗಳನ್ನು ಅವತ್ತೇ ಅರೆಸ್ಟ್ ಮಾಡಿ ಅವತ್ತೇ ಜೈಲಿಗೆ ಕಳುಹಿಸಿಬಿಟ್ಟಿದ್ದರೆ ಇವತ್ತಿನ ದಿವಸ ಈ ವಿಧಾನ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬರುತ್ತಿರಲಿಲ್ಲ. ಅನೇಕ ವ್ಯಕ್ತಿಗಳು ಈ ಭದ್ರಾವತಿ ಗಲಭೆಗೂ ಬೇರೆ ಗಲಭೆಗೂ ಏನು ಸಂಬಂಧವೆಂದು ಕೇಳಿದ್ದಾರೆ. ಹುಬ್ಬಳ್ಳಿಗೆ ಸಂಬಂಧ ತೋರಿಸುವುದಕ್ಕೆ ಕೆಲವರು ಹೊರಟ್ಟಿದ್ದಾರೆ? ಏಕೆಂದರೆ ಸನ್ಮಾನ್ಯ ಮುಖ್ಯಮಂತ್ರಿ ವೀರಪ್ಪಮೊಯ್ಲಿಯವರು ಹುಬ್ಬಳ್ಳಿ ಗಲಭೆ ಆದ ದಿನ ಅವರು ನೇರವಾಗಿ ಭಾರತೀಯ ಜನತಾ ಪಕ್ಷದ ಮೇಲೆ ಅಪಾದನೆ ಮಾಡಿದರು. ಆ ಸಾವಿಗೆ ಬಿ.ಜೆ.ಪಿ. ಕಾರಣ ಎಂದು ಹೇಳಿದರು ಭದ್ರಾವತಿಗೆ ಅವರು ಬಂದಿದ್ದರು. ಭದ್ರಾವತಿಯಲ್ಲಿ ಭಾರತೀಯ ಜನತಾ ಪಕ್ಷದ ಕೈವಾಡ ಇದ್ದಿದ್ದರೆ ನೇರವಾಗಿ ಮುಖ್ಯಮಂತ್ರಿಗಳು ಹೇಳುತ್ತಿದ್ದರು. ಅವರು ಬಿಡುತ್ತಿರಲಿಲ್ಲವೆಂದು ನನಗೆ ಗೊತ್ತಿದೆ. ಆದರೆ ಅವರು ಹೇಳಲಿಲ್ಲ. ಈಗಲೂ ಹೇಳಲಿ, ನಮ್ಮ ಪಕ್ಷ ಇದಕ್ಕೆ ಕಾರಣ ಅಂದರೆ ನಾವು ಯಾವುದಕ್ಕೂ ಕೂಡ ತಯಾರು. ಕೆ.ಸಿ.ಪಿ.ಮುಖಂಡರಾದ ಸನ್ಮಾನ್ಯ ಬಂಗಾರಪ್ಪನವರು ಅವರು ಈ ಸದನವನ್ನು ಈ ರೀತಿ ಚಿತಾವಣೆಗೆ ಬಳಸಿಕೊಳ್ಳುತ್ತಿದ್ದಾರಲ್ಲಾ ಇದು ನ್ಯಾಯವೇ ಎಂದು ಮಾತ್ರ ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆಯೇ ಹೊರತು ಬೇರೇನೂ ಕೇಳುವುದಕ್ಕೆ ಇಷ್ಟಪಡುವುದಿಲ್ಲ. ಏಕೆಂದರೆ ನಮ್ಮ ಮೇಲೆ ಆಪಾದನೆ ಹೊಸದೇನೂ ಅಲ್ಲ. ಈ ದೇಶದ ವಿಚಾರ ಬಂದಾಗ ಅದು ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿಯವರೆಗೂ ಭೂಮಿ ವಿಚಾರ ಬಂದಾಗ ಈ ದೇಶದ ಶ್ರದ್ಧಾ ಭಕ್ತಿಗಳ ವಿಚಾರ ಬಂದಾಗ ಹೊಂದಾಣಿಕೆಯ ಪ್ರಶ್ನೆ ಇಲ್ಲ. ರಾಷ್ಟ್ರೀಯ ವಿಚಾರ ಬಂದಾಗ ಕೇವಲ ಓಟಿನ ರಾಜಕೀಯ ಮಾಡಲು ಭಾರತೀಯ ಜನತಾ ಪಕ್ಷ ಇಷ್ಟಪಡುವುದಿಲ್ಲ. ಇವತ್ತೇ ಅಧಿಕಾರಕ್ಕೆ ಬರಬೇಕು ಎನ್ನುವ ಆಸೆ ಕೂಡ ನಮಗೆ ಇಲ್ಲ. 1956ನೇ ಇಸವಿಯಲ್ಲಿ ಈ ಪಕ್ಷ ಪ್ರಾರಂಭವಾಗಿದ್ದು. ಮಂತ್ರಿಗಳಾಗಬೇಕು ಎಂದು ಎಲ್ಲಾ

ರಾಜಕೀಯ ಪಕ್ಷಗಳು ರಾಜಕೀಯ ನಡೆಸುತ್ತಿರುವಂತಹ ಸಂದರ್ಭದಲ್ಲಿ ಮಂತ್ರಿಸ್ಥಾನಕ್ಕೆ ರಾಜೀನಾಮೆ ಕೊಟ್ಟು ಬಂದಂತಹ ವ್ಯಕ್ತಿ ಡಾಕ್ಟರ್ ಶಾಮಾಪ್ರಸಾದ್ ಮುಖರ್ಜಿ ಪ್ರಾರಂಭ ಮಾಡಿದ ಪಕ್ಷ ಇದು. ಕೇವಲ ಅಧಿಕಾರಕೋಸ್ಕರವೇ ಕೆಲಸ ಮಾಡಬೇಕೆಂಧಿದ್ದರೆ ನೂರ ಎಂಟು ಪಕ್ಷಗಳನ್ನು ಬಂಗಾರಪ್ಪನವರು ಬದಲಾವಣೆ ಮಾಡಿದಂತೆ ನಾವು ಕೂಡ ಮಾಡುತ್ತಿದ್ದೆವು. ಕೇವಲ ಪಕ್ಷ ಪಕ್ಷಾಂತರ ಅಲ್ಲ, ಅಧಿಕಾರದ ಸ್ಥಾನ ಮತ್ತು ಮುಖ್ಯಮಂತ್ರಿ ಗದ್ದುಗೆ ಕೇವಲ ನಮ್ಮ ಗುರಿ ಅಲ್ಲ. ಈ ರಾಜ್ಯ ಈ ದೇಶ ಮತ್ತೆ ವಿಶ್ವದಲ್ಲಿ ತಲೆ ಎತ್ತಿ ನಿಲ್ಲಬೇಕು. ಸ್ವಾಭಿಮಾನ ಭಾರತ ಆಗಬೇಕು ಎನ್ನುವ ಅಪೇಕ್ಷೆಯಿಂದ ಈ ಒಂದು ಸಿದ್ಧಾಂತವನ್ನು ಹೊಂದಿಕೊಂಡು ಈ ಮಣ್ಣನ್ನು ಮಾತೃಭೂಮಿ ಎಂದು ಸ್ವೀಕಾರ ಮಾಡಬೇಕು ಎನ್ನುವ ಅಪೇಕ್ಷೆಯಿಂದ ಈ ದೇಶದಲ್ಲಿ ಹಿಂದುಗಳು, ಮುಸಲ್ಮಾನರು, ಕ್ರಿಶ್ಚಿಯನ್ನರು ಹೀಗೆ ಪ್ರತಿಯೊಬ್ಬರೂ ಇದನ್ನು ಮಾತೃಭೂಮಿ ಎಂದು ಸ್ವೀಕಾರ ಮಾಡಿ ಮತ್ತೇ ಸ್ವಾಭಿಮಾನದ ಭಾರತವನ್ನು ಕಟ್ಟಬೇಕೆಂದು ಹೊರಟಿರುವ ಪಕ್ಷ ಅಧ್ಯಕ್ಷರೇ ಈ ಬಗ್ಗೆ ನ್ಯಾಯಾಂಗ ತನಿಖೆ ಆಗಬೇಕು ಇದೇ ಸದನದಲ್ಲಿ ನಾನು ಭಟ್ಕಳದ ವಿಚಾರ ಕೂಡ ಪ್ರಸ್ತಾಪ ಮಾಡಿದೆ. ಅಂಜನೇಯಸ್ವಾಮಿ ರಥೋತ್ಸವ ಹೋಗುತ್ತಿರುವಂತಹ ಸಂದರ್ಭದಲ್ಲಿ ಗಲಭೆ ಆಯಿತು. .ಅವತ್ತೂ ನಮ್ಮ ಮೇಲೆ ಆಪಾದನೆ ಮಾಡಿದರು. ಆಗ ನ್ಯಾಯಾಂಗ ತನಿಖೆ ಆಗಬೇಕೆಂದು ಹೇಳಿದೆ. ನ್ಯಾಯಾಂಗ ತನಿಖೆ ಆಗುತ್ತಿದೆ. ತನಿಖೆಯಾಗುತ್ತಿರುವಂತಹ ಸಂದರ್ಭದಲ್ಲಿ ಇವತ್ತಿನವರೆಗೂ ಕೂಡ ಒಬ್ಬ ವ್ಯಕ್ತಿ ಕೂಡ ಭಾರತೀಯ ಜನತಾಪಕ್ಷ ಆ ಗಲಭೆಗೆ ಕಾರಣ ಎಂದು ಹೇಳಲಿಲ್ಲ. ತನಿಖೆ ಆಗಿ ವರದಿ ಬರಲಿ ಹೊರಗೆ; ಅದರಲ್ಲಿ ನಾವು ತಪ್ಪಿತಸ್ಥರು ಎಂದು ಅದರೆ ಇಡೀ ದೇಶದ ಮುಂದೆ ಕ್ಷಮೆ ಕೇಳುವುದಲ್ಲ, ರಾಜಕೀಯ ಸನ್ಯಾಸ್ಯತ್ವವನ್ನು ಸ್ವೀಕಾರ ಮಾಡುವುದಕ್ಕೆ ನಾವು ತಯಾರಾಗಿದ್ದೇವೆ. ಮಾನ್ಯ ಅಧ್ಯಕ್ಷರೇ, ಈ ಗಲಭೆಯನ್ನು ಯಾವುದೋ ಒಂದು ಧರ್ಮಕ್ಕೆ ಯಾವುದೋ ಒಂದು ಪಕ್ಷಕ್ಕೆ ಹಾಕುವುದಕ್ಕೆ ನಾನು ಇಷ್ಟಪಡುವುದಿಲ್ಲ. ನ್ಯಾಯಾಂಗ ತನಿಖೆ ಆಗಲಿ, ತಪ್ಪಿತಸ್ಥರು ಯಾರು ಎಂಬದು ಹೊರಗೆ ಬರಲಿ. ಮೆರವಣಿಗೆಯಲ್ಲಿ ಆದಘಟನೆ ಏನು? ಸರ್ಕಲ್ ಇನ್ಸ್‌ಪೆಕ್ಟರ್ ಮಾಡಿದ್ದೇನು? ವರ್ತಕರ ಮೇಲೆ ಅವರ ಬೇಡಿಕೆಗಳು ಏನು ಎಂಬುದೆಲ್ಲಾ ಹೊರಬರಲಿ. ಈಗ ಹೇಳುವುದು ಇಷ್ಟೇ, ಭದ್ರಾವತಿಯಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಬೇಕಾದಂತಹ ಕರ್ತವ್ಯ ಈ ಸದನದಲ್ಲಿರತಕ್ಕಂಥ ಪ್ರತಿಯೊಬ್ಬ ವ್ಯಕ್ತಿಗೂ ಇದೆ. ಎಲ್ಲ ಪಕ್ಷಗಳ ನಾಯಕರುಗಳ ಕರ್ತವ್ಯ ಇದೆ. ನಾವೆಲ್ಲರೂ ಸೇರಿ ಭದ್ರಾವತಿಯಲ್ಲಿ ಶಾಂತಿ ನೆಲೆಸುವ ದಿಕ್ಕಿನಲ್ಲಿ ಪ್ರಯತ್ನ ಮಾಡೋಣ. ಇದರಲ್ಲಿ ರಾಜಕೀಯ ದಯವಿಟ್ಟು ಮಾಡುವುದು ಬೇಡ. ಈಗ ಯಾರು ನಿರಪರಾಧಿಗಳು ಇದ್ದಾರೆ, ಅವರನ್ನು ಬಂಧಿಸಿದ್ದಾರೆ. ನನಗೆ ಸುದ್ದಿ ಬಂದಿದೆ, ವೀಡಿಯೋ ಕ್ಯಾಸೆಟ್ 3 ತೆಗೆದಿದ್ದಾರೆ ಎಂದು ಆ ಮೂರು ಕ್ಯಾಸೆಟ್‌ನಲ್ಲಿ ಯಾರ್‍ಯಾರು ಹಿಂದುಗಳು ಇರಲಿ ಮುಸಲ್ಮಾನರು ಇರಲಿ ಈ ಬೆಂಕಿ ಹಚ್ಚುವ ಕೃತ್ಯ ಮಾಡಿದ್ದಾರೆ ಯಾರು ದೇಶದ್ರೋಹದ ಕೃತ್ಯ ಮಾಡಿದ್ದಾರೆ ಅವರನ್ನು 3 ದಿನ ಅಲ್ಲ ಮೂರು ವರ್ಷ ಆದರೂ ಬಿಡಬೇಡಿ. 30 ವರ್ಷ ಜೈಲಿನಲ್ಲಿ ಸಾಯಲಿ ಅವರು. ಆದರೆ ನಿರಪರಾಧಿ ಯುವಕರು ಓದುತ್ತಿರುವಂತಹ ವಿದ್ಯಾರ್ಥಿಗಳನ್ನು ಕಾರ್ಮಿಕರನ್ನು ಅರೆಸ್ಟ್‌ಮಾಡಿ ಜೈಲಿನಲ್ಲಿ ಇಟ್ಟುಬಿಟ್ಟಿದ್ದಾರೆ. ನಾನು ಅದಕೋಸ್ಕರ ಸನ್ಮಾನ್ಯ

ಮುಖ್ಯಮಂತ್ರಿಗಳನ್ನು ಈ ಸದನದ ಮುಖಾಂತರ ಕೈ ಮುಗಿದು ಕೇಳುವುದು, ನಿರಪರಾಧಿ ವ್ಯಕ್ತಿಗಳನ್ನು ಬಿಡುಗಡೆ ಮಾಡಿ. ಯಾರು ಈ ರೀತಿ ಕೃತ್ಯ ಮಾಡಿದ್ದಾರೋ ಅಂತಹ ವ್ಯಕ್ತಿಗಳನ್ನು ಬಂಧಿಸಿ ಕ್ರಮ ತೆಗೆದುಕೊಳ್ಳಿ. ಅಲ್ಲಿ ಯಾರು ಸರ್ಕಲ್ ಇನ್ಸ್‌ಪೆಕ್ಟರ್ ಇದ್ದಾರೆ ಅವರ ವರ್ಗಾವಹಿಯಿಂದ ಮಾತ್ರ ಇದು ಬಗೆಹರಿಯಲಿಕ್ಕೆ ಇಲ್ಲ ಆ ವ್ಯಕ್ತಿಯನ್ನು ಸಸ್ಪಂಡ್‌ನಲ್ಲಿ ಇಟ್ಟು ತನಿಖೆ ನಡೆಸಬೇಕೆಂದು ಮಾತ್ರ ನಾನು ಈ ಸಂದರ್ಭದಲ್ಲಿ ತಿಳಿಸುತ್ತಾ, ಅಧ್ಯಕ್ಷರೇ, ಇಷ್ಟು ಮಾತ್ರ ಹೇಳಿ ನ್ಯಾಯಾಂಗ ತನಿಖೆಯನ್ನು ಮಾಡಿ ಆ ಮುಖಾಂತರ ಯಾರ್‍ಯಾರು ತಪ್ಪಿತಸ್ಥರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಇಡೀ ಪೋಲೀಸ್ ಇಲಾಖೆ ಮೇಲೆ ನಾನು ಆರೋಪ ಮಾಡಲಿಕ್ಕೆ ಇಷ್ಟಪಡುವುದಿಲ್ಲ. ಅನೇಕ ಪೋಲೀಸ್ ಅಧಿಕಾರಿಗಳು ಅವರ ಪ್ರಾಣವನ್ನು ಹೊತ್ತೇ ಇಟ್ಟು ಶಾಂತಿ ಕಾಪಾಡುವುದಕ್ಕೆ ಪ್ರಯತ್ನಮಾಡಿದ್ದಾರೆ. ಅವರಿಗೆ ನಾನು ಈ ಸದನದ ಮುಖಾಂತರ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಯಾರು ಸರ್ಕಲ್ ಇನ್ಸ್‌ಪೆಕ್ಟರ್ ಇದ್ದಾರೆ, ಅವರನ್ನು ಸಸ್ಪಂಡ್‌ನಲ್ಲಿಟ್ಟು ತನಿಖೆ ಮಾಡಿ; ಜೊತೆಗೆ ಯಾರು ನಿರಪರಾಧಿಗಳು ಇದ್ದಾರೆ ಅವರನ್ನು ಬಿಡುಗಡೆ ಮಾಡಲಿಕ್ಕೆ ಪ್ರಯತ್ನ ಮಾಡಬೇಕೆಂದು ಮಾತ್ರ ಈ ಸಂದಭದಲ್ಲಿ ಒತ್ತಾಯ ಮಾಡಿ ಶಾಂತಿ ನೆಲೆಸುವ ದಿಕ್ಕಿನಲ್ಲಿ ನಾವೆಲ್ಲಾ ಮತ್ತೊಮ್ಮೆ ಪ್ರಯತ್ನ ಮಾಡೋಣ ಎನ್ನುವ ಮಾತನ್ನು ಹೇಳಿ ಮತ್ತೊಮ್ಮೆ ನ್ಯಾಯಾಂಗ ತನಿಖೆಗೆ ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಶ್ರೀ ಡಿ ಬಿ ಚಂದ್ರೇಗೌಡ(ತೀರ್ಥ ಹಳ್ಳಿ):- ಮಾನ್ಯ ಅಧ್ಯಕ್ಷರೇ, ಈ ವಿಚಾರ ಪ್ರಸ್ತಾಪ ಮಾಡುವುದಕ್ಕೆ ಮುನ್ನ ಒಂದು ಹೇಳಿಕೆಯನ್ನು ಸರ್ಕಾರ ಕೊಟ್ಟಿದ್ದರೆ ಆ ಹೇಳಿಕೆ ಮೇಲೆ ಚರ್ಚೆ ಮಾಡಲು ಅನುಕೂಲಕರವಾದ ವಾತಾವರಣ ಸೃಷ್ಟಿ ಆಗುತ್ತಿತು. ನಾವು ನೋಟಿಸ್ ಕೊಟ್ಟು ವಾರಗಳಗಟ್ಟಲೇ ಆಯಿತು; ಸರ್ಕಾರದ ಕಡೆಯಿಂದ ಯಾವ ಹೇಳಿಕೆಗಳು ಬರಲಿಲ್ಲ. ಕೊನೆಗೆ ಏನಾಗಿದೆ ಈಗ ಅಂದರೆ ನಮಗೆ ತಿಳಿದಿದ್ದನ್ನು ನಾವು ಹೇಳುವುದು; ಅವರಿಗೆ ತಿಳಿದಿದ್ದು ಅವರು ಮಾಡುವುದು, ಒಟ್ಟಿನಲ್ಲಿ ಪ್ರಸ್ತಾಪ ಮಾಡಿದೆವು ಎಂದು ಆಗಬೇಕು ನಿಜವಾದ ಕಳಕಳಿ ಇಲ್ಲಿ ನಮಗೆ ಕಂಡು ಬರಲಿಲ್ಲ. ನಾನು ಇದರ ತೀರ ವಿಷಯದ ವ್ಯಾಪ್ತಿಗೆ ಹೋಗುವುದಿಲ್ಲ. ಬಹಳ ಮುಖ್ಯವಾಗಿ ಒಂದೆರಡು ದಿವಸಗಳಲ್ಲಿ ಗೌರಿ ಗಣೇಶ ಹಬ್ಬ ಬರುವುದು ಇದೆ. ಅಂತಹ ಸಂದರ್ಭದಲ್ಲಿ ಈ ರಾಜ್ಯದಲ್ಲಿ ಶಾಂತಿ ಸಮಾಧಾನದ ಸಂದೇಶವನ್ನು ಮಾತ್ರ ನಾವು ಇಲ್ಲಿಂದ ಕೊಡಬೇಕೇ ಹೊರತು ಅದಕ್ಕೆ ಮತ್ತಷ್ಟು ಉರಿಯುವ ಗಾಯಕ್ಕೆ ಉಪ್ಪು ಹಾಕುವುದು ಆಗಲಿ ಅಥವಾ ಹತ್ತಿರತಕ್ಕಂಥ ಬೆಂಕಿಗೆ ತುಪ್ಪ ಹಾಕತಕ್ಕಂಥ ಕೆಲಸಮಾಡುವುದಕ್ಕೆ ಆಗಲಿ ಹೋಗುವುದಿಲ್ಲ. ಬಹಳ ಮುಖ್ಯವಾಗಿ ಇಲ್ಲಿ ಗಮನಿಸಬೇಕಾದದು ಏನೆಂದರೆ, ಆಗಸ್ಟ್ 15ನೇ ತಾರೀಖು ಹುಬ್ಬಳ್ಳಿಯಲ್ಲಿ ನಡೆದಂತಹ ಗಲಭೆ ವಿಶೇಷವಾಗಿ ನಮ್ಮ ಪೋಲೀಸ್ ಇಲಾಖೆಯ ಗಮನದಲ್ಲಿರಬೇಕಾಗಿತ್ತು.20-21ನೇ ತಾರೀಖು....

### ಪ್ರಕಟಣೆ

Mr.Speaker:- An Announcement. In Australian Delegation led by Mr.Cleve Griffths, President of Legislative Council of Western Australia are in the speaker's gallery. On behalf of the Members of the House and on my own behalf. I extend to the Members of the Delegation a cordial welcome.

Sri M Veerappa Moily(Chief Minister):-Mr. Speaker Sir, I also join with you to welcome the Australian Delegation led by Mr.Cleve Griff, President of Legislative Council of Western Australia and wish them all well.

Sri R.V Deshpande(Leader of the Opposition):- Mr.Speaker, I am very happy that the Australian Delegation led by the Legislative Council President is here. I join you in welcoming them.

ಶ್ರೀ ಡಿ.ಬಿ.ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ ಭದ್ರಾವತಿ ವಿಷಯವನ್ನು ಪ್ರಸ್ತಾಪ ಮಾಡುತ್ತಾ ನಾನು ಎರಡು ವಿಚಾರ ಹೇಳಿದೆ. ಏನೆಂದರೆ, ಸರ್ಕಾರದ ಹೇಳಿಕೆ ಬಂದಿದ್ದರೆ ಅದು ಚರ್ಚೆಗೆ ಒಳ್ಳೆಯ ವೇದಿಕೆಯನ್ನು ನಿರ್ಮಾಣ ಮಾಡುತ್ತಿತ್ತು ಎಂದು ಹಾಗೂ ಎರಡನೇಯದು ನಮ್ಮ ರಾಜ್ಯದಲ್ಲಿ ಕೆಲವು ಏರಿಯಾಗಳನ್ನು ತುಂಬಾ ಸೂಕ್ಷ್ಮವಾದ ಏರಿಯಾಗಳು ಎಂದು ಗುರುತಿಸಿದ್ದಾರೆ. ಆ ಸೂಕ್ಷ್ಮವಾದ ಪ್ರದೇಶಗಳಲ್ಲಿ ನನಗೆ ಗೊತ್ತಿರುವ ಹಾಗೆ ಭದ್ರಾವತಿ ಒಂದು. ಶಿವಮೊಗ್ಗ ಸೇರಿದೆ. ಈ ಸೂಕ್ಷ್ಮ ಪ್ರದೇಶಗಳ ಕಡೆಗೆ ಹೆಚ್ಚು ಗಮನ ಪೋಲೀಸ್ ಇಲಾಖೆಗೆ ಇರಬೇಕಾಗಿತ್ತು ಮೂರನೆಯದು ನಮ್ಮ ರಾಜ್ಯದಲ್ಲಿ ಒಂದು ಇಂಟಲಿಜನ್ಸ್‌ವಿಂಗ್ ಇದೆ. ಅದಕ್ಕೆ ನಾವು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. What was this intelligence doing? ಏನಾದರೂ ತಕ್ಷಣ ಊಹೆ ಮಾಡುವುದು ಎನ್ನುವುದು ಕಷ್ಟ. ಆ ಮಾತು ನಿಜ. ನಾಳಿದ್ದು ಗೌರಿ ಗಣೇಶ ಹಬ್ಬದಲ್ಲಿ ಮತ್ತೇ ಗಲಾಟೆ ಆದರೆ ಮತ್ತೆ ಊಹೆ ಮಾಡಿರಲಿಲ್ಲ ಎನ್ನುವ ಮಾತು ನಿಜ. ಇದು ದುರ್ದೈವ. ಈ ದೇಶದಲ್ಲಿ ಇದು ಒಂದು ಸ್ಥಾಪಿತವಾದಂತಹ ವ್ಯವಸ್ಥೆ ಇದೆ. ಇದಕ್ಕಾಗಿಯೇ ಕೆಲವರು ಇದ್ದಾರೆ. ಆ ಜನರನ್ನು ನಿಯಂತ್ರಿಸಲು ಒಂದು ನ್ಯಾಯಾಂಗ ತನಿಖೆ ಅಲ್ಲ ಎರಡು ನ್ಯಾಯಾಂಗ ತನಿಖೆ ಅಲ್ಲ. ಮೂರು ನ್ಯಾಯಾಂಗ ತನಿಖೆ ಮಾಡಿದರೂ ಕೂಡ ರಾಷ್ಟ್ರಪಿತ ಮಹಾತ್ಮಾಗಾಂಧೀಜಿ ಅಂತಹವರು ಕೂಡ ಸ್ವಾತಂತ್ರ್ಯಾ ನಂತರ ನಡೆದ ಘಟನಗೆ ತಮ್ಮ ಜೀವವನ್ನೇ ಒತ್ತೆ ಇಡಬೇಕಾದಂಥ ಪ್ರಸಂಗ ಬಂತು. ಅಷ್ಟುದೂರಕ್ಕೆ ಅವರು ಹೋದರು. ಇಲ್ಲಿ ಇವತ್ತು ಅಂತಹ ನೈತಿಕ ಮಾಲ್ಯಗಳನ್ನು ಹೊತ್ತ

ಜನರು ಈ ರಾಷ್ಟ್ರದಲ್ಲಿ ಅಂತಹ ಯಜಮಾನರು ಇದ್ದಾರೆ ಎಂದು ನಾನು ಹೇಳಲಾರೆ. ಹಾಗೆ ಹೇಳಿಕೊಳ್ಳುವಂತಹ ಪರಿಸ್ಥಿತಿ ಇಲ್ಲ. The personality with the seat of moral authority to represent the whole nation. The other aspect of it is...

*ಒಂದು ಕಡೆ ಆಡಳಿತದ ವೈಫಲ್ಯ, ಅದಕ್ಕೆ ಎರಡು ಕಾರಣಗಳು. ಒಂದು, ಭದ್ರಾವತಿಯಲ್ಲಿ ಇಂತಹ ಪರಿಸ್ಥಿತಿ ಉಂಟಾಗಬಹುದು ಎಂದು ನಿರೀಕ್ಷೆ ಮಾಡದೇ ಇರುವುದು ಒಂದು ಕಾರಣ ಮತ್ತೊಂದು, ಜಿಲ್ಲೆಯ ಆಡಳಿತಕ್ಕೆ ಮತ್ತೊಂದು ದ್ವಂದ್ವವಾಯಿತು. ಭದ್ರಾವತಿಗಿಂತ ಶಿವಮೊಗ್ಗ - ಸೂಕ್ಷ್ಮ, ಪೋಲಿಸರನ್ನು ಇಲ್ಲಿ ಇಡುವುದೋ ಅಲ್ಲಿ ಇಡುವುದೋ? ಮೊದಲೇ ಇದರ ಆಲೋಚನೆ ಇದ್ದಿದ್ದರೆ ಎರಡೂ ಕಡೆಗೆ ಏನಾದರೂ ಒಂದು ವ್ಯವಸ್ಥೆ ಮಾಡಬಹುದಿತ್ತು. ಆದರೆ ಇಲ್ಲಿ ಹೆಚ್ಚು ಸೂಕ್ಷ್ಮ ಎಂದು ಅಲ್ಲಿ ಕಾದರು. ಇಲ್ಲಿ ಗಲಾಟೆಯಾಯಿತು. ಇದು ಮೂರನೇ ಕಾರಣ. ಬಹಳ ಮುಖ್ಯವಾದ ಕಾರಣ ಮತ್ತೊಂದು, ಗಲಭೆಯಾದ ಮೇಲೆ ಕೆಲವು ಮೋಟರ್‌ಸೈಕಲ್‌ಗಳ ನಂಬರ್ ಸಿಕ್ಕಿವೆ. ಸಂಶಯದ ವಿಷಬೀಜ ಬಿತ್ತುತ್ತಾ ಹೋಗುತ್ತಿದ್ದರು, ಹೋದ ಕಡೆಗೆಲ್ಲಾ ಎಲ್ಲಾ ಹಿಂದೂಗಳ ಮನೆಗೆ ನುಗ್ಗಿ ಬಿಟ್ಟಿದ್ದಾರೆ, ಲೂಟಿ ಮಾಡಿಬಿಟ್ಟಿದ್ದಾರೆ, ಹೆಂಗಸರ ಮಾನಹರಣವಾಗಿದೆ – ಈ ತರಹ ಪ್ರಚಾರ, ಅದು ಪ್ರಚೋದನೆಗೆ ಕಾರಣವಾಯಿತು. ಅವರು ಯಾರು? ಆ ಏಳೆಂಟು ಜನ ಮೋಟರ್‌ಸೈಕಲ್ ರೈಡರ್ಸ್ ಗುರುತಿಸಿದ್ದಾರೆ; ಹಾಗೆ ಗುರುತಿಸಿದ ಜನರನ್ನು ಹಿಂದಿನ ದಿವಸ ಸಂಜೆ 6 ಗಂಟೆಗೆ ಅರೆಸ್ಟ್ ಮಾಡುತ್ತಾರೆ. ಬೆಳಿಗ್ಗೆ 6 ಗಂಟೆಗೆ ಅವರು ರಿಲೀಸಾಗುತ್ತಾರೆ. ಜಿಲ್ಲಾಧಿಕಾರಿಗಳಿಗೆ ಗೊತ್ತಿಲ್ಲ ಈ ಸುದ್ದಿ ಯಾರು ಅವರು ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಹೀಗೆ ಸಂಶಯದ ವಿಷಬೀಜ ಬಿತ್ತುವ ಒಂದು ವ್ಯವಸ್ಥಿತ ಶಕ್ತಿ ಇತ್ತಲ್ಲಾ, ಶ್ರೀಮಾನ್ ನಮ್ಮ ಬಿಜೆಪಿ ಅಧ್ಯಕ್ಷರು ಹೇಳಿದರಲ್ಲಾ, ಆ ವ್ಯವಸ್ಥಿತ ಶಕ್ತಿ ಮತ್ತು ವ್ಯಕ್ತಿಗಳನ್ನು ಅರೆಸ್ಟ್ ಮಾಡಿ ಬೆಳಿಗ್ಗೆ 6 ಗಂಟೆ ಒಳಗೆ ಜಿಲ್ಲಾಧಿಕಾರಿಗಳಿಗೂ ಗೊತ್ತಿಲ್ಲದಂತೆ ರಿಲೀಸ್ ಮಾಡಿದ್ದಾರೆ. ಇಂತಹ ಅನೇಕ ಕಾರಣಗಳನ್ನು ನಾವು ಹುಡುಕಬಹುದು. 21ಕ್ಕೆ ಭದ್ರಾವತಿ ಮಹಾನಗರದಲ್ಲಿ ಉಂಟಾದಂಥ ಕೋಮುಗಲಭೆ ನನ್ನ ದೃಷ್ಟಿಯಲ್ಲಿ, ನಾವು ಎರಡೇ ಆಗಿರಬಹುದು; ಹುಬ್ಬಳ್ಳಿಯಲ್ಲಿ ಸಂಖ್ಯೆ ಜಾಸ್ತಿ ಇರಬಹುದು, ಆದರೆ ಇಲ್ಲಿ ಆಗಿರುವಂತಹ ನಷ್ಟ ನಮ್ಮ ಊಹೆಗೆ ನಿಲುಕದೇ ಇರತಕ್ಕಂಥ ನಷ್ಟ; ಒಂದೊಂದು ಸಲ ನಾವು ಜನತಂತ್ರದಲ್ಲಿ ಬದುಕುವುದಕ್ಕೆ ಯೋಗ್ಯರೇ ಎನ್ನುವ ಪ್ರಶ್ನೆ ಕೇಳುವಷ್ಟು ಮುಟ್ಟಿಗೆ ಇಲ್ಲಿ ದೊಂಬಿ ಆಗಿದೆ. ಒಂದೊಂದು ಕಡೆ ಒಂದೊಂದು ವರದಿಗಳಿವೆ; ನನ್ನ ಮಾಹಿತಿ ಪ್ರಕಾರ ಸುಮಾರು 532 ಕುಟುಂಬಗಳು ಬೀದಿಯಲ್ಲಿವೆ. ಹತ್ತಾರು ಜನಕ್ಕೆ ಅನ್ನ ಹಾಕುತ್ತಿದ್ದ ಕುಟುಂಬಗಳು ಇವತ್ತು ಭಿಕ್ಷೆ ಎತ್ತುವ ಪರಿಸ್ಥಿತಿಗಿಳಿದಿವೆ. ಅವುಗಳಲ್ಲಿ ಬಹುತೇಕ ನನ್ನ ಮಾಹಿತಿ ಪ್ರಕಾರ ಸುಮಾರು 400 ಕ್ಕೂ ಹೆಚ್ಚು ಮುಸ್ಲಿಮರ ಮನೆಗಳೇ ಆಗಿವೆ. ಗುರುತಿಸಿ ಗುರುತಿಸಿ ಆ ಮನೆಗಳಿಗೆ ಹೊಡೆದಿದ್ದಾರೆ. ಇಲ್ಲಿ ಕೆಲವು ವಿಚಾರಗಳನ್ನು ಹೇಳುವುದು ಕಷ್ಟ. ನಾನೇ ಹೇಳಿದೆ, ಮುಂದಿನಕೆಲವು ದಿನಗಳು ಸೂಕ್ಷ್ಮವಾಗಿದೆ ಎಂದು, ಆದರೆ ಕೆಲವು ಘಟನೆಗಳನ್ನಾದರೂ ಹೇಳದೇ ಇದ್ದರೆ ನಾವು ಈ ವಿಷಯಕ್ಕೆ ಸಾಕಷ್ಟು ಒತ್ತು ಕೊಟ್ಟಹಾಗೆ ಹಾಗುವುದಿಲ್ಲ. ಹೆಣ್ಣುಮಗಳಿಗೆ ಮದುವೆ ನಿಶ್ಚಯವಾಗಿದೆ, ಒಡವೆ ವಸ್ತ 50 ಸಾವಿರ ದುಡ್ಡು ಒಂದು ಮನೆಯಲ್ಲಿ

ತಂದಿಟ್ಟಿದ್ದಾರೆ. ಇವನ್ನೆಲ್ಲಾ ಲೂಟಿ ಮಾಡಿದ್ದು ಸಾಲದು ಎಂದು ಆ ಹೆಣ್ಣುಮಗಳಿಗೆ ಸೀಮೆಯೆಣ್ಣೆ ಹುಯ್ದಿದ್ದಾರೆ ಯಾರೋ ಮಧ್ಯೆ ಬಿಡಿಸಿದ್ದರಿಂದ ಜೀವ ಉಳಿಯಿತು. ಇಷ್ಟು ಹೇಯವಾದಂಥ ಸ್ಥಿತಿಗೆ ನಮ್ಮ ಜನ ಹೋಗಿದ್ದಾರೆ ಎಂದರೆ, ಇದನ್ನೆಲ್ಲಾ ಒಂದೆರಡು ದಿವಸದಲ್ಲಿ ಸರಿಪಡಿಸುತ್ತೇವೆಂಬುದು ಅಸಾಧ್ಯದ ಮಾತು. ಇನ್ನೂ ಅನೇಕ ಹಾನಿಗಳ ವಿವರ ಕೊಟ್ಟಿದ್ದಾರೆ. ತಕ್ಷಣ ನನಗೆ ಬಂದಿರುವ ಮಾಹಿತಿ ಪ್ರಕಾರ ಅಲ್ಲಿ ಶಾಂತಿ ಇದೆ; ಅದನ್ನು ಕಾದು ಕೊಂಡುಬರಬೇಕಷ್ಟೇ ಮತ್ತೆ ಯಾರಾದರೂ ಬೆಂಕಿ ಹಚ್ಚದ ಹಾಗೆ ನೋಡಿಕೊಳ್ಳಬೇಕು. ಮತ್ತು ಇದನ್ನೇ ಒಂದು ಆಧಾರವಾಗಿಟ್ಟುಕೊಡು ನ್ಯಾಯಾಂಗ ತನಿಖೆಯಾಗಬೇಕೆಂದು ಏನು ನಮ್ಮ ಸ್ನೇಹಿತರ ಬೇಡಿಕೆ ಇದೆ, ಅದಕ್ಕೆ ನನಗೂ ಸಹಮತ ಇದೆ, ನಮ್ಮ ಪಕ್ಷದ ಸಹಮತ ಇದೆ. ನ್ಯಾಯಾಂಗ ತನಿಖೆಯಾಗಬೇಕು. ಆದರೆ ಈ ತನಿಖೆ ನೆಪದಲ್ಲಿ ವರ್ಷಾನುಗಟ್ಟಲೆ ಕಳೆದುಬಿಟ್ಟರೆ ಮತ್ತೊಂದು ಪ್ರಾರ್ಥನಾ ದಿವಸ ಬರುತ್ತದೆ. ಅಷ್ಟರವರೆಗೂ ವರದಿ ಬಂದಿರುವುದಿಲ್ಲ. ಆದ್ದರಿಂದ ಒಂದು ಸ್ಪೀಡಿ ರೆಮಿಡಿ ಬೇಕು ಅಂದರೆ ನ್ಯಾಯಾಂಗ ತನಿಖೆಯಾಗಬೇಕು. ಆ ತನಿಖೆಯಲ್ಲಿ ಅವು ರಾಜಕೀಯ ಪಕ್ಷ ಇರಬಹುದು, ವ್ಯಕ್ತಿಗಳಿರಬಹುದು, ಶಕ್ತಿಗಳಿರಬಹುದು, ಲೂಟಿ ಮಾಡುವುದಿದೆಯಲ್ಲಾ ನಮಗೆ ಬಂದಿರತಕ್ಕಂಥ ಅಂದಾಜು ಸುಮಾರು 4 ಕೋಟಿಗೂ ಮೀರಿ ಅಲ್ಲಿ ಲುಕ್ಸಾನಾಗಿದೆ. ಮನೆಗಳಿರಬಹುದು, ವಾಹನಗಳಿರಬಹುದು, ರೇಡಿಯೋಗಳು, ಟಿವಿಗಳು ಇವೆಲ್ಲವನ್ನೂ ನೀವು ರಿಪ್ಲೇಸ್ ಮಾಡಿಕೊಡಬಹುದು. ಆದರೆ ಮನಸನ್ನು ಒಂದು ಮಾಡುವ ಕೆಲಸ ಬಹಳ ಕಷ್ಟದ ಕೆಲಸ. ನನ್ನ ಸ್ನೇಹಿತರಲ್ಲೂ ನಾನು ಮನವಿ ಮಾಡುತ್ತೇನೆ, ಇದನ್ನು ಹೆಚ್ಚು ನಂಬಿಸಬೇಡಿ. ಮುಖ್ಯಮಂತ್ರಿಗಳು ಇರತಕ್ಕಂಥ ವಸ್ತುಸ್ಥಿತಿಯನ್ನು ಸದನದ ಮುಂದಿಡಬೇಕು, ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿದ್ದೇನೆಂಬ ಮಾತು ಅವರಿಂದ ಬರಬೇಕು. ಯಾರು ಆಸ್ತಿಪಾಸ್ತಿ ಕಳೆದುಕೊಂಡಿದ್ದಾರೆ, ಅವರಿಗೆ ಸೂಕ್ತವಾದಂಥ ಪರಿಹಾರ ಆಗಬೇಕು. ಮಾಡಿರುವವರು ಯಾರೋ? ಪರಿಹಾರಕ್ಕೆ ಸರ್ಕಾರ ಮುಂದಕ್ಕೆ ಹೋಗಬೇಕು. ಅಲ್ಲಿ ಫ್ಲಡ್ ಬಂತು, ಬರಬಂತು ಪರಿಹಾರ ಕೊಡಿ, ಬೆಳಿಗ್ಗೆ ಸಂಜೆ ಮನೆ ಸುಟ್ಟುಕೊಂಡರು ಪರಿಹಾರ ಕೊಡಿ; ಎಷ್ಟು ದೂರಕ್ಕೆ ಸರ್ಕಾರ ಪರಿಹಾರ ಕೊಡುವುದು? ಆದರೆ ಇಂತಹ ವಿಚಾರಗಳಲ್ಲಿ ನಿರ್ವಂಚನೆಯಿಂದ ಪರಿಹಾರ ಕೊಡುವ ಕೆಲಸ ಬಹಳ ಮುಖ್ಯವಾಗಿ ಆಗಬೇಕು. ಮಾನ್ಯ ಅಧ್ಯಕ್ಷರೇ, ಪರಿಸ್ಥಿತಿ ತೀರ ವಿಕೋಪಕ್ಕೆ ಹೋಗಿರುವ ಸಂದರ್ಭದಲ್ಲಿ ಜನರಲ್ಲಿ ನಾವು ಒಂದು ನೈತಿಕ ಬಲ ಸ್ಥೈರ್ಯ ತುಂಬಬೇಕು. ಮುಸ್ಲೀಮರು ಭಾರತೀಯರಲ್ಲ ಎಂದು ಮಾತಾಡುವುದು ಜನತಂತ್ರದ ಮೂಲತತ್ವಕ್ಕೇ ವಿರೋಧ. ನಾವೆಲ್ಲಾ ಭಾರತೀಯರು, ಜಗಳ ಆಡಿರುವ ಜನ ದೇಶದ್ರೋಹಿಗಳು; ಹೀಗೆ ಗುರುತಿಸಿ ಗುರುತಿಸಿ ಮುಸಲ್ಮಾನರೇ ದೇಶದ್ರೋಹಿಗಳು, ಇವರಲ್ಲ ಎಂದು ಭಾವನೆ ಬರುವಂತೆ ಮಾತನಾಡುವುದು ಸರಿಯಾದುದ್ದಲ್ಲ. ನಾವು ಜಾತ್ಯಾತೀತ ರಾಜ್ಯಾಂಗವನ್ನು ಒಪ್ಪಿಕೊಂಡಿದ್ದೇವೆ. ಜಾತ್ಯಾತೀತ ಪ್ರಭುತ್ವವನು ಸ್ಥಾಪನೆ ಮಾಡುತ್ತೇವೆಂದು ಎಲ್ಲಾ ಪಕ್ಷಗಳವರೂ ಮಾತು ಕೊಟ್ಟಿದ್ದೇವೆ ರಾಜ್ಯಂಗದ ಮೂಲಕ. ಇದಕ್ಕೆ ಹೆಚ್ಚು ಪ್ರಾಮುಖ್ಯತೆ ಏಕೆ ಬಂದಿದೆ ಎಂದರೆ ನವೆಂಬರ್ ತಿಂಗಳಿನಲ್ಲಿ ಚುನಾವಣೆ ಬಂದುಬಿಟ್ಟಿದೆ; ಆದ್ದರಿಂದ ಯಾರ ವೋಟನ್ನು ಯಾರು ತೆಗೆದುಕೊಳ್ಳುವುದು? ಭದ್ರಾವತಿಯಲ್ಲಿ ಈಗ ಮುಸ್ಲಿಮರ

ಪ್ರತಿನಿಧಿಯೇ ಇದ್ದಾರೆ ಆ ಪ್ರತಿನಿಧಿ ಏನು ಮಾಡುತ್ತಿದ್ದರು ಎಂದರೆ, ಏನು ಮಾಡುವುದಕ್ಕಾಗುತ್ತದೆ? ಅವರ ಜೊತೆಯಲ್ಲಿ ಇವರೂ ಸಾಯಬಹುದಿತ್ತು ಅಷ್ಟೆ, ಇಲ್ಲ ಅವರು ಮನೆಮಠ ಕಳೆದುಕೊಳ್ಳಬೇಕಾಗಿತ್ತು. ಅಂತಹ ಪರಿಸ್ಥಿತಿ ಇರುವ ಕಾರಣ ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ, ಈ ಗಲಭೆಯ ಸಂಬಂಧವಾಗಿ ಸುಮಾರು 600ರಿಂದ 700 ಜನ ಇನ್ನೂ ಜೇಲಿನಲ್ಲಿದ್ದಾರೆಂದು ಭಾವನೆ ಮಾಡಿದ್ದೇನೆ. ಇವರನ್ನು ಬಿಡಬೇಕು ಎಂದು ಒತ್ತಾಯ ಮಾಡುವುದು ನಿಜ; ಆದರೆ ಬಿಟ್ಟರೆ ಆಗುವ ಪರಿಣಾಮ ಕೂಡ ಸರ್ಕಾರದ ಜವಾಬ್ದಾರಿಯಾಗುತ್ತದೆ. ಆದ್ದರಿಂದ ಯಾವ ಅಪರಾಧವನ್ನೂ ಮಾಡದ ಮುಗ್ಧರು ಯಾರಿದ್ದಾರೆ ಅವರನ್ನು ಬಿಡುಗಡೆ ಮಾಡುವ ಪ್ರಯತ್ನವಾಗಬೇಕು. ಸ್ವಲ್ಪ ಸಂಶಯ ಇದ್ದರೂ ಕೂಡ ಅವರನ್ನು ಬಿಟ್ಟರೆ ಮತ್ತೆ ಉದ್ರೇಕಕಾರಿಯಾದಂಥ ಕೃತ್ಯವನ್ನು ಮಾಡಬಹುದು, ಎಂಬ ದೃಷ್ಟಿಯಿಂದ ಎಲ್ಲರನ್ನೂ ಬಿಡಿ ಎಂದು ನಾನು ಹೇಳುವುದಿಲ್ಲ. ಆದ್ದರಿಂದ ಅಧ್ಯಕ್ಷರೇ, ಬಹಳ ಮುಖ್ಯವಾಗಿ ಇಲ್ಲಿ ಯಾವುದಾದರೂ ಒಂದು ರೂಪದಲ್ಲಿ ತನಿಖೆ ಮಾಡಿ ಜನರಿಗೆ ಸಮಾಧಾನ ಹಾಗೂ ನೆಮ್ಮದಿ ಆಗುವಂಥ ಒಂದು ಬರತಕ್ಕಂಥ ಪ್ರಯತ್ನವನ್ನು ಸರ್ಕಾರ ಮಾಡಬೇಕು ಮತ್ತು ಆಡಳಿತದಲ್ಲಿ ಆಗಿರುವ ದೋಷಕ್ಕೆ ಇಂಜೆಲಿಜೆನ್ಸಿನ ವಿಫಲತೆಗೆ ಕಾರಣ ಏನ್ನು ಹುಡುಕಬೇಕಾಗುತ್ತದೆ ಮತ್ತು ಮೂರನೆಯದು ಆಸ್ತಿಪಾಸ್ತಿ ನಷ್ಟ ಆಗಿರುವವರಿಗೆ ಸಾಕಷ್ಟು ಪರಿಹಾರ ಒದಗಿಸಿಕೊಡಬೇಕು. ಜನರಲ್ಲಿ ವಿಶ್ವಾಸ ತುಂಬುವುದರಲ್ಲಿ ಶ್ರೀ ಈಶ್ವರಪ್ಪನವರು ಎಷ್ಟು ಮುಂದಾಗಿದ್ದಾರೋ ಅದರ 10 ಹೆಜ್ಜೆ ನಾವು ಮುಂದಿರತಕ್ಕವರು ಯಾವ ತ್ಯಾಗ ಮಾಡಲೂ ನಾವು ಸಿದ್ಧವಾಗಿದ್ದೇವೆ. ಆದರೆ ಇದನ್ನು ನಾಲಿಗೆಯಿಂದ ಹೇಳುವುದು ಬೇಡ, ಇದು ಹೃದಯದಿಂದ ಹೇಳತಕ್ಕ ಮಾತಾಗಬೇಕೆಂದು ಹೇಳಿ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಯವರು) :- ತಾವು ಮಾತನಾಡುವುದಕ್ಕೆ ನಾನು ಈಗ ಅಡ್ಡಿ ಬರುತ್ತಿಲ್ಲ. ಆದರೆ ಭದ್ರಾವತಿ ಈಗ ಶಾಂತವಾಗಿದೆ. ನಾಳೆ ನಾಡಿದ್ದು ಗಣೇಶಚತುರ್ಥಿ ಇದೆ; ನಾವು ಇಲ್ಲಿ ಮಾತನಾಡುವುದು ಸರಿ, ಆದರೆ ಮುಂದೆ ಯಾವುದೇ ಅನಾಹುತ ಬರದ ಹಾಗೆ ಯಾವುದೇ ಆಸ್ತಿಪಾಸ್ತಿಯನ್ನು ಕಾಪಾಡಿಕೊಳ್ಳುವ ಜವಾಬ್ದಾರಿ ಬರೀ ಸರ್ಕಾರದ್ದಲ್ಲ, ತಮ್ಮೆಲ್ಲರದ್ದೂ ಇದೆ. ಈಗ ಚರ್ಚೆಯಾಗಿದೆ. ಸನ್ಮಾನ್ಯ ಬಂಗಾರಪ್ಪನವರು ಈ ವಿಷಯ ಎತ್ತಿದ್ದಾರೆ. ಒಂದಿಬ್ಬರು ಸದಸ್ಯರು ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ಅವರು ಉತ್ತರ ಕೊಟ್ಟ ಮೇಲೆ ನಾನು ಸ್ವಲ್ಪ ಅದಕ್ಕೆ ಪೂರಕವಾಗಿ ಮಾತನಾಡುತ್ತೇನೆ. ಅಲ್ಲಿಗೇ ಇದನ್ನು ಮುಗಿಸುವುದು ಒಳ್ಳೆಯದು ಇಲ್ಲದಿದ್ದರೆ.

If there is to be a full scale discussion, I do not know where it will end. ಅದು ನಮ್ಮ ಇಡೀ ರಾಜ್ಯದ ಶಾಂತಿ ನೆಮ್ಮದಿಯ ದೃಷ್ಟಿಯಿಂದ ಚರ್ಚೆ ನಡೆದಿದೆ. ಇಲ್ಲಿ ಪ್ರಾಣ ಹೋಗತಕ್ಕಂಥಾದ್ದು ಬಡಪಾಯಿಗಳದ್ದು ಹಾಗು ಅಮಾಯಕರದ್ದು. ನಾವು ಕೂಡ ಇಲ್ಲಿ ಚರ್ಚೆ ಮಾಡಬೇಕು, ಮಾತನಾಡಬೇಕೆಂದು ಕೆಲವರು ಇರಬಹುದು.

I can understand your anxiety but we will take care of the problems. We will also share the anxiety of the House. We are bound to protect the lives and properties of the people, which ever community they belonged. So my humble appeal to the entire House is, on such a sensitive issue which has happened in a very sensitive area, ಈ ಚರ್ಚೆಯನ್ನು ಇಲ್ಲಿಗೆ ಮುಕ್ತಾಯ ಮಾಡಿ ಮುಂದೇನಾದರೂ ಇದ್ದರೆ

I will discuss with you; I am prepared to discuss about the compensation. We have a very liberal Government order granting compensation. We will go out of the way to give them compensation. Which ever community they belonged to.

ಯಾರಿಗೆ ನಷ್ಟವಾಗಿದೆ ಅವರಿಗೆ ಕೊಡುತ್ತೇವೆ. ಇಲ್ಲಿ ಮಾತಿನಲ್ಲಿ ಒಂದೆರಡು ಶಬ್ದಗಳಲ್ಲಿ ಹೆಚ್ಚು ಕಡಿಮೆಯಾದರೂ ಮುಂದೆ ಅನಾಹುತವಾಗುತ್ತದೆ.

My humble appeal to the entire House and to their conscience, desist from making any statement which may rather harn the interest of our people than saving them. This is my humble appeal, of course, I cannot curtail the discussion.

SIR NAZIR AHMED (Binnypet):- Here, we are not going to the merit. Now after this incident what has to be done compensation, interest free loan...

(Interruptions)

I want the Government to initiate some actions to regain the confidence. Many people have come to Bangalore. They are sitting in Cubbon Park. They have not got the confidence to go back to their place. We request the Government to come forward with some measures where in they will feel confidence again to go bakc to their places.ಸರಕಾರದಿಂದ ಕಾಂಪನ್‌ಸೇಷನ್ ಕೊಟ್ಟಿದ್ದಾರೆ ಇಲ್ಲವೆಂದು ನಾನು ಹೇಳುವುದಿಲ್ಲ. ಈಗಾಗಲೇ ತೋರಿಸಿದ್ದೇವೆ. 200, 800, 51 ರೂಪಾಯಿಗಳ ಚೆಕ್‌ಗಳನ್ನು ಕೊಟ್ಟಿದ್ದಾರೆ ಅದನ್ನು ಬಿಟ್ಟು.

He want the Government to redraw the mahazar again and see that liberal compensation should be given and also interest free loan so that they can rehabilitate their business again. They have to live in their places. That is the only appeal we are making. We are not going like our hon'ble friend Mr. Eshwarappa who made some flaring speechs inside the House. We are responsible people and we also know that in another two three days the Ganesha festival is there and We don't want to provoke the in emotions. We just want the Government to come forward and see that confidence is reimposed to that community. They are already in cubbon park. Please see that they go back with that confidence. This is all our appeal to you.

Sri Qamarul Islam :- Sir, .....

ಅಧ್ಯಕ್ಷರು :- ಮಾನ್ಯ ಮುಖ್ಯ ಮಂತ್ರಿಗಳು ಅಪೀಲ್ ಮಾಡಿಕೊಂಡರು. ಮಾನ್ಯ ಗೃಹ ಮಂತ್ರಿಗಳು ಹೇಳಿಕೆ ಕೊಡುತ್ತಾರೆ. ಆ ಹೇಳಿಕೆಯ ನಂತರ ತಮ್ಮ ಸಲಹೆಗಳೇನಾದರೂ ಇದ್ದರೆ ಅದನ್ನು ಹೇಳಿದರೆ ಅವರು ಕ್ಲಾರಿಫೈ ಮಾಡುತ್ತಾರೆ.

Sri Qamarul Islam :- A demand was raised that there should be a judicial enquiry. We wanted to know from the Hon'ble Chief Minister.

ಅಧ್ಯಕ್ಷರು : ಈಗ ಹೇಳಿಕೆ ಕೊಡುತ್ತಾರೆ.

Sri Qamiarul Islam (Gulbarga) :- Sir, this communal riot is not a now one Even before independence, communal riots were there and we used to say that some British hand is there. Now, after the independence, those communal riots are taking place. Sir, I am talking in general. I wanted to give one or two suggestions. If you see the records of the Lok Sabha and Legislative Assembly, there is a graph which shows that there is increase in the communal riots. That means, in independent India, there is a rise in the communal riots right from the villages. But there should be an end to communal riots.

We demand a judicial enquiry so that the culprits should come out. Then we sought Rs. 15,000- Rs. 20,000, 25,000 even up to Rs. One lakh. What ever losses are there, so 15%, now 20%, we are giving 20% but Sir, my friend Mr. Eshwarappa said, Something and I will now quote. He used the word "ರಾಷ್ಟ್ರದ್ರೋಹಿ ಜನರು" O.K. there may be some people in our state also. These are the people who are doing all these things. So, any Government whether this Government or previous Government, they should take action to see that they should be curbed, and they should be punished.ಈ ದೇಶ ದ್ರೋಹಿ ಜನ ಬಹಳ ಪವರ್ ಫುಲ್ ಆಗುತ್ತಿದ್ದಾರೆ. They are in a position to dictate terms. I don't want to tell the role of the police. One Circle Inspector by name Jameel Ahamed, his house was also looted, There is a report I can't blame the Deputy Superintendent of Police and Jameel Ahamed. When at Rangappa's circle, a bottle was thrown and people have washed.

Sri. M. Veerappamoily :- Don't go to the facts.

ಅಧ್ಯಕ್ಷರು :- ಅದನ್ನು ಮುಕ್ತಾಯ ಮಾಡಿ.

Sri Qamarul Islam :- O.K. I will not go to into the facts. I demand, Sir, 100% compensation should be given. It has been done in Shimoga village when Mr. Ramakrishna Hegde was there. There was one village where 100% compensation was given. Karnataka, we can introduce one tax, punitive tax or whatever tax; 100% compensation should be given and there is failure of duty on the part of the police, in protecting our lives. Then one more suggestion. Wherever mosques, mandir and all that, where the minorities are in the isolated places, those mosques,they wherever have been damaged. 10-15 muslim houses were there, those houses were burnt. Dali't houses in some cases the other community houses were burnt. Sir, I am talking in general.

ಶ್ರೀ ಕೆ.ಹೆಚ್.ರಂಗನಾಥ್:- ಮಾನ್ಯ ಅಧ್ಯಕ್ಷರೇ, ಅವರು ಏನು ಹೇಳುತ್ತಿದ್ದಾರೆ ಎಂದು ಅವರಿಗೆ ಅರ್ಥವಾಗುತ್ತಿಲ್ಲ. ಕೆಲವರ ಮನೆ ಸುಟ್ಟಿದೆ? ಇವರೇ ಅವರ ಮನೆ ಸುಟ್ಟರು ಇವೆಲ್ಲಾ ಏಕೆ ಬೇಕು. ಈಗ ಚರ್ಚೆಯಾಗುತ್ತಿರುವುದು ನಿಯಮ 68 ರ ಪ್ರಕಾರ ಭದ್ರಾವತಿಯಲ್ಲಿ ಏನಾಯಿತು? ಎಂಬುದು ಭಧ್ರಾವತಿಯಲ್ಲಿ ಕಂಡಿದ್ದನ್ನು ನೋಡಿದ್ದನ್ನು ಅಥವಾ ಅವರಿಗೇನಾದರೂ ಪತ್ರ ಬರೆದ್ದಿದ್ದನ್ನು ಇವರೇ ಹೋಗಿ ನೋಡಿದ್ದನ್ನು ಹೇಳತಕ್ಕಂಥತ್ತು ಇದೆ. ಇದನ್ನು ಜನರಲೈಸ್ ಮಾಡುವುದರಿಂದ ಏನಾಗುತ್ತದೆಂದರೆ ಅದರ ಪರಿಣಾಮವೇ ಬೇರೆ ಆಗುತ್ತದೆ. 68 ರಲ್ಲಿ ಅದರ ಸ್ಕೋಪ್ ಇಲ್ಲ. 68ರಲ್ಲಿ ಇದು ಬರುವುದಿಲ್ಲ.

The Hon. member will have to confine himself to Bhadravathi if he knows it. Otherwise, there is no point in allowing it now.

Sri Qamarul Islam:- Sir, I will give full respect to the Hon'ble speaker and the Chief Minister. I said that I will not go to the facts. But putting certain demand is my right in the House. I have got lot of respect to the Hon'ble Minister. So, I will speak on Rule 68. It is under Rule 68. We are giving 20% compensation. We say it is five crores, Governments says 40 crores. 100% compensation should be given.

**5.00 ಪಿ.ಎಂ**

ಅಧ್ಯಕ್ಷರು:- ಅವರ ಹೇಳಿಕೆಯ ನಂತರ, ಅವರು ಏನು ಮಾಡಬೇಕು ಎಂದು ಹೇಳಿದ ನಂತರ ತಮ್ಮ ಸಲಹೆಯನ್ನು ಕೊಡಿ.

ಶ್ರೀ ಕಮರುಲ್ ಇಸ್ಲಾಂ:-ಇದು ನಮ್ಮ ಡಿಮ್ಯಾಂಡ್ ಇದೆ. ರಿಜೆಕ್ಟ್ ಮಾಡಿ 50 ಪರ್‌ಸೆಂಟ್ ಕೊಡಿ.

ಅಧ್ಯಕ್ಷರು:- ಅವರು ಹೇಳಿದ್ದನ್ನು ನೀವೇ ಕೇಳಲಿಲ್ಲವಲ್ಲಾ. ಅವರು ಹೇಳಿಕೆ ಕೊಟ್ಟನಂತರ ಈ ರೀತಿ ನಾವು ಮಾಡುತ್ತೇವೆ ಎಂದರೆ ತಮಗೆ ಹೆಚ್ಚಿಗೆ ಬೇಕಾಗಿದ್ದರೆ ನಮಗೆ ಇನ್ನೂ ಹೆಚ್ಚಿಗೆ ಕೊಡಿ ಎಂದು ಕೇಳಿ.

Sri Qumural Islam:- A Judicial enquiry has to be ordered immediately.

ಅಧ್ಯಕ್ಷರು:- ಮಾನ್ಯ ಇಸಾಮಿಯಾ ಅವರೇ, ತಾವು ನನಗೆ ಪತ್ರವನ್ನು ಕಳುಹಿಸಿದ್ದೀರಲ್ಲಾ, ನನಗೆ ಆರೋಗ್ಯ ಸರಿ ಇಲ್ಲ ಎಂದು ಹೇಳಿ. ತಾವು ಕುಳಿತುಕೊಂಡೇ ಮಾತನಾಡಿ.

* ಶ್ರೀ ಎಸ್ ಇಸಾಮಿಯಾ (ಭದ್ರಾವತಿ):- ಮಾನ್ಯ ಅಧ್ಯಕ್ಷರೇ, ನಾನು ನಿಂತೇ ಮಾತನಾಡುತ್ತೇನೆ. ಪರವಾಗಿಲ್ಲ. ನನಗೆ ನಿಜವಾಗಿಯೂ ಆರೋಗ್ಯ ಸರಿ ಇಲ್ಲ. ನಾನು ಜಾಸ್ತಿ ಹೊತ್ತು ಮಾತನಾಡಿದರೆ ನನಗೆ ದಮ್ ಬಂದುಬಿಡುತ್ತದೆ. ಇವರೆಲ್ಲರೂ ಮಾತನಾಡಿದ್ದಾರೆ, ಇವರಿಗೆ ಗೊತ್ತಿಲ್ಲದೇ ಇರುವ ವಿಷಯಗಳನ್ನು ಹೇಳಿದ್ದಾರೆ. ನಾನು ಸ್ಥಳದಲ್ಲಿಯೇ ಇದೇ. ಕಳೆದ ತಿಂಗಳು 20ನೇ ತಾರೀಖು ನಾನು ಖಾಯಿಲೆ ಬಿದ್ದೆ. ಭದ್ರಾವತಿ, ಶಿವಮೊಗ್ಗ ಮತ್ತು ಮಣಿಪಾಲದಲ್ಲಿ ಚಿಕಿತ್ಸೆ ಪಡೆದು ಆಗ ತಾನೇ ಬಂದಿದ್ದೆ. ನಮ್ಮ ಊರಿನಲ್ಲೇ ಚಿಕಿತ್ಸೆ ಪಡೆಯುತ್ತಿದ್ದೆ. ಗಲಾಟೆಯಾಗಿದ್ದು ಮೆರವಣಿಗೆ ಹೊರಟಾಗ ಆಯಿತು. ನಿಜ ಯಾರೋಬಾಟಲ್ ಎಸೆದರು. ಬಾಟಲ್ ಬಿಸಾಕಿದಾಗ ಏನೋ ಸಮಾಧಾನ ಮಾಡಿದ್ದರೆ ಆಗುತ್ತಿತ್ತು. ನಮ್ಮವರು ಯಾರೋ ಕಲ್ಲನ್ನು ಎಸೆದಿರಬಹುದು. ನಮ್ಮಲ್ಲಿ ನಾಲ್ಕರಿಂದ ಐದು ಸಾವಿರ ಜನರು ಮುಸ್ಲಿಂರು ಮೆರವಣಿಗೆಯಲ್ಲಿ ಇದ್ದರು. ಅಲ್ಲಿಂದ ಶಾಂತಿ ರೀತಿಯಿಂದ ಮೆರವಣಿಗೆ ಎಲ್ಲಿಗೆ ಹೋಗಬೇಕೋ ಅಲ್ಲಿಗೆ ಹೋಗಿ ಮುಕ್ತಾಯವಾಯಿತು. ಆ ರೀತಿ ಹೊರಟಾಗ ಅಂಗಡಿಗಳಿಗೆ, ಮನೆಗಳಿಗೆ ನುಗ್ಗುವುದಲ್ಲದೆ, ಬೆಂಕಿಯನ್ನು ಹಾಕಬಹುದಿತ್ತು. ಆದರೆ ಅಂಥಹದ್ದು ಏನೂ ಆಗಿಲ್ಲ. ಯಾರೋ ಕೆಲವು ಸಮಾಜದ್ರೋಹಿಗಳು ಸೇರಿಕೊಂಡು ಪ್ರೀಪ್ಲಾನ್ ಮಾಡಿ ಈ ರೀತಿ ಮಾಡಿದ್ದಾರೆ. ನಮ್ಮ ಸ್ನೇಹಿತರಾದ ಈಶ್ವರಪ್ಪನವರು ವಾಗೇಶ್ ಟಾಕೀಸಿನ ಬಗ್ಗೆ ಹೇಳಿದರು, ಓನರ್‌ರವರು ಕೂಡ ಪತ್ರಿಕೆಯಲ್ಲಿ ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ. ಯಾವ ರೀತಿಯಲ್ಲೂ ಅನಾಹುತವಾಗಿಲ್ಲ. ನಮ್ಮ ಹೆಂಗಸರ ಮತ್ತು ಮಕ್ಕಳ ಅವಮಾನ ಕೂಡ ಆಗಿಲ್ಲ ಎಂದು ಹೇಳಿ ಪೇಪರ್ ಸ್ಟೇಟ್‌ಮೆಂಟ್ ಇದೆ. ಅವರೇ ಖುದ್ದಾಗಿ ಹೇಳಿಕೆ ಕೊಟ್ಟಿದ್ದಾರೆ. ಆದರೂ ಅಲ್ಲಿ ಹೆಂಗಸರ ಮತ್ತು ಮಕ್ಕಳ ಅವಮಾನ ಆಯಿತು, ಮನೆ ಸುಟ್ಟುಬಿಟ್ಟರು ಎಂದು ಸುಳ್ಳು ಪ್ರಚಾರ ಮಾಡಿದ್ದಾರೆ. ನಿಮ್ಮ ವರದಿಯ ಪ್ರಕಾರ 99 ಭಾಗ ಮುಸ್ಲಿಂಗೆ ಅನ್ಯಾಯ ಆಗಿದೆ. ಆರು ಸಾವಿರ ಜನರು ಮೆರವಣಿಗೆಯಲ್ಲಿ ಹೋಗಿದ್ದಾರೆ. ಆರು ಗಂಟೆಗೆ ಕರ್ಫ್ಯೂವನ್ನು ವಿಧಿಸಿ ಬಿಟ್ಟರು. ಕರ್ಫ್ಯೂ ಆದಾಗ ಮುಸ್ಲಿಂಗಳೆಲ್ಲಾ ತಮ್ಮತಮ್ಮ ಮನೆ ಸೇರಿಕೊಂಡರು. ಸಮಾಜದ್ರೋಹಿಗಳು ಏನು ಪ್ರೀಪ್ಲಾನ್ ಮಾಡಿಕೊಂಡಿದ್ದರಲ್ಲಾ, ಅವರೆಲ್ಲಾ ಸೇರಿ ಗಲಾಟೆ ಮಾಡಿದರು. ನಮ್ಮಲ್ಲಿ ಪೋಲೀಸರು ಕೂಡ ಬಹಳ ಕಡಿಮೆ ಇದ್ದರು. ಎಲ್ಲಾ ಲೂಟಿ ಮಾಡಿಬಿಟ್ಟರು. ನಮ್ಮ ರೆವಿನ್ಯೂ ಇಲಾಖೆಯ ವರದಿ ಪ್ರಕಾರ 488 ಕುಟುಂಬಗಳು ಮಾತ್ರ ನಾಶವಾಗಿರುವುದು ಎಂದು ಹೇಳಿ ಕೊಟ್ಟಿದ್ದಾರೆ. 1 ಕೋಟಿ 37 ಲಕ್ಷ 63,517 ಎಂದು ಹೇಳಿ ಇವರು ಲೆಕ್ಕ ಕೊಟ್ಟಿದ್ದಾರೆ. ಇದು ನಿಜವಾಗಿಯೂ ಹೇಳಬೇಕಾದರೆ ಬಹಳ ಕಡಿಮೆ ಇದೆ. ಅಧಿಕಾರಿಗಳು ಏನು ಸರ್ವೆ ಮಾಡಿದ್ದಾರೆ, ಇದು ಬಹಳ ಕಡಿಮೆ ಇದೆ. ಇದನ್ನು ಮತ್ತೊಮ್ಮೆ ಸರ್ವೆ ಮಾಡಿಸಬೇಕು. ಇದು ನಮಗೆ ಅನ್ಯಾಯವಾಗಿದೆ. ಜಾಸ್ತಿ ನಷ್ಟವಾಗಿದೆ ಎಂದು ತಮ್ಮಲ್ಲಿ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ; ಮತ್ತೊಮ್ಮೆ ರೀಸರ್ವೆ ಮಾಡಿಸಿ ಎಸ್ಟಿಮೇಟನ್ನು ತಯಾರು ಮಾಡಿ ಎಂದು

ಕೇಳಿಕೊಳ್ಳುತ್ತೇನೆ. ಪರಿಹಾರ ಕೊಟ್ಟಿರುವುದನ್ನು ನಾನು ಹೇಳುತ್ತೇನೆ. 20 ಸಾವಿರ ರೂಪಾಯಿಗಳಂತೆ 30 ಜನರಿಗೆ, ಆಮೇಲೆ 10 ಸಾವಿರದಿಂದ 20 ಸಾವಿರದೊಳಗೆ, 58 ಜನರಿಗೆ, ಆಮೇಲೆ ಹತ್ತು ಸಾವಿರದಿಂದ 50 ಸಾವಿರದವರೆಗೂ 156 ಜನರಿಗೆ, ಆಮೇಲೆ ಐದು ಸಾವಿರದಿಂದ ಒಳಗೆ ಅಂದರೆ ಮಾನ್ಯ ಸದಸ್ಯರು ಹೇಳಿದಂತೆ 200 ರೂಪಾಯಿ ಚೆಕನ್ನು ಕೊಟ್ಟಿದ್ದಾರೆ. 200 ರೂಪಾಯಿ ಕೊಡಬೇಕಾದರೆ ಏನು ನಷ್ಟವಾಗಿದೆ ಎಂದು ಹೇಳಿ ಕೊಟ್ಟಿದ್ದಾರೆ; ನಮಗೆ ಮುಖ್ಯಮಂತ್ರಿಗಳು ಭರವಸೆಯನ್ನು ಕೊಟ್ಟಿದ್ದಾರೆ. ಇದು ಜಾಸ್ತಿ ಮಾಡಿಕೊಡುತ್ತೇನೆ ಎಂದು ಹೇಳಿದ್ದಾರೆ. ಇಷ್ಟು ಕಡಿಮೆ ಕೊಡತಕ್ಕಂಥ ಹಣ ಸರಿ ಇಲ್ಲ. ಸೆಂಟ್ ಪರ್‌ಸೆಂಟ್ ಕೊಡಬೇಕೆಂದು ನಮ್ಮ ಡಿಮ್ಯಾಂಡ್ ಕೂಡ ಇದೆ. ಯಾರಿಗೆ ನಷ್ಟವಾಗಿದೆ ಅವರಿಗೆ ಕೊಡಬೇಕು. ಹಿಂದೂ ಆಗಲಿ, ಮುಸ್ಲಿಂ ಆಗಲಿ, ಅವರಿಗೆ ಕೊಡಬೇಕಾಗುತ್ತದೆ. ದಯಮಾಡಿ ನಾನು ಹೇಳಬೇಕಾದರೆ ನನಗೆ ಕಣ್ಣಲ್ಲಿ ನೀರು ಬರುತ್ತದೆ. ಅದನ್ನು ಕೇಳಿದರೆ ಎಲ್ಲರಿಗೂ ದುಃಖವಾಗುತ್ತದೆ. ಅಂಥ ವಿಷಯಗಳು ಆಗಿವೆ. ನಾನು ಹೇಳುವುದಕ್ಕೆ ತಯಾರಿಲ್ಲ. ಆಗಲೇ ನನಗೆ ದಮ್ ಬಂದುಬಿಟ್ಟಿದೆ. ದಯವಿಟ್ಟು ಏನಾಗಿದೆ, ಅದನ್ನು ರೀಸರ್ವೆ ಮಾಡಿಸಿ ಹೊಸದಾಗಿ ಎಸ್ಟಿಮೇಟ್ ಮಾಡಿಸಿ. ಪರಿಹಾರವನ್ನು ಅವರಿಗೆ ಸೆಂಟ್ ಪರ್‌ಸೆಂಟ್ ಕೊಡಿಸಬೇಕು. ಆಮೇಲೆ ನಿಮಗೆ ಹೆಚ್ಚು ಕೊಡುವುದಕ್ಕೆ ಸಾಧ್ಯವಿದೆ, ಯಾರಿಗೆ ಲಕ್ಷಗಟ್ಟಲೆ ನಾಶವಾಗಿದೆ, ಒಂದೊಂದು ಕಡೆ 15 ಲಕ್ಷ ರೂಪಾಯಿಗಳವರೆಗೂ ನಷ್ಟವಾಗಿದೆ. ಹೋಟೇಲ್ ಮತ್ತು ಅಂಗಡಿಗಳನ್ನು ನಡೆಸುವವರಿಗೆ ಅಷ್ಟೊಂದು ನಷ್ಟವಾಗಿದೆ. ಅವರಿಗೆ ದಯಮಾಡಿ ಬಡ್ಡಿರಹಿತವಾಗಿ ಲೋನ್ ಕೊಡುವ ವ್ಯವಸ್ಥೆಯನ್ನು ಮಾಡಿ. ಇಷ್ಟೊಂದು ಈ ಜನಗಳಿಗೆ ತೊಂದರೆಯಾಗಿದೆ, ಇವರಿಗೆ ನಿಜವಾಗಿಯೂ ಪರಿಹಾರ 50ಪರ್‌ಸೆಂಟ್, ನೂರು ಪರ್‌ಸೆಂಟ್ ಪರಿಹಾರವನ್ನು ಕೊಡಿ ಎಂದು ಇದುವರೆಗೂ ಯಾರ ಬಾಯಲ್ಲೂ ಬಂದಿಲ್ಲ.

* ಶ್ರೀ ಚೌಡರೆಡ್ಡಿ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ:21-8-94ರಂದು ಭದ್ರಾವತಿಯಲ್ಲಿ ಬೆಳಿಗ್ಗೆ ಸುಮಾರು 11 ಗಂಟೆಗೆ ನ್ಯೂಟಾನ್ ಪೋಲೀಸ್ ಠಾಣೆ ಬಳಿ ಇರುವ ಮಸೀದಿಯೊಂದರಲ್ಲಿ ಸುಮಾರು 1500 ಜನ ಒಟ್ಟುಗೂಡಿ ಈದ್ ಮಿಲಾದ್ ಮೆರವಣಿಗೆಯನ್ನು ಪ್ರಾರಂಭಿಸಿದರು. ಆರಂಭದಲ್ಲಿ ಕೇವಲ 1500 ಜನಸಂಖ್ಯೆ ಹೊಂದಿದ್ದ ಈ ಮೆರವಣಿಗೆಯಲ್ಲಿ ಕ್ರಮೇಣ 8000 ಜನಕ್ಕೆ ಏರಿತು. ಮೇರವಣಿಗೆಯು ಛಿನ್ನಗಿರಿ ರಸ್ತೆಯ ರಂಗಪ್ಪ ವೃತ್ತದ ಬಳಿ ಬಂದಾಗ ಯಾರೋ ಒಬ್ಬರು ಮೆರವಣಿಗೆಯ ಮೇಲೆ ಒಂದು ಸೋಡಾ ಬಾಟಲ್‌ನ್ನು ಎಸೆದರು. ಇದರಿಂದ ಯಾರಿಗೂ ಹಾನಿಯಾಗಲಿಲ್ಲ. ಆದಾಗ್ಯೂ ಪೋಲೀಸರು ಮೆರವಣಿಗೆ ದಾರರನ್ನು ಸಮಾಧಾನಪಡಿಸಿದರು. ಈ ಅವಧಿಯಲ್ಲಿ ಸಹಜವಾಗಿ ಸತ್ತ ಮುಸ್ಲಿಂ ವ್ಯಕ್ತಿಯ ಶವದ ಮೇಲೆ ಕಲ್ಲುಗಳನ್ನು ಮತ್ತು ಸೀಸೆಗಳನ್ನು ಎಸೆಯಲಾಯಿತೆಂದು ಯಾರೋ ವದಂತಿ ಹರಡಿದರು. ಇದೇ ಸಮಯದಲ್ಲಿ ಕೆಲವು ಹಿಂದೂಗಳು ಖಾಜಿ ಮೊದಲ್ಲಾ ಪ್ರದೇಶದ ಜನರ ಮೇಲೆ ಹಲ್ಲೆ ಮಾಡಿರುವುದಾಗಿಯೂ ವದಂತಿ ಹರಡಿದ್ದರಿಂದ, ಮೆರವಣಿಗೆ ಜನರು ಉದ್ರಿಕ್ತರಾದರು. ಕೂಡಲೇ ಭದ್ರಾವತಿಯ ಸಹಾಯಕ ಪೋಲೀಸ್ ಅಧೀಕ್ಷಕರು ಖಾಜಿ ಮೊಹಲ್ಲಾಗೆ ಭೇಟಿ ನಿಡಿ, ಸದರಿ ವದಂತಿಯು ಸುಳ್ಳೆಂದು ಮೆರವಣಿಗೆದಾರರಿಗೆ ಮನದಟ್ಟು ಮಾಡಿದರು.

ಮೆರವಣಿಗೆಯು ಅಪರಾಹ್ನ ಸುಮಾರು 3 ಗಂಟೆಯ ಸಮಯದಲ್ಲಿ ತರೀಕೆರೆ ರಸ್ತೆಯ ಸಾದತ್ ದರ್ಗಾ ಬಳಿ ಚದುರಿತು. ಮೆರವಣಿಗೆಯಲ್ಲಿದ್ದ ಕೆಲವು ದುಷ್ಕರ್ಮಿಗಳು ರಂಗಪ್ಪ ವೃತ್ತದ ಬಳಿಯ ಕೆಲವು ಅಂಗಡಿಗಳ ಮೇಲೆ ಧಾಳಿ ನಡೆಸಿ, ಅಂಗಡಿಗಳನ್ನು ಮುಚ್ಚಬೇಕೆಂದು ಒತ್ತಾಯಿಸಿ ಕಲ್ಲುಗಳನ್ನು ಎಸೆದರು. ಈ ಸಮಯದಲ್ಲಿ ಸ್ಥಳಕ್ಕೆ ಧಾವಿಸಿದ ಹಲವು ಭಾರತೀಯ ಜನತಾ ಪಕ್ಷದ ಮುಖಂಡರು ಸುಮಾರು ನೂರು ಜನರ ಬೆಂಬಲದೊಂದಿಗೆ ಅಂಗಡಿ ಮುಚ್ಚಬೇಕೆಂಬ ಒತ್ತಾಯಕ್ಕೆ ವಿರೋಧಿಸಿದರು. ಪೋಲೀಸರ ಮಧ್ಯೆ ಪ್ರವೇಶದಿಂದಾಗಿ ಪರಿಸ್ಥಿತಿ ಶಾಂತವಾಯಿತು. ಈ ಮಧೆ ಬಿ.ಜೆ.ಪಿ. ಮುಖಂಡರು ಸುಮಾರು 600 ಜನರನ್ನು ಒಟ್ಟು ಗೂಡಿಸಿ, ಮನೆಗೆ ತೆರಳುತ್ತಿದ್ದ ಮೆರವಣಿಗೆದಾರರನ್ನು ಹಿಂಬಾಲಿಸಿದರು. ಬಿ.ಜೆ.ಪಿ.ಮುಖಂಡರನ್ನು ಕಂಡ ಮುಸ್ಲೀಮರೂ ಮಾಧವಾಚರ್ ವೃತ್ತದ ಬಳಿ ಅವರನ್ನು ಎದುರಿಸಲು ಸಿದ್ಧರಾದರು. ಅಪಾಯವನ್ನು ಮನಗಂಡ ಪೋಲೀಸ್ ನಿರೀಕ್ಷಕರು ಲಘುಲಾಠಿ ಪ್ರಹಾರ ಮಾಡಿ ಜನರನ್ನು ಚದುರಿಸಿದರು. ಹೀಗೆ ಚದುರುತ್ತಿದ್ದ ಜನರು ಸುಮಾರು 15-30 ಗಂಟೆಗೆ ವಾಹನಗಳ ಮೇಲೆ ಮತ್ತು ಪೂಜಾ ಸ್ಥಳಗಳ ಮೇಲೆ ಕಲ್ಲು ಎಸೆದರು ಎಂದು ವರದಿಯಾಗಿದೆ. ಪುನ: ಲಾಠಿ ಚಾರ್ಜ್ ಮತ್ತು ಅಶ್ರುವಾಯು ಪ್ರಯೋಗಿಸಿ, ಘರ್ಷಣೆಯನ್ನು ತಡೆಲು ಸಾಧ್ಯವಾಗದೇ ಇದ್ದಾಗ ಮತ್ತು ಗಲಭೆಕೋರರಿಂದ ಹಿಂಸಾಚಾರ ಮುಂದುವರಿದಾಗ ಅನಿವಾರ್ಯವಾಗಿ ಗುಂಡು ಹಾರಿಸಿ, ಪರಿಸ್ಥಿತಿಯನ್ನು ಹತೋಟಿಗೆ ತಂದರು. ಗೋಲೀಬಾರ್‌ನಲ್ಲಿ 25 ವರ್ಷದ ನಾಗರಾಜ್ ಬಿನ್ ಚನ್ನಯ್ಯ ಎಂಬುವವರು ಸ್ಥಳದಲ್ಲೇ ಅಸುನೀಗಿದರು. ಇಬ್ಬರಿಗೆ ಗುಂಡೇಟಿನಿಂದ ಗಾಯವಾಗಿದೆ. ತಲೆಗೆ ಗಾಯಗೊಂಡಿದ್ದ ಇನ್ನೊಬ್ಬ ವ್ಯಕ್ತಿಯು ಶ್ರೀ ಸಹೀದ್ ಸನ್ ಅಫ್ ಮೊಹಮ್ಮದ್ ಶಫಿಲ್ ರೆಹಮಾನ್ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ನಡುರಾತ್ರಿಯಲ್ಲಿ ಸಾವಿಗೀಡಾದರು. ಭದ್ರಾವತಿಗೆ ಹೆಚ್ಚುವರಿ ಪೋಲೀಸ್ ಪಡೆಯನ್ನು ಕಳುಹಿಸಿದ್ದು, ಪರಿಸ್ಥಿತಿಯು ಹತೋಟಿಯಲ್ಲಿದೆ.

ಪೋಲೀಸ್ ಮಾಹಾನಿರ್ದೇಶಕರು ಮತ್ತು ಮಹಾನಿರೀಕ್ಷಕರು, ದಿನಾಂಕ:22-8-94 ರಂದು ಸ್ಥಳಕ್ಕೆ ಭೇಟಿ ನೀಡಿ ಸೂಕ್ತ ಬಂದೋಬಸ್ತ್ ವ್ಯವಸ್ಥೆಯನ್ನು ವೀಕ್ಷಿಸಿ, ಬಲಗೊಳಿಸಿದರು. ಮಾನ್ಯ ಮುಖ್ಯಮಂತ್ರಿಗಳು, ಗೃಹ ಮಂತ್ರಿಗಳು ಹಾಗೂ ಜಿಲ್ಲಾ ಮಂತ್ರಿಗಳು ದಿನಾಂಕ : 23-8-94ರಂದು ಸ್ಥಳಕ್ಕೆ ಭೇಟಿ ನೀಡಿ, ಪರಿಸ್ಥಿತಿಯನ್ನು ವೀಕ್ಷಿಸಿ, ನೊಂದ ಜನರಿಗೆ ಸಾಂತ್ವನ ನೀಡಿದರು.

ಈ ಘಟನೆಯಲ್ಲಿ ಆದು ನಷ್ಟ ಮತ್ತು ಇಲ್ಲಿಯವರೆಗೆ ನೀಡಲಾದ ಪರಿಹಾರದ ವಿವರಣೆ ಈ ಕೆಳಗಿನಂತಿದೆ.

| | |
|---|---|
| 1) ಆಸ್ತಿ-ಪಾಸ್ತಿಗಳಿಗೆ ಆದ ಹಾನಿಯ ಅಂದಾಜು | - ರೂ. 3 ಕೋಟಿ |
| 2) ಗಲಭೆಯಲ್ಲಿ ಸತ್ತವರ ಕುಟುಂಬದವರಿಗೆ ನೀಡಲಾದ ಪರಿಹಾರಧನ. | - ರೂ. 2 ಲಕ್ಷ |
| 3) ಸರ್ಕಾರದ ಆದೇಶದಂತೆ ಕೊಡಲೇಬೇಕಾದ ಮೊತ್ತ | - ರೂ. 38 ಲಕ್ಷ |

4) ಜಿಲ್ಲಾಧಿಕಾರಿಗಳಿಗೆ ಸರ್ಕಾರದಿಂದ ಬಿಡುಗಡೆ ಮಾಡಿದ ಹಣ. - ರೂ. 40 ಲಕ್ಷ

5) ಇಲ್ಲಿಯವರೆಗೆ ನೀಡಲಾದ ಒಟ್ಟು ಪರಿಹಾರ - ರೂ. 30 ಲಕ್ಷ

ದಿನಾಂಕ : 5-9-94ರ ವರೆಗೆ ರೂ. 30 ಲಕ್ಷ ಪರಿಹಾರ ನೀಡಲಾಗಿದ್ದು, ಇನ್ನುಳಿದ ಪ್ರಕರಣಗಳಿಗೆ ಪರಿಹಾರ ನೀಡುವ ಪ್ರಕ್ರಿಯೆ ಮುಂದುವರೆದಿದೆ.

**ಇತರೇ ವಿವರಗಳು:-**

1) ದಾಖಲಾದ ಒಟ್ಟು ಪ್ರಕರಣಗಳು : 268

2) ದಸ್ತಗಿರಿಯಾದ ಒಟ್ಟು ಜನರ ಸಂಖ್ಯೆ : 633

3) ಗಾಯಗೊಂಡ ಜನರ ಒಟ್ಟು ಸಂಖ್ಯೆ : 18

4) ಗೋಲೀಬಾರ್‌ನಿಂದ ಗಾಯ ಗೊಂಡವರ ಸಂಖ್ಯೆ : 2

ಎಸ್.ಇಸಾಮಿಯಾ:- ಇದರಲ್ಲಿ ಒಂದು ವಿಚಾರ ಸೇರಿಲ್ಲ. ಸಂತೆಗೆ ಬಂದಂಥ ಒಬ್ಬ ಹುಡುಗ, ಅವನಿಗೆ 23 ವರ್ಷ ವಯಸ್ಸು ಬಸ್ಸಿನಲ್ಲಿ ಸಂತೆಗೆಂದು ಆ ಹುಡುಗ ಬರುವಾಗ ಬಸ್ಸನ್ನು ನಿಲ್ಲಿಸಿ ಎಲ್ಲರಿಗೂ ಹೊಡೆದು ಬಡಿದು ಬಸ್ಸಿಗೆ ಬೆಂಕಿಯನ್ನು ಹಚ್ಚಿದರು. ಹುಡುಗ ಬರುತ್ತಾನೆಂದು ಆತನ ಮನೆಯವರು ಮೂರು ದಿವಸ ಕಾದು ಅನಂತರ ಹೊಳೆಯಲ್ಲಿ ಅವನ ದೇಹ ಸಿಗುತ್ತದೆ. ಅವತ್ತು ಭಾನುವಾರದ ಧಿವಸ ಹೊಳೆಯಲ್ಲಿ ನೀರು ಜಾಸ್ತಿ ಇತ್ತು. ಮೂರು ದಿವಸದ ನಂತರ ನೀರು ಕಡಿಮೆಯಾಯಿತು. ಒಂದು ಕಿ.ಮೀ.ಕೆಳಗೆ ಆ ಹುಡುಗನ ಹೆಣ ಸಿಗುತ್ತದೆ. ಅದಕ್ಕೆ ಪರಿಹಾರವನ್ನು ಸಂಬಂಧಪಟ್ಟವರಿಗೆ ಕೊಡುವುದಿಲ್ಲವೇ? ಆ ಹುಡುಗ ಯಾವ ರೀತಿ ಸತ್ತ ಸ್ವಾಮಿ? ದಫೆದಾರ ಏನಾದರೂ ಹೊಡೆದು ಸಾಯಿಸಿದ್ದಾರಾ, ಭದ್ರಾವತಿಯಲ್ಲಿ ಗಲಾಟೆಯಾಗುತ್ತಿತ್ತೆಂದು ನಾನು ಪೋಲೀಸ್‌ನವರನ್ನು ಅಲ್ಲಿಗೇ ಕರೆಸಿ ಅಲ್ಲಿಯೇ ವೈದ್ಯರಿಂದ ಪೋಸ್ಟ್ ಮಾರ್ಟಮ್‌ಮಾಡಿಸಿ ದಫನ್ ಮಾಡಿಸಿದ್ದೇನೆ. ದಯವಿಟ್ಟು ಅವನ ಕಡೆಯವರಿಗೆ ಪರಿಹಾರ ಕೊಡದಿದ್ದರೆ ಹೇಗೆ? ಅವನು ಸಂತೆಗೆ ಬಂದವನು ಸತ್ತಿದ್ದಾನೆ. ದಯಮಾಡಿ ಇತರರಿಗೆ ಕೊಟ್ಟಂತೆ ಪರಿಹಾರವನ್ನು ಆತನ ಕಡೆಯವರಿಗೂ ಕೊಡಬೇಕೆಂದು ತಮ್ಮ ಮೂಲಕ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

* ಶ್ರೀ ಎಂ. ವೀರಪ್ಪ ಮೊಯಿಲಿ ( ಮುಖ್ಯ ಮಂತ್ರಿಗಳು ) :- ಸನ್ಮಾನ್ಯ ಅಧ್ಯಕ್ಷರೇ ಭದ್ರಾವತಿಯ ಘಟನೆಯ ಬಗ್ಗೆ ವ್ಯಾಪಕವಾದಂಥ ಚರ್ಚೆ ಇಲ್ಲಿ ಆಗಿದೆ. ಎಲ್ಲಾ ಸನ್ಮಾನ್ಯ ಸದಸ್ಯರುಗಳು ಹೇಳಿದಂಥ ಮಾತನ್ನು ನಾವು ಗಮನದಲ್ಲಿಟ್ಟುಕೊಂಡಿದ್ದೇವೆ. ಮುಂಜಾಗ್ರತೆ ತೆಗೆದುಕೊಳ್ಳುವ ಬಗ್ಗೆ, ಪರಿಹಾರವನ್ನು ಕೊಡುವ ಬಗ್ಗೆ ಮತ್ತು ಮುಂದೆ ಶಾಂತಿಯನ್ನು ನೆಲೆಸುವ

ಬಗ್ಗೆ ಸಾಕಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ಇವತ್ತಿನವರೆಗೆ ಭದ್ರಾವತಿಯಲ್ಲಿ ಪರಿಸ್ಥಿತಿ ಶಾಂತಿಯುತವಾಗಿದೆ. ನೆಮ್ಮದಿಯಿಲ್ಲದೆ. ತಮಗೆ ಗೊತ್ತಿರುವಂತೆ ಇನ್ನೆರಡು ಮೂರು ದಿನಗಳಲ್ಲಿ ಗಣೇಶನ ಉತ್ಸವ ಜರುಗುವ ಕಾರಣದಿಂದ ಈ ಘಟನೆಯ ಬಗ್ಗೆ ನಾನು ಏನೂ ಹೇಳುವುದಕ್ಕೆ ಅಪೇಕ್ಷೆ ಪಡುವುದಿಲ್ಲ. ಒಂದು ರಾಜ್ಯದ, ಸಮಾಜದ ಹಿತದೃಷ್ಟಿಯಿಂದ ಅದರ ಬಗ್ಗೆ ನಾನು ಏನನ್ನೂ ಹೇಳಲು ಹೋಗುವುದಿಲ್ಲ. ಈಗ ಪರಿಹಾರವನ್ನು ಅಡಿಕ್ವೇಟ್ ಆಗಿ ಕೊಡಬೇಕೆಂದು ಒಂದು ಮಾತು ಬಂದಿದೆ. ಈಗ ಕೊಟ್ಟ ಸ್ಟೇಟ್‌ಮೆಂಟ್‌ನ್ನು ಹೊರತು ಪಡಿಸಿ ಇತ್ತೀಚಿಗಿನ ಮಾಹಿತಿಯ ಪ್ರಕಾರ ಒಟ್ಟು 44ಲಕ್ಷದ 16 ಸಾವಿರದ 859 ರೂಪಾಯಿಗಳನ್ನು ನಾವು ಇದುವರೆಗೆ ಬಿಡುಗಡೆ ಮಾಡಿದ್ದೇವೆ. ನಾನು ಭದ್ರಾವತಿಯ ಬಗ್ಗೆ ಮಾತ್ರ ಹೇಳುತ್ತಿದ್ದೇನೆ. ಟಾಕೀಸ್‌ಗೂ ಸಹ ಇಪ್ಪತ್ತು ಸಾವಿರ ಪರಿಹಾರ ಕೊಟ್ಟಿದ್ದೇವೆ. ಆ ಹಣವು ಇದರ ಜೊತೆಯಲ್ಲಿ ಸೇರಿದೆ. ತಮಗೆ ಗೊತ್ತಿರುವ ಹಾಗೆ ಪರಿಹಾರವನ್ನು ಕೊಡುವುದರಲ್ಲಿ ನಾವು ಸಾಕಷ್ಟು ಉದಾರಿತನವನ್ನು ತೋರಿಸಿದ್ದೇವೆ. ಕೋಮು ದಳ್ಳುರಿಯಲ್ಲಿ ಏನು ನಷ್ಟವಾಗುತ್ತದೆ, ಇದರ ಬಗ್ಗೆ ಈಗಾಗಲೇ ನಾವು ಉದಾರಿತನವನ್ನು ತೋರಿದ್ದೇವೆ. ನಾನು ಅಲ್ಲಿಗೆ 23ನೇ ತಾರೀಖು ಭೇಟಿ ಕೊಟ್ಟಿದ್ದೆ. ಆ ಘಟನೆಯು 21ನೇ ತಾರೀಖು ಆಗಿದೆ. ನಾನು 23ನೇ ತಾರೀಖು ಈ ಘಟನೆಯಿಂದ ಹಾನಿಗೊಳಗಾದಂಥ ಎಲ್ಲಾ ಪ್ರದೇಶಕ್ಕೂ ಭೇಟಿ ಕೊಟ್ಟಿದ್ದೆ ಮತ್ತು ಆ ಜನರನ್ನು ಕಂಡು ಸಾಂತ್ವನ ಮಾಡತಕ್ಕ ಕಾರ್ಯಕ್ರಮವನ್ನು ನಾವು ಮಾಡಿದ್ದೇವೆ. ಆ ದಿವಸವೇ ನಾನು, ಯಾರ್‍ಯಾರು ಎಲ್ಲವನ್ನೂ ಕಳೆದುಕೊಂಡಿದ್ದಾರೆ, ಅದರಲ್ಲೂ ಮಹಿಳೆಯರಿಗೆ ಎರಡೆರಡು ಜೊತೆ ಸೀರೆ ಕೊಡಬೇಕು, ಮತ್ತು ಲುಂಗಿಗಳು ಮತ್ತು ಇತರೆ ವಸ್ತ್ರಗಳೇನು ಬೇಕೋ ಅದನ್ನು ಎರಡೆರಡು ಜೊತೆ ಕೊಡಬೇಕೆಂದು ಹೇಳಿದ್ದೆ. ನಾನು ಹೇಳಿದ ಪ್ರಕಾರ ಅವುಗಳು ತಕ್ಷಣ ಸಂಬಂಧಪಟ್ಟವರಿಗೆ ಬಿಡುಗಡೆಯಾಯಿತು. ಅನಂತರ ಅಕ್ಕಿಯನ್ನೂ ಸಹ ಕೊಡುವುದಕ್ಕೆ ನಾವು ಏರ್ಪಾಡು ಮಾಡಿದ್ದೇವೆ. ಅವರುಗಳು ಎಲ್ಲಿಯವರೆಗೆ ಅವರ ಕಾಲಮೇಲೆ ನಿಂತುಕೊಳ್ಳಲು ಸಾಧ್ಯವಾಗುತ್ತದೋ, ಎಲ್ಲಿಯವರೆಗೆ ಅವರಿಗೆ ತೊಂದರೆ ಇದೆಯೋ ಅಲ್ಲಿಯವರೆಗೆ ಅವರಿಗೆ ಅಕ್ಕಿಯನ್ನು ಬಿಡುಗಡೆ ಮಾಡಬೇಕೆಂದು ಹೇಳಿದಮೇಲೆ, ಇದು ಬಿಡುಗಡೆಯಾಗಿದೆ. ನಾನು ಆಗಲೇ ಹೇಳಿದಂತೆ ಪರಿಹಾರ ಮೊತ್ತದ ಬಗ್ಗೆ ಸಾಕಷ್ಟು ಉದಾರಿಕರಣವನ್ನು ಮಾಡಲಾಗಿದೆ. ಅದರ ಬಗ್ಗೆ ಸಹ ಬೆಂಗಳೂರಿಗೆ ತೀರ್ಮಾನಕ್ಕೆ ಬರಬೇಕಾಗಿಲ್ಲ. ಹೆಚ್ಚಿನ ಮಟ್ಟಿಗೆ ಜಿಲ್ಲಾಧಿಕಾರಿಗಳೇ ಇದನ್ನು ಕೊಡುವ ರೀತಿಯಲ್ಲಿ ನಾವು ವ್ಯವಸ್ಥೆ ಮಾಡಿದ್ದೇವೆ. ಬಹುಶಃ ಇಡೀ ರಾಷ್ಟ್ರದಲ್ಲಿ ಈ ರೀತಿ ಸತ್ತಂಥ ವ್ಯಕ್ತಿಗಳ ಸಂಬಂಧಿಕರಿಗೆ ಒಂದು ಲಕ್ಷವನ್ನು ನಾವು ಕೊಡುತ್ತಿದ್ದೇವೆ. ಅದನ್ನು ಡಿಸೆಂಬರ್ 1992 ಘಟನೆಯ ನಂತರ ಮಾರ್ಚ್2, 1993ರಿಂದ ಆ ರೀತಿ ಪರಿಹಾರವಾಗಿ ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಈ ರಾಷ್ಟ್ರದಲ್ಲಿ ಎಲ್ಲೂ ಸಹ ಅಷ್ಟು ಮೊತ್ತವನ್ನು ಕೊಡುತ್ತಿಲ್ಲ. ಇವತ್ತಿಗೂ ಸಹ ಎಲ್ಲೆಲ್ಲಿ ಕಮ್ಯೂನಲ್ ಗಲಾಟೆ ಆಗುತ್ತದೆ ಅಲ್ಲಿ 1 ಲಕ್ಷ ರೂ.ಗಳನ್ನು ಕೊಡುತ್ತಿದ್ದೇವೆ. ಕುಟುಂಬಗಳಲ್ಲಿ ದುಡಿಯುವಂತಹ ವ್ಯಕ್ತಿ ಅಥವಾ ದುಡಿಯದಿರುವ

ವ್ಯಕ್ತಿಗಳು ಶಾಶ್ವತವಾಗಿ ಅಂಗವಿಕಲರಾದರೆ ಅವರಿಗೆ 15 ಸಾವಿರ ರೂ.ಗಳನ್ನು ಕೊಡಬೇಕೆಂದು ಹೇಳಿದ್ದೇವೆ. ತಾತ್ಕಾಲಿಕವಾಗಿ ಅಂಗವಿಕಲರಾದರೆ ಅವರಿಗೆ ಎರಡೂವರೆ ಸಾವಿರ ರೂ.ಗಳನ್ನು ಕೊಡಬೇಕೆಂದು ಹೇಳಿದ್ದೇವೆ. ಹಾಗೆಯೇ ಬೇರೆ ಬೇರೆ ರೀತಿಯ ಅಂದರೆ ಮನೆ ಮತ್ತು ಕಟ್ಟಡ ಸಾಮಗ್ರಿ ಕೊಡತಕ್ಕದ್ದು ಕೂಡ ಮಾಡಿದ್ದೇವೆ. In case of permanent incapacitation of whether an earning Member or non-earning member of the family, ಮತ್ತೆ ಶಾಶ್ವತವಾಗಿ ಕಟ್ಟಡ ನಾಶಗೊಂಡಿರುವವರಿಗೆ 20 ಸಾವಿರ ರೂ.ಗಳ ಗರಿಷ್ಠ ಧನವನ್ನು ಕೊಡಬೇಕೆಂದು ನಾವು ಹೇಳಿದ್ದೇವೆ. ಸಾಮಾಜಿಕವಾಗಿ ದುರ್ಬಲವರ್ಗದವರಿಗೆ ಮನೆಗಳು ನಾಶವಾದಂಥವರಿಗೆ ಆಶ್ರಯ ಯೋಜನೆ ಮತ್ತು ಗ್ರಾಮೀಣ ವಸತಿ ಯೋಜನೆಯಲ್ಲಿ ಪೂರ್ತಿ ಹಣದ ಅನ್ವಯ ಮನೆ ಕೊಡಬೇಕೆಂದು ಹೇಳಿದ್ದೇವೆ. ಹಾಗೆ ಪೂಜಾ ಸ್ಥಳಗಳ ಸಂಪೂರ್ಣ ದುರಸ್ಥಿ ವೆಚ್ಚವನ್ನು ಅದು ದೇವಸ್ಥಾನವಾಗಲಿ, ಮಸೀದಿ, ಚರ್ಚ್ ಇರಬಹುದು ಅದರ ಸಂಪೂರ್ಣ ಖರ್ಚು ಕೊಡಬೇಕೆಂದು ಹೇಳಿದ್ದೇವೆ. ಅದೇ ರೀತಿಯಲ್ಲಿ ಭದ್ರಾವತಿಯಲ್ಲಿ ಕೂಡ ಮಸೀದಿ, ದೇವಸ್ಥಾನ, ಇರಬಹುದು ಅದರ ಸಂಪೂರ್ಣ ದುರಸ್ತಿ ಜವಬ್ದಾರಿಗೆ ಹಣವನ್ನು ಕೊಟ್ಟು ಸರಿಪಡಿಸುತ್ತಿದ್ದೇವೆ. ಈಗಾಗಲೇ ಈ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದಾರೆ. ಇನ್ನೂ ಒಂದು ವಿಶೇಷವಾದದ್ದನ್ನು ಮಾಡಿದ್ದೇವೆ. ಅದು ಏನೆಂದರೆ ಕುಟುಂಬದಲ್ಲಿ ಯಾರಾದರೂ ಮರಣಹೊಂದಿದ್ದರೆ, ಕುಟುಂಬದಲ್ಲಿ ಸಂಪಾದನೆ ಮಾಡುತ್ತಿದ್ದ ವ್ಯಕ್ತಿ ಮರಣ ಹೊಂದಿದ್ದರೆ ಅವರ ಕುಟುಂಬದ ಒಬ್ಬರಿಗೆ ಕಂಪ್ಯಾಷಿಸೇಟ್ ಬೇಸಿಸ್ ಮೇಲೆ ಕೆಲಸವನ್ನು ಕೊಡಬೇಕೆಂದು ಕೂಡ ಹೇಳಿದ್ದೇವೆ. ಇದು ಮಾತ್ರವಲ್ಲದೆ ಇನ್ನೂ ಕೆಲವು ಸಾಲಗಳನ್ನು ವಿಪರೀತವಾಗಿ ನಷ್ಟವಾದರೆ ನಾವು ಆಷಾಡಮಾಸದಲ್ಲಿ ಇಂಟ್ರಸ್ಟ್ ಫ್ರಿಲೋನ್ ಅನ್ನು ಸುಮಾರು 5 ಲಕ್ಷರೂಗಳವರೆಗೆ ಕೊಟ್ಟಿದ್ದೇವೆ. ಇಷ್ಟು ಲಿಬರೈಸ್ಡ್ ಕಾಂಫೆನ್ಸೇಷನ್ ಅನ್ನು ಈ ದೇಶದ ಯಾವ ರಾಜ್ಯದಲ್ಲೂ ಕೊಟ್ಟಿಲ್ಲ. ನಾವು ಆದಷ್ಟು ಉದಾರತೆಯಿಂದ ಕೊಡಿ ಎಂದು ಅಧಿಕಾರಿಗಳಿಗೆ ಹೇಳಿದ್ದೇವೆ. I am releasing the amount on the next working day, another 50/- lakhs to Deputy Commissioner, Shimoga.

ಶಿವಮೊಗ್ಗದಲ್ಲಿ 50 ಲಕ್ಷರೂ.ಗಳನ್ನು ಜಿಲ್ಲಾಧಿಕಾರಿಗಳು ಬಿಡುಗಡೆ ಮಾಡುತ್ತಾರೆ.

Let the money be available with them.

ಈಗ 200ರೂ.ಗಳು 50ರೂ.ಗಳು for bunk shops,

ಅವರೆ 20 ಸಾವರ, 15ಸಾವಿರ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಗರಿಷ್ಠಮಿತಿಯಲ್ಲಿ ಕೊಡುವಂತಹ ಕೆಲಸವನ್ನು ಮಾಡಿದ್ದೇವೆಂದು ಹೇಳಿದರು. ಸರಿಯಾಗಿ ಸರ್ವೆಯಾಗದಿರುವಂಥಾದ್ದು ಈ ಪರಿಸ್ಥಿತಿ ಈಗಾಗಲೇ ನಮಗೆ ಗೊತ್ತಾಗಿದೆ. ಆನೇಕ ಸಾರಿ ಕಾಂಪನ್ಸೇಷನ್ ಕೊಡುವುದು ತಡವಾಗುತ್ತದೆ. ಈ ರೀತಿ ತಡವಾಗುವುದನ್ನು ತಪ್ಪಿಸುವ ಸಲುವಾಗಿ Directorate of Rehabilitation ಎಂದು ಒಂದು ಡೈರಕ್ಟೆರೆಟ್ ಮಾಡಿದ್ದೇವೆ. ಅದಕ್ಕೆ ಒಬ್ಬರನ್ನು ನೇಮಕ

ಮಾಡಿದ್ದೇವೆ. ಅವರನ್ನು ಕಳುಹಿಸಿ ಅವರಿಂದ ಸರ್ವೆ ರಿನ್ಯೂ ಮಾಡಿಸಿ, ಒಂದು ವೇಳೆ ಕಾಂಪೆನ್ಸೇಷನ್ ಸರಿಯಾಗಿ ಕೊಡದಿದ್ದರೆ ಮತ್ತು ಸರ್ವೆ ಸರಿಯಾಗಿ ಮಾಡದಿದ್ದರೆ ಅದನ್ನು ತಕ್ಷಣ ದುರಸ್ತಿ ಮಾಡಿಸಿ ರೀಸರ್ವೆ ಮಾಡಿಸಲು ನಾವು ಆದೇಶವನ್ನು ಖಂಡಿತವಾಗಿ ಕೊಡುತ್ತೇವೆ. ಬಹಳ ನಷ್ಟವಾಗಿದೆ. ಈ ನಷ್ಟಕ್ಕೆ ಇಂಟರೆಸ್ಟ್ ಫ್ರೀ ಲೋನ್ ಅಥವಾ ಇನ್ನೂ ಹೆಚ್ಚು ಕಾಂಪೆನ್ಸೇಷನ್ ಅನ್ನು ಎಲ್ಲಾ ಸಂಪೂರ್ಣ ನಾಶವಾಗಿರುವವರಿಗೆ ಅವರು ತಮ್ಮ ಕಾಲಮೇಲೆ ತಾವು ನಿಲ್ಲುವಂತಹ ಪರಿಸ್ಥಿತಿಯಲ್ಲಿರುವವರಿಗೆ We will be on a more liberal side.

ಇನ್ನೂ ಹೆಚ್ಚು ಸಹಾಯವನ್ನು ಕೊಡುವಂತಹ ಕಾರ್ಯಕ್ರಮವನ್ನು ಮಾಡಿಕೊಡುತ್ತೇವೆ. ಆದುದರಿಂದ ಇಲ್ಲಿ ಕಾಂಪೆನ್ಸೇಷನ್ ಬಗ್ಗೆ I don't think that any other State Government is as liberal as our State Government.

ಈಗ ಸನ್ಮಾನ್ಯ ಖಮರುಲ್ ಇಸ್ಲಾಂರವರು ಹೇಳಿದರು. ನಾವು ಸಂಪೂರ್ಣ ಕಾಂಪೆನ್ಸೇಷನ್ ಲೆಕ್ಕ ಹಾಕಿ ಕೊಡುತ್ತೇವೆ. I am not going to comment on that.

ಈ ಗೌವರ್ನಮೆಂಟ್ ಲಿಬರಲ್ ಆಗಿದ್ದಷ್ಟು ಬೇರೆ ಯಾವ ಕಾಲ್ಲದಲ್ಲೂ ಇರಲಿಲ್ಲ. You can take it for granted . So such a quick succession,

ಶೇ.40ರಷ್ಟು ಯಾವಾಗ ಕೊಟ್ಟಿದ್ದಾರೆ ಹೇಳಿ? Give me one example. The very fact that we have given 44 lakhs will demonstrate the fact that we are very quick.

Sri Qamarul Islam:- Atleast in the case of very poor persons whose establishment is within Rs.10,000/- to 25,000/-...

Sri M.Veerappa Moily:-Where the establishments are totally wiped out, we will release immediately. We will try to give something more, We will be as much liberal as possible.

ಪೂರ್ತಿ ಕೊಡುವುದಕ್ಕೆ ಕಾರಣ ಕೂಡ ಇದೆ. ಸಂಪೂರ್ಣವಾಗಿ ಕಾಂಪನ್‌ಸೇಟ್ ಮಾಡಬೇಕು ಎಂದು ನಾವು ಕೊಡುತ್ತಿದ್ದೇವೆ. We will be as much liberal as possible.

ಏಕೆಂದರೆ ಇದರಲ್ಲಿ ಅನೇಕ ಜನ ಅಮಾಯಕರು. ಅವರು ಏನೂ ತಪ್ಪು ಮಾಡಿರುವುದಿಲ್ಲ. ಆದರೆ ಅವರ ಆಸ್ತಿ ನಷ್ಟವಾಗುತ್ತದೆ. ಪ್ರಾಣ ಹಾನಿಯಾಗುತ್ತದೆ. ಸಮಾಜ ಮಾಡಿದಂಥ ತಪ್ಪಿಗೆ, ಕೆಲವು ದುಷ್ಟವ್ಯಕ್ತಿಗಳು ಮಾಡಿದಂತಹ ತಪ್ಪಿಗೆ ಇವತ್ತು ನೇರವಾಗಿ ಸರ್ಕಾರ ಅವರ ಸಹಾಯಕ್ಕೆ ಹೋಗಬೇಕಾಗುತ್ತದೆ. ನಾವು ಖಂಡಿತವಾಗಿ ಸಹಾಯಕ್ಕೆ ಹೋಗುತ್ತೇವೆ. ಆದುದರಿಂದ ಅವರ ಬಗ್ಗೆ ತಾವು ಯಾವ ರೀತಿಯ ಅನುಮಾನವನ್ನೂ ಇಟ್ಟು ಕೊಳ್ಳಬೇಕಾದಂತಹ ಅವಶ್ಯಕತೆ ಇಲ್ಲ. ಈಗ ಆ ಘಟನೆ ಬಗೆ ಹೇಳುವುದಾದರೆ, ತಮಗೆ ಗೊತ್ತಿದೆ ಆ ದಿವಸ ಎಲ್ಲಾ ಕಡೆಯೂ ಕೂಡ

ಮೆರವಣಿಗೆ ಇತ್ತು. ಶಿವಮೊಗ್ಗದಲ್ಲೂ ಕೂಡ ಬಹಳ ದೊಡ್ಡ ಮೆರವಣಿಗೆ ಇತ್ತು. ಅಲ್ಲಿ 15-20 ಸಾವಿರ ಜನ ಇದ್ದರು. ಅಲ್ಲಿಯೂ ಕೂಡ ಪೊಲೀಸ್ ಬಂದೋಬಸ್ತು ಆಗಬೇಕಾಗಿತ್ತು. ಭದ್ರಾವತಿಯಲ್ಲಿ ಪೊಲೀಸ್ ಬಂದೋಬಸ್ತು ಇಟ್ಟಿದ್ದೇವೆ. ಪ್ರತಿ ಹಳ್ಳಿಗಳಲ್ಲಿ ಎಲ್ಲೆಲ್ಲಿ ಮಸೀದಿ ಇದೆ, ಅಲೆಲ್ಲಾ ನಾವು ಬಂದೋಬಸ್ತು ಇಡಬೇಕಾದಂತಹ ಪರಿಸ್ಥಿತಿ ಇತ್ತು ಈ ರೀತಿ ಘಟನೆಗಳು ಆಗುತ್ತವೆ ಎನ್ನುವಂತಹ ವರ್ತಮಾನ ಮೊದಲೇ ತಿಳಿದಿದ್ದರೆ, We had kept close vigil on every place.

ಸ್ವಲ್ಪ ವರ್ತಮಾನ ಇದ್ದಿದ್ದರೆ We would have rushed more..

ಇದು ನಾರ್ಮಲ್ ಆಗಿತ್ತು. ನಾರ್ಮಲ್ ಆಗಿದ್ದು ನಮಗೆ ಇಂಟಲಿಜೆನ್ಸ್ ಇನ್‌ಫರ್ಮೇಷನ್ ಇಲ್ಲದಿದ್ದರೆ how can you say that the intelligence has failed?

Sri Nazir Ahmed :-Mr.Chief Minister, for 40 hours people were in the sugarcane field. This is the statement of the Deputy Commissioner. 40 hours is two days. A lady delivered a baby.

* Sri M.Veerappa Moily:-The normalcy was restored after 6-7-hours, ಇದು ರಾತ್ರಿಯೇ ರೆಸ್ಟೋರ್ ಆಗಿತ್ತು. Suppose there is no proper deployment of the forces, how can the normalcy be restored? The very fact that normalcy has been restored overnight would go to show that the police reinforcement was effective. We had deployed the forces immediately in the night itself.

ಒಂದೆರಡು ಗಂಟೆಗಳ ಕಾಲ ಇದಾಗಿದೆ. ಅದು ಯಾರ ತಪ್ಪು ಎನ್ನುವುದು ನಮಗೆ ಗೊತ್ತಿದೆ. ಯಾವ್ಯಾವ ಫೋರ್ಸ್ ಇದರ ಬೆನ್ನ ಹಿಂದೆ ಇದೆ, ಯಾರು ಇದನ್ನು ದುರುಪಯೋಗ ಮಾಡಿದವರು ಎಂದು ಮಾನ್ಯ ಚಂದ್ರೇಗೌಡರು ಹೇಳಿದರು. ಅನಾವಶ್ಯಕವಾಗಿ ರೂಮರ್ಸ್‌ನ್ನೆಲ್ಲಾ ಸ್ಪ್ರೆಡ್ ಮಾಡಿಕೊಂಡಿರತಕ್ಕಂತಹ ಶಕ್ತಿಗಳು, ವ್ಯಕ್ತಿಗಳು ಯಾರಿದ್ದಾರೆ ಅದನ್ನೆಲ್ಲಾ I am not going to disclose. but we will heavily deal with it. We will not spare any element. We have taken action. As on today, more than 480 people are still in the judicial custody. We have not lefy them.

ಈಗ ಕೆಲವರನ್ನು ಪ್ರಿವೆಂಟಿವ್ ಮೆಷರ್ ಆಗಿ ಅರೆಸ್ಟ್ ಮಾಡುತ್ತಾರೆ. ನಂತರ ಬೆಳಿಗ್ಗೆ ಬಿಡುತ್ತಾರೆ. ಅವರೆಲ್ಲಾ ತಪ್ಪಿತಸ್ಥರು ಎಂದು ನಿರ್ಧಾರಕ್ಕೆ ಬರುವ ಹಾಗೆ ಇಲ್ಲ. Yes, we have arrested thousands of people, but in the early morning hours, we released them after the period of preventive arrests. ಆದುದರಿಂದ ಇವತ್ತು ಅವರೆಲ್ಲಾ ಆಪಾದಿತರು ಎಂದು ಹೇಳುವುದಕ್ಕೆ ನಾನು ಅಪೇಕ್ಷೆಪಡುವುದಿಲ್ಲ.

ಆದರೆ ನಮಗೆ ಇದ್ದಂತಹ ಮಾಹಿತಿ ಪ್ರಕಾರ ಅವರನ್ನು ಅರೆಸ್ಟ್ ಮಾಡಿದ್ದೇವೆ. If there are any innocent people among them that is different matter. We will definitely scrutinize and review it. ಆದರೆ ಇವತ್ತು ಶಾಂತಿಯನ್ನು ಭಂಗ ಮಾಡತಕ್ಕಂತಹ ಪ್ರವೃತ್ತಿ ಇರತಕ್ಕಂತಹ ಯಾರೇ ಜನರಾಗಲಿ, ಯಾವ ಶಕ್ತಿ, ವ್ಯಕ್ತಿಗಳಾಗಲಿ, ಅವುಗಳನ್ನು ನಾವು ಖಂಡಿತವಾಗಿ ಕೂಡ ಹತೋಟಿಗೆ ತರುತ್ತೇವೆ. ನಾವು ನಿರ್ದಯವಾಗಿ ಅಂತಹ ಶಕ್ತಿ, ವ್ಯಕ್ತಿಗಳನ್ನು ಕರ್ನಾಟಕ ರಾಜ್ಯದಲ್ಲಿ ಬೆಳೆಯುವುದಕ್ಕೆ ಬಿಡುವುದಿಲ್ಲ. We will not allow them to raise their ugly heads. ಆದುದರಿಂದ ಇವತ್ತು ಶಾಂತಿ ಬೇಕು. ಇವತ್ತು ಅವರ ಮನಸ್ಸಿನ ಅಥವಾ ಹೃದಯದ ಬೆಸುಗೆ ಆಗಬೇಕು. ಅದನ್ನು ಮತ್ತೂ ಕೆಡಿಸತಕ್ಕಂತಹ ಪ್ರಯತ್ನ ನಮ್ಮ ಮಾತುಗಳಲ್ಲಿ ಆಗಲಿ ಕೃತಿಗಳಲ್ಲಾಗಲಿ ಆಗಬಾರದು. ಮುಂದೆ ಬರತಕ್ಕಂತಹ ಹಬ್ಬ ಅದು ಗಣೇಶ ಚತುರ್ಥಿ ಯಾವುದೇ ಹಬ್ಬ ಇರಬಹುದು, ಅದರಲ್ಲಿ ಯಾವುದೇ ರೀತಿಯಾದಂತಹ ಗಲಭೆಯನ್ನು, ಕ್ಷೋಭೆಯನ್ನು ಉಂಟು ಮಾಡತಕ್ಕಂತಹ ಶಕ್ತಿಗಳಿಗೆ ನಾವು ಯಾರೂ ಪ್ರೋತ್ಸಾಹ ಕೊಡದೆ, ಬಹಳ ಶಾಂತಿಯಿಂದ, ನೆಮ್ಮದಿಯಿಂದ ಈ ರಾಜ್ಯದಲ್ಲಿ ಬಾಳ್ವೆ ಮಾಡತಕ್ಕಂತಹ ಪರಿಸ್ಥಿತಿಗೆ ಎಲ್ಲರೂ ಕೂಡ ಸಹಕಾರಿ ಆಗಬೇಕು ಎಂದು ಹೇಳಿ, as far as the compenstion is concerned, we will be utmost liberal in this matter. I have already said that I am releasing Rs.20 lakhs immediately, to be kept at the disposal of the Deputy Commissioner and in war footing we will do it. The curfew was relaxed on 24th itself. We will ask the Director of Rehabilitation also to visit immediately.

ಅದು ದೇವಸ್ಥಾನ ಇರಬಹುದು ಅಥವಾ ಮಸೀದಿ ಇರಬಹುದು ಅಥವಾ ಜನರ ಆಸ್ತಿಪಾಸ್ತಿಗಳ ವಿಚಾರ ಇರಬಹುದು. ಸಮರೋಪಾದಿಯಲ್ಲಿ ಅವರಿಗೆ ಪುನರ್‌ವಸತಿಯನ್ನು ಕಲ್ಪಿಸಲಿಕ್ಕೆ ಎಲ್ಲಾ ರೀತಿಯ ಪ್ರಯತ್ನವನ್ನು ಹಾಗೂ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಕೈಗೊಳ್ಳುತ್ತದೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಈ ರೀತಿಯ ಘಟನೆಗಳು ಮರುಕಳಿಸಬಾರದು, ಯಾರೋ ನಿರಪರಾಧಿಗಳು ಜೈಲಿನಲ್ಲಿ ಕೊಳೆಯುವಂತಹ ಪರಿಸ್ಥಿತಿ ಬರಬಾರದು ಮತ್ತು ಕೊನೆ ದಿವಸವಾದರೂ ನಿಮ್ಮ ಕಾಂಗ್ರೆಸ್‌ನ ಬುದ್ಧಿಯನ್ನು ಸುಧಾರಿಸಿಕೊಳ್ಳುತ್ತೀರಾ ಎಂದುಕೊಂಡಿದ್ದೆ. ತಮ್ಮ ಸ್ಟೇಟ್‌ಮೆಂಟ್‌ನ ಕೊನೆಗೆ ತಾವೊಂದು ಮಾತನ್ನು ಹೇಳಿದ್ದೀರಿ ಅದು ಈ ಕಲ್ಲುಗಳನ್ನು, ಶೀಸೆಗಳನ್ನು ಶವದ ಮೇಲೆ ಎಸೆದರು ಎನ್ನುವಂಥದ್ದು. ಇದು ಸತ್ಯಕ್ಕೆ ದೂರವಾದಂಥ ಸಂಗತಿ. ತಾವು ಯಾರೋ ಹರಡಿಸಿದ ಸುದ್ದಿಯನ್ನು ಹೇಳುತ್ತಿದ್ದೀರಿ ಕೊನೆಗೆ ಇಲ್ಲಿ ಮುಂದೆ ಬಂದು ಸುಮಾರು 500-600 ಜನ ಬಿಜೆಪಿಯ ಕಾರ್‍ಯಕರ್ತರು ಆ ಮೆರವಣಿಗೆಯ ಬೆನ್ನತ್ತಿಕೊಂಡು ಹೋದರು ಅಂತ ಹೇಳಿದ್ದೀರಿ. ಇದು ಸತ್ಯಕ್ಕೆ ದೂರವಾದ ಮಾತು. ದಯಮಾಡಿ ತಮ್ಮ

ಪೋಲೀಸ್ ಅಧಿಕಾರಿಗಳಿಂದ ಅದೇ ರೀತಿ ಸ್ಟೇಟ್‌ಮೆಂಟ್ಸ್‌ನ್ನು ಕೊಡಿಸುವಂತದದ್ದು, ಆ ರೀತಿ ಅಪರಾಧಿ ಸ್ಥಾನದಲ್ಲಿ ಯಾರನ್ನೋ ನಿಲ್ಲಿಸುವಂತಹ ಪ್ರಯತ್ನ ಬೇಡ. ಆ ದಿನ ಸಾರ್ವಜನಿಕರು ಇದ್ದರು, ಸತ್ಯ ಸಂಗತಿ ಹೊರಗೆ ಬರಲಿ, ಬಿಜೆಪಿ ಇದ್ದರೆ ಬಿಜೆಪಿ ಅಂತಾನೆ ಆಗಲೀ, ಆದರೆ ದಯಮಾಡಿ ನ್ಯಾಯಾಂಗ ತನಿಖೆಗೆ ಇದನ್ನು ವಹಿಸಬೇಕು ಆಗ ಸತ್ಯ ಸಂಗತಿ ಹೊರಗೆ ಬರುತ್ತದೆ. ನಡೆದಿರತಕ್ಕ ಘಟನೆ ಏನು? ಏತಕ್ಕೆ ಈ ರೀತಿಯ ಸಂದರ್ಭಗಳು ಪದೇ ಪದೇ ಆಗುತ್ತಿವೆ, ಆ ದೃಷ್ಟಿಯಿಂದ ದಯಮಾಡಿ ನಾನು ನ್ಯಾಯಾಂಗ ತನಿಖೆಗೆ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಆರ್.ವಿ.ದೇಶಪಾಂಡೆ:- ಎಲ್ಲಾ ರಾಜಕೀಯ ಪಕ್ಷಗಳು ನ್ಯಾಯಾಂಗ ತನಿಖೆಯನ್ನು ಕೇಳುತ್ತಿವೆ; ನಾವೂ ಕೇಳಿದ್ದೇವೆ; ಬಿಜೆಪಿ ಕೇಳಿದೆ, ಕರ್ನಾಟಕ ಕಾಂಗ್ರೆಸ್ ಕೇಳಿದೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಳ್ಳಬೇಕು. ಏಕೆಂದರೆ ಇವತ್ತು ಇದರೊಳಗೆ ಏನು ಸತ್ಯ ಇದೆ ಎಂಬುದು ಹೊರಗೆ ಬರಬೇಕು. ಇದಕ್ಕೆ ಯಾರು ಹೊಣೆಗಾರರು ಎಂಬುದು ಇವತ್ತಲ್ಲ, ನಾಳೆ ಜನಕ್ಕೆ ಗೊತ್ತಾಗಬೇಕು, ಅದರಲ್ಲಿ ಏನಿದೆ ಎಂಬುದು ಗೊತ್ತಾಗಬೇಕಾದರೆ ನ್ಯಾಯಾಂಗ ತನಿಖೆಯಾಗಲೇ ಬೇಕು; ಮುಖ್ಯಮಂತ್ರಿಯವರು ಅದಕ್ಕೆ ಒಪ್ಪಿಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್.ಬಂಗಾರಪ್ಪ:- ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಗೃಹಸಚಿವರ ಹೇಳಿಕೆಯನ್ನು ನಾನು ಓದಿ ನೋಡಿದೆ. ನಡೆದಿರತಕ್ಕ ಘಟನೆ ವಿಚಾರದಲ್ಲಿ ವಿವರಗಳನ್ನು ಸರಿಯಾಗಿ ಕಳುಹಿಸಬೇಕೆನ್ನುವ ಆಸಕ್ತಿ ಯಾರಿಗೂ ಕೂಡ ಇಲ್ಲ. ಆ ಅಭಿಪ್ರಾಯ ಮುಖ್ಯಮಂತ್ರಿಯವರದ್ದು ಇರಬಹುದು, ಮತ್ತೊಬ್ಬರದು ಇರಬಹುದು, ಈ ಸದನದ ಅಭಿಪ್ರಾಯ ಕೂಡ ಅಷ್ಟೇನೇ ಗೃಹಸಚಿವರ ಹೇಳಿಕೆಯಲ್ಲಿ ಘಟನೆ ನಡೆಯಲಿಕ್ಕೆ ಕಾರಣಕರ್ತರು ಯಾರು? ಏನು? What kind of enquiry you have ordered, we would like to know this. This is the right of this august House to know what kind of enquiry the State Government has ordered?

ಇದು ಇವತ್ತು ಗೃಹಸಚಿವರ ಹೇಳಿಕೆಯಲ್ಲಿ ಇಲ್ಲ; ಮುಖ್ಯಮಂತ್ರಿಯವರು ಕಾಂಪನ್‌ಸೇಷನ್ ವಿಚಾರ ಹೇಳಿದರು, ಮತ್ತೊಂದು ಹೇಳಿದರು; ನಾವು ಹಣವನ್ನು ಜಾಸ್ತಿ ಬಿಡುಗಡೆ ಮಾಡಿದ್ದೇವೆಂದರು; it is OK. It is part and parcel of the whole system as far as the sanction of compensation is concerned. What about enquiry? You have not said anything about that. What kind of enquiry? We have demanded - of course other friends have also demanded that there shall be a judicial enquiry. What kind of enquiry you have ordered? When the Hubli incidents accured matter was taken up, it seems you have ordered for judicial enquiry. Am I correct? Then why not for Bhadravathi incidents.

I can't understand. How can you defend? On what basis? What kind of enquiry you have ordered?

ಹಾಗೆ ಘಟನೆಗಳು ನಡೆಯುವುದು, ಜನ ಸಾಯುವುದು ಈ ವಿಚಾರಣೆ ಮಾಡದೆ ಹಾಗೆ ಕುಳಿತುಕೊಂಡಿರುತ್ತೀರೇನು? ಇಲ್ಲಿ ನಮಗೆ ಇರತಕ್ಕಂಥ ಹಕ್ಕು ಬರೀ ಹುಬ್ಬಳ್ಳಿಯಲ್ಲಿ ಒಂದು ಬಾವುಟ ಹಾರಿಸುವುದಕ್ಕೆ ಹೋಗಿ ಅಲ್ಲೂ ಕೂಡ ಜನ ಸತ್ತಿದ್ದರು. ನೀವು ಅಲ್ಲಿ ಜ್ಯುಡಿಷಿಯಲ್ ಎನ್‌ಕ್ವೊಯ್‌ರಿ ಮಾಡುತ್ತೀರಿ; It is OK. What about this area. ಏನು ಯಾವ ಎನ್‌ಕ್ವೊಯ್‌ರಿ, ಮಾತ್ತೊಂದು ಏನೂ ಇಲ್ಲ I was expecting the Hon'ble Chief Minister would rise to the occasion and then announce an enquiry which is befitting under the circumstances available on hand but I see nothing of it. ನೀವು ಯಾವ ವಿಚಾರಣೆಯನ್ನೂ ಮಾಡದೆ ಯಾವುದು? ಏನು? ಅಂತ ಹೇಳುತ್ತಾ ಕುಳಿತುಕೊಂಡರೆ ಹೇಗೆ? ನೀವು ಯಾವುದೇ ವಿಚಾರಣೆ, nothing short of a judicial enqiry, we demand. Why not a judicial enquiry when you had agreed for the Hubli incidents, You please come out with your statement.

ಶ್ರೀ ಎಂ. ವೀರಪ್ಪಮೊಯಿಲಿ :- ಸನ್ಮಾನ್ಯ ಅಧ್ಯಕ್ಷರೇ ಈಗ ಮುಖ್ಯವಾಗಿ communal riot ವಿಚಾರದಲ್ಲಿ ನಾವು we are always slow, not today ಯಾವಾಗಲೂ ಕೂಡ we are very slow in ordering, particularly judicial enquiry except in a few cases like Hubli incidents. ಈಗ ಏಕೆ ಎಂದು ಹೇಳಿದರೆ ನಾಳೆ ನಾಡಿದ್ದು ಗಣೇಶ ಚತುರ್ಥಿ ಬರುತ್ತದೆ, ಕೆಲವು ಹಬ್ಬಗಳು ಬರುತ್ತವೆ. There are some forces which will be very active, particularly when elections are nearing. Everybody would like to make political capital out of it so, we would not like to feed anything for making this as an issue. Who are the forces behind this show, we know. ಸರ್ಕಾರಕ್ಕೆ ಸಾಧ್ಯ ಇಲ್ಲದೇ ಇದ್ದರೆ ಆ ಸಂಗತಿ ಪ್ರತ್ಯೇಕ. ನಮಗೆ ಗೊತ್ತಿದೆ ಯಾವ ಫೋರ್ಸಸ್ ಇದರ ಬೆನ್ನ ಹಿಂದೆ ಇದೆ ಎಂದು ಆದ್ದರಿಂದ We have booked them. We are going to book them. We will not spare anyone whatever power, influence they have; the Government is capable of handling the situation. Suppose I am not in a position to actually find out, then the question of judicial enquiry comes.

**5.30. ಪಿ.ಎಂ**

ಆದುದರಿಂದ ಇವತ್ತು ಪ್ರತಿಯೊಂದಕ್ಕೂ ಜುಡ್ಶಿಷಯಲ್ ಎನ್‌ಕ್ವೈರಿ ಮಾಡಿ ಎಂದರೆ ಆಗುವುದಿಲ್ಲ. I know very well, in this case there are no charges against the police

For the incidents of December 6, 1993 ಕೆಲವು ಇನ್ಸಿಡೆಂಟ್ಸ್ ಈ ದೇಶದಲ್ಲಿ ಆಯಿತು, ಕರ್ನಾಟಕದಲ್ಲಿ ಆಯಿತು. We have not ordered for judicial enquiry. ಆದ್ದರಿಂದ ಸಾಮಾನ್ಯವಾಗಿ

Rift will increase. We have ordered judicial enquiry in respect of Bhatkal incidents. Healing touch ನಮಗೆ ಇರತಕ್ಕದ್ದು ಪುನ: ಅವರೊಳಗೆ ಇರತಕ್ಕ ದ್ವೇಷ. ಕ್ಷೋಭೆಯನ್ನು ಇವತ್ತು ಈ ಎನ್‌ಕ್ವೈರಿ ಮೂಲಕ ಹೊರಗಡೆ ಬರತಕ್ಕ ಹಾಗೆ ಮಾಡಿದರೆ If it is going to solve the problem, yes. If the enflorcement authorities, or police authorities, if they are capable and competent enough to identify those forces and deal with them firmly I do not think in such cases, it is necessary to have judicial inquiry. communal riots we know how to deal with. Therefore, under the circumstances, it is not in the interest of Karnataka or in maintaining harmony and peace and also in order to give a healing touch, I think it is not desirable and the Government is not willing to institute any judicial enquiry; but we will not spare any effort in identifying and punishing.

Sri R.V.Deshpande:- If you order judicial enquiry, cofidence will be restored, because rift should not widen. ತಾವು ಹೇಳಿದ ಹಾಗೆ ರಿಫ್ಟ್ ವೈಡನ್ ಆಗಬಾರದು, ನಾನು ಒಪ್ಪಿಕೊಳ್ಳುತ್ತೇನೆ. Suppose you order judicial enquiry, cofidence will be restored that the guilty will be punished.

Sri M.Veerappa Moily :- Some time, by ordering for an extensive enquiry, people who are guilty may be shielded. They will get some cover under something but we have to deal with them as criminals. We must deal with these forces which are behind the scene as criminals and we will deal with them as criminals, not giving them a respectable place by ordering for

judicial enquiry. I do not want to give respectable place for these cirminals who are disturbing the law and order situation, I would like to deal with them as criminals. ಅವರಿಗೆ ಒಂದು ಗೌರವ ಸ್ಥಾನ ಕೊಟ್ಟು ಜುಡ್ಶಿಷಿಯಲ್ ಎನ್‌ಕ್ವೈರಿ ಮಾಡತಕ್ಕುದು ನನಗೆ ಹಿತ ಕಾಣುವುದಿಲ್ಲ.

* ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಅಧ್ಯಕ್ಷರೆ, ಇವತ್ತು ಇನ್ಸಿಡೆಂಟ್ ನಡೆದಾಗ ಕಮ್ಯೂನಲ್ ಗಲಾಟೆಗಳು ನಡೆದಿರತಕ್ಕ ಸಂದರ್ಭದಲ್ಲಿ ಜ್ಯುಡಿಷಿಯಲ್ ಎನ್‌ಕ್ವೈರಿಗೆ ಯಾವಾಗಲೂ ಕೂಡ ಆರ್ಡರ್ ಆಗಿಲ್ಲವೆಂಬ ಅಭಿಪ್ರಾಯ ಒಳ್ಳೆಯದಲ್ಲ. ಹುಬ್ಬಳ್ಳಿ ಇನ್ಸಿಡೆಂಟ್ ಏನಾಗಿತ್ತು? ಹುಬ್ಬಳ್ಳಿ ಇನ್ಸಿಡೆಂಟಿಗೆ ನೀವು ಈದ್ಗಾ ಮೈದಾನದಲ್ಲಿ ಬಾವುಟ ಹಾರಿಸ ತಕ್ಕ ಎಂಬ ಮಾತು ಆಡಿದರೂ ಕೂಡ ಅದು ಇದೇ ಅಭಿಪ್ರಾಯವನ್ನು ಅಲ್ಲೇ ಹೊಂದಿದೆ ಎಂಬುದನ್ನು ಮರೆಯಬಾರದು. ನೀವು ಅದಕ್ಕೆ ಜ್ಯುಡಿಷಿಯಲ್ ಎನ್‌ಕ್ವೈರಿಗೆ ಆರ್ಡ್‌ರ್ ಮಾಡಬಾರದಾಗಿತ್ತು. ಹುಬ್ಬಳ್ಳಿ ವಿಚಾರದಲ್ಲಿ ಏತಕ್ಕೆ ಮಾಡುವುದಕ್ಕೆ ಹೋದಿರಿ? ನಿಮ್ಮ ಆಡಳಿತದಲ್ಲಿ ಆ ರೀತಿ ಅಭಿಪ್ರಾಯ ಇಟ್ಟುಕೊಂಡು ನೀವೇ ಡೀಲ್ ಮಾಡಬಹುದಿತ್ತಲ್ಲಾ. ಒಂದು ಸಾರಿ ಅದಕ್ಕೆ ನೀವು ಒಪ್ಪಿಗೆ ಕೊಟ್ಟಮೇಲೆ I don't think you are left with any other choice but to accept the same approach adopted in respect of Hubli incidents.

ನೀವು ಭದ್ರಾವತಿಗೆ ಕೂಡ ಅದೇ ರೀತಿ ಮಾಡತಕ್ಕ ಅಭಿಪ್ರಾಯವನ್ನು ಇಟ್ಟುಕೊಳ್ಳಲೇ ಬೇಕಾಗುತ್ತದೆ. ಜೊತೆಗೆ ಎಂದು ವಿಚಾರಗಳು. ನೀವೇನಾದರೂ ಇಲ್ಲ, ಇಲ್ಲ, ನಾವು ಬಹಳ ಫರ್ಮ್ ಆಗಿ ಡೀಲ್ ಮಾಡುತ್ತೇವೆ, ಯಾರ‍್ಯಾರು ಆ ರೀತಿ ಕಾರಣಕರ್ತರಾಗಿದ್ದಾರೆ ಈ ಭದ್ರಾವತಿ ಇನ್ಸಿಡೆಂಟಿಗೆ ನಾವು ಅವರ ಮೇಲೆ ಕಾನೂನು ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳದೆ ಬಿಡುವುದಿಲ್ಲವೆಂದು ನೀವು ಏನು ಮಾತನಾಡುತ್ತೀರಿ, ಅದರ ಬಗ್ಗೆ ಅನುಮಾನವಾಗಿಯೇ ನಾವು ಇದೆಲ್ಲಾ ಕೇಳುತ್ತಿರತಕ್ಕದ್ದು. ಇವತ್ತು ಜುಡ್ಶಿಷಿಯಲ್ ಎನ್‌ಕ್ವೈರಿ ಆದರೆ ಕೊನೇಪಕ್ಷ ಫ್ಯಾಕ್ಟ್ಸ್ ಫೈಂಡಿಂಗ್ ಎನ್‌ಕ್ವೈರಿ ಆಗಿ ಇವತ್ತು ಯಾರು ಏನು ಎಂಬುದು ಗೊತ್ತಾಗುತ್ತದೆ. ಇವತ್ತು ಬಿಜೆಪಿ. ಮಿತ್ರರು ಕೇಳುತ್ತಿದ್ದಾರೆ. ಯಾರು ಏನು, ನಾವು ತಪ್ಪಿತಸ್ಥರೇ ಏನು ಎಂದು ಅವರು ಹೇಳುತ್ತಿದ್ದಾರೆ, ಒಂದು ವೇಳೆ miscreants ಯಾರಾದರೂ ಇದ್ದರೆ ಕ್ರಿಮಿನಲ್ ಎಲಿಮೆಂಟ್ಸ್ ಯಾರಾದರೂ ಇದ್ದರೆ ಅವರೂ ಕೂಡ ಪತ್ತೇಯಾಗುತ್ತಾರೆ. ನಾಳೆ ನಿಮಗೆ ಅವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಅನುಕೂಲವಾಗುತ್ತದೆ. Supposing your administration fails to identify and take action against those people, then what remains?

ನಾಳೆ ಅದು ಇಲ್ಲ, ಇದು ಇಲ್ಲ, ಈ ರೀತಿಯಾಗಿ ಕುಳಿತುಕೊಳ್ಳತಕ್ಕ ಸಂದರ್ಭ ಬರುತ್ತದೆ. ಆದುದರಿಂದ ನೀವು ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುವುದರಿಂದ ಫೇರ್ ಆಗಿರತಕ್ಕ ಸಂದರ್ಭ ಕೂಡ ಇದೆ. ಈಗ ಏನಾಗುತ್ತದೆ? ಚುನಾವಣೆಗಳು ಹತ್ತಿರ ಇರುವುದರಿಂದ

ನಿಮ್ಮ ತನಿಖೆ ಬಹಳ ಸೀರಿಯಸ್ ಆಗಿ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. Better you entrust this matter to a judicial scrutiny or an enquiry.

ಈಗಲೂ ಕೂಡ ಅದನ್ನು ವಿಚಾರ ಮಾಡಿ ನೀವು ಆಜ್ಞೆ ಕೊಟ್ಟರೆ ಅಲ್ಲಿ ಏನು ನಡೆದಿದೆ ಎಂಬ ವಿಚಾರದಲ್ಲಿ ಹೆಚ್ಚಿಗೆ ಗಮನ ಹರಿಸುವುದಕ್ಕೆ, ಮುಂದಿನ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಮುಂದಿನ ಸರ್ಕಾರ, ಚುನಾವಣೆಯ ನಂತರ ಯಾವುದೇ ಪಕ್ಷ ಅಧಿಕಾರಕ್ಕೆ ಬರಬಹುದು, ಅವರು ಕಾರ್ಯಕ್ರಮ ಹಾಕುವುದಕ್ಕೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆ. ನಿಮ್ಮ ಆಡಳಿತ ಇಲ್ಲಿಯವರೆಗೆ ಹೋಯಿತು, ಮುಂದೆ ಬಂದವರು ಬೇರೆ ರೀತಿ ಅದರು, ಆಗ ನಿಮ್ಮ ವಿಚಾರವೆಲ್ಲಾ ಹೊರಟುಹೋಗುತ್ತದೆ. ಆದುದರಿಂದ this is my fair suggestion; you please think over that.

ಇವತ್ತು ನಾವು ಏನು ಡಿಮ್ಯಾಂಡ್ ಮಾಡಿರತಕ್ಕದ್ದು ಇದೆ, ಅದು ಸರಿಯಾಗಿದೆ. ಇವತ್ತು ನಾನು ಇದೇ ಸ್ಥಾನದಿಂದ ಯೋಜನೆ ಮಾಡಿದೆ, ಜುಡ್ಶಿಷಿಯಲ್ ಎನ್‌ಕ್ವೈರಿ ಕೇಳಬೇಕೆ ಬಿಡಬೇಕೆ ಎಂದು ನಾನು ಯೋಚನೆ ಮಾಡಿದೆ. Judicial enquiry would be a befitting decision under the circumstances prevailing.

ನೀವು ಏನು ಹೇಳುತ್ತಿದ್ದೀರಿ? ಮೊದಲು ನೀವು ಯಾವ ಎನ್‌ಕ್ವೈರಿ ಎಂದು ಹೇಳಲಿಲ್ಲ. ನಾವು ಕೇಳಿದ ಮೇಲೆ ಸ್ಟರ್ನ್ ಆಕ್ಷ್ಯನ್ ತೆಗೆದುಕೊಳ್ಳುತ್ತೇವೆಂದಿರಿ. ಈಗಿರತಕ್ಕ ಪೊಲೀಸ್ ಇಲಾಖೆಯ ಮುಲಕ ನೀವು ಆಕ್ಷನ್ ತೆಗೆದುಕೊಳ್ಳುತ್ತೀರೆಂದು ನಮಗೆ ಗೊತ್ತಾಗುತ್ತದೆ ನೀವು ಆ್ಯಕ್ಷನ್ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಿಲ್ಲ; ಪೊಲೀಸ್ ಇಲಾಖೆಗೆ ಆ ಶಕ್ತಿ ಇಲ್ಲವೆಂದು ಹೇಳುತ್ತಿಲ್ಲ. That is not the point. My point is, inview of the coming elections which is very much round the corner, don't think you can give a fair approach and fair trial to the issue on hand.

ಅದಕ್ಕೆ ಬರುವುದಕ್ಕಾಗುವುದಿಲ್ಲ. ಆದುದರಿಂದ, Judicial Enquiry and nothing short of it we demand. Better you think over that and then make a statement.

*ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಹಿಂದೆ ಇಂಥ ಸಂದರ್ಭಗಳು ಬಂದಾಗ ಅನೇಕ ಚರ್ಚೆಗಳು ನಡೆದು ರಾಜ್ಯ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಶಾಂತಿ ಸಮಿತಿಗಳನ್ನು ರಚನೆ ಮಾಡಬೇಕೆಂದು ಒಂದೇ ಸಮನೆ ಕೇಳಿದ್ದು ಆಯಿತು. ಆ ಶಾಂತಿ ಸಮಿತಿಗಳು ಏನಾದವು ಎಂದು ಇಲ್ಲಿಯವರೆಗೆ ಗೊತ್ತಿಲ್ಲ. ಎಲ್ಲೆಲ್ಲಿ ಸೂಕ್ಷ್ಮವಾದ ಪ್ರದೇಶಗಳು ಇವೆ, ಅಲ್ಲಿ ಶಾಂತಿ ಸಮತಿ ರಚನೆ ಮಾಡುತ್ತೇವೆಂದು ನಮಗೆ ಹೇಳಿದ್ದಿರಿ. ಆದರೆ ಅಲ್ಲಿ ಸಭೆ ಕರೆದಿಲ್ಲ. ಯಾವತ್ತಾದರೂ ಕರೆದಿದ್ದರೆ ಆ ಸಭೆಯಲ್ಲಿ ಏನಾದರೂ ಚರ್ಚೆಗೆ ಬಂತೆ? ನೀವು ಎಲ್ಲಿಯೂ ಕರೆದಿಲ್ಲ. ಲೋಕಲ್ ಆಗಿ ಯಾವಾಗಲಾದರೂ ಗದ್ದಲವಾದಾಗ ಗೋಲಿಬಾರ್ ಆದಾಗ ಆ

ಬೀದಿಯವರನ್ನು ಈ ಬೀದಿಯವರನ್ನು ಕರೆಯಿರಿ ಎಂದು ಇರುತ್ತೇ ಹೊರತು ಒಂದು ಸಮಗ್ರವಾದ ಶಾಂತಿ ಸಮಿತಿ ಎಂದು ಮಾಡಬೇಕೆಂದು ನೀವು ಸಭಾಂಗಣದಲ್ಲಿ ನಮ್ಮನ್ನೆಲ್ಲಾ ಕರೆದು ಎಲ್ಲಾ ವಿರೋಧ ಪಕ್ಷದವರನ್ನು ಸೇರಿಸಿ ಇದು ಜಿಲ್ಲಾ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ನಡೆಯಬೇಕೆಂದು ಒಂದು ವ್ಯವಸ್ಥೆ ಇತ್ತು. ಈ ವ್ಯವಸ್ಥೆ ಯಾವಾಗ ಬರುತ್ತದೆ ನಮ್ಮ ತಲೆಯಲ್ಲಿ ಅಂದರೆ, ಇಂಥ ಸಂದರ್ಭದಲ್ಲಿ ಗೋಲೀಬಾರ್ ಆದಾಗ ಜನರು ಸತ್ತಾಗ ಚಿಂತನೆ ಮಾಡುತ್ತೇವೆ. ಪರ್ಮನೆಂಟ್ ಆಗಿ ಒಂದು ವ್ಯವಸ್ಥೆಯನ್ನು ಮಾಡಬೇಕಾದುದು ಸರ್ಕಾರದ ಕರ್ತವ್ಯ ನ್ಯಾಯಂಗ ತನಿಖೆ ಬಗ್ಗೆ ನಾನು ಒತ್ತಾಯ ಮಾಡುತ್ತೇನೆ, ಆ ಪ್ರಶ್ನೆ ಬೇರೆ. ನ್ಯಾಯಾಂಗ ತನಿಖೆಯಿಂದ ನಮಗೆ ಏನು ವರದಿ ಬರುತ್ತದೆ ಆ ವರದಿಯನ್ನು ಕೊಡುವುದು ಯಾವ ಕಾಲಕ್ಕೋ ಗೊತ್ತಿಲ್ಲ. ಮುಂದಿನ ಸರ್ಕಾರ ಬಂದಾಗ ಯಾವ ಸರ್ಕಾರ ಬಂದಾಗ ವರದಿ ಬರುತ್ತದೋ ನನಗೆ ಗೊತ್ತಾಗುತ್ತಿಲ್ಲ. ಇದರ ಬಗ್ಗೆ ಯಾರು ಪರಿಣಾಮಕಾರಿಯಾಗಿ ನಿಜವಾಗಿ ಯಾರೇ ಆಗಿರಲಿ, ಅವರು ಯಾವ ಕಮ್ಯುನಿಟಿಯವರೇ ಆಗಿರಲಿ, ಶಾಂತಿಗೆ ಭಂಗ ತರತಕ್ಕವರ ಬಗ್ಗೆ ತೀವ್ರವಾಗಿ ಕ್ರಮ ಕೈಗೂಂಡರೆ ಮಾತ್ರ ಸಾಧ್ಯ. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಅತ್ಯಂತ ಘೋರ ಪರಿಣಾಮವನ್ನು ಎದುರಿಸಬೇಕಾಗುತ್ತದೆ, ಆ ಪರಿಸ್ಥಿತಿ ಬರುತ್ತದೆಂದು ಹೇಳುತ್ತಿದ್ದೀರಿ. ಕಾಲು ಮುರಿದು ಕೈಗೆ ಕೊಡಿ ಗಲಾಟೆ ಮಾಡುವವರನ್ನು ಎಂದು ಮಾನ್ಯ ಮಿತ್ರರು ಹೇಳುತ್ತಿದ್ದಾರೆ. ಯಾರಿಗೆ ಕೊಡುತ್ತೀರೋ ಏನು ಮಾಡುತ್ತಾರೋ ನೋಡೋಣ ಆ ಪ್ರಶ್ನೆ ಬೇರೆ. ನನಗನ್ನಿಸುತ್ತದೆ, ನೀವು ಸೂಕ್ಷ್ಮ ಪ್ರದೇಶಗಳು ಯಾವುವು ಎಂದು ಗುರುತಿಸಿದ್ದೀರಿ, ಅದು ತಮ್ಮಲ್ಲಿದೆ. ಆ ಪ್ರದೇಶಗಳಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಏನು ಕ್ರಮ ತೆಗೆದುಕೊಂಡಿದ್ದೀರಿ? ಅದು ಅತಿ ಮುಖ್ಯ. ಅಲ್ಲೇ ನೀವು ಎಡವಿರುವುದು. ನಾನು ಯಾರ ಮೇಲೂ ಆಕ್ಷೇಪಣೆ ಮಾಡುತ್ತಿಲ್ಲ. ಇಂಥ ಕಡೆ ಸೂಕ್ಷ್ಮ ಪ್ರದೇಶಗಳು ನಮ್ಮ ರಾಜ್ಯದಲ್ಲಿವೆ, ಆ ಪ್ರದೇಶಗಳಲ್ಲಿ ನಾವು ಯಾವ ರೀತಿ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕೆಂದು ತಾವು ಈಗಿನಿಂದಲೂ ಕ್ರಮ ಕೈಗೊಂಡರೆ ಆಗುತ್ತದೆ. ಇಲ್ಲದಿದ್ದರೆ ನೀವು ಹೇಳುವ ಪ್ರಕಾರ ಮುಂದಿನ ದಿನಗಳಲ್ಲಿ ಏನೇನು ಪರಿಸ್ಥಿತಿ ಆಗುತ್ತದೋ ಗೊತ್ತಿಲ್ಲ ಎಂಬ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದರ ಜೊತೆಗೆ ಈಗಾಗಲೇ ಬೆಂಗಳೂರಿನಲ್ಲಿ ನಿನ್ನೆ ಗಣಪತಿ ಉತ್ಸವ ಮಾಡುವುದಕ್ಕೆ ಹೋದಾಗ ಅದನ್ನು ತಡೆಹಿಡಿದಿದ್ದಾರೆ. ಇದೆಲ್ಲಾ ತಮ್ಮ ಗಮನಕ್ಕೆ ಬರಲಿ. ಎಲ್ಲೂ ರಸ್ತೆಯಲ್ಲಿ ಯಾವುದೇ ಗದ್ದಲ ಇಲ್ಲದೇ ಇರುವ ರೀತಿಯಲ್ಲಿ ದೇವರ ಉತ್ಸವಗಳನ್ನು ಮಾಡುವವರಿಗೆ ಏನು ಅನುಕೂಲಗಳನ್ನು ಮಾಡಿಕೊಡಬೇಕೋ ಅದನ್ನು ಪೋಲೀಸ್ ಇಲಾಖೆಯಿಂದ ಮೊದಲೇ ಮಾಡಿಕೊಡುವ ವ್ಯವಸ್ಥೆ ಮಾಡಿ. ಇಲ್ಲದಿದ್ದರೆ ಏನಾಗುತ್ತದೆಂದರೆ ಒಂದರ ಹಿಂದೆ ಒಂದು ಆಗಿ ನಮಗೆ ಲೈಸೆನ್ಸ್ ಕೊಡಲಿಲ್ಲ ಎಂದು ಹೇಳುವುದು, ಅದಕ್ಕೆ ಒಂದು ಕಥೆ ಕಟ್ಟುವುದು, ಲೈಸೆನ್ಸ್‌ಕೊಡದೇ ನಿಲ್ಲಿಸಿದರು ಎಂದು ಯಾರೋ ಅಪಪ್ರಚಾರ ಮಾಡುವುದು; ಹೀಗೆ ಒಂದರಿಂದ ಒಂದು ಅಪಪ್ರಚಾರಗಳು ಆಗಿ ಬೇರೆ ಬದಲಾವಣೆಯಾಗುತ್ತದೆ. ಇದನ್ನು ಗಮನಿಸಬೇಕು ಎಂದು ತಮ್ಮ ಮೂಲಕ ಅವರನ್ನು ವಿನಂತಿಸುತ್ತಿದ್ದೇನೆ ಸ್ವಾಮಿ.

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಸದಸ್ಯರಾದ ಬಂಗಾರಪ್ಪನವರು ಮತ್ತು ವಾಟಾಳ್ ನಾಗರಾಜ್ ಅವರು ಹೇಳಿದ ಬಗ್ಗೆ. ಈಗಾಗಲೇ ಹೇಳಿದ್ದೇನೆ ಬಂಗಾರಪ್ಪನವರು ಯೋಚನೆ ಮಾಡಿ ಎಂದು ಹೇಳಿದರು. ಯೋಚನೆ ಮಾಡುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಕನಿಷ್ಠ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿ ಸತ್ಯಸಂಗತಿ ಹೊರಬರಬೇಕು ಎಂಬುದು ನಮ್ಮ ಅಪೇಕ್ಷೆ ಇತ್ತು. ನೀವು ಏನು ಉತ್ತರ ಕೊಟ್ಟಿದ್ದೀರೋ ಅದರಲ್ಲಿ ನಿಜವಾಗಿ ನಡೆದಂಥ ಅನೇಕ ಘಟನೆಗಳು ಇಲ್ಲ. ಎಲ್ಲ ವಿವರವನ್ನೂ ಕೊಡುವುದು ಬೇಡ, ಇದು ಸೂಕ್ಷ್ಮವಾದ ಸಂದರ್ಭ ಎಂದು ಹೇಳಿದ್ದೀರಿ. ನಾವು ಅದನ್ನು ಒಪ್ಪಿಕೊಳ್ಳುವುದಕ್ಕೆ ಸಿದ್ಧರಿದ್ದೇವೆ. ಆದರೆ ಕೊನೇಪಕ್ಷ ಒಂದು ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿ. ಇಂಥ ಘಟನೆಗಳು ಮರುಕಳಿಸಬಾರದು ಎಂಬ ದೃಷ್ಟಿಯಿಂದ, ಸತ್ಯಸಂಗತಿ ಹೊರಬರಬೇಕು; ಆದ್ದರಿಂದ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಬೇಕು ಎಂದು ಒತ್ತಾಯ ಮಾಡಿದೆವು. ಸರ್ಕಾರ ಅದನ್ನು ಒಪ್ಪುತ್ತಿಲ್ಲ. ನೀವು ಮುಚ್ಚಿಹಾಕುವ ಪ್ರಯತ್ನ ಮಾಡುತ್ತಿದ್ದೀರಿ. ಇದನ್ನು ಪ್ರತಿಭಟನೆ ಮಾಡಿ ನಾವು ಹೊರಗೆ ಹೋಗುತ್ತಿದ್ದೇವೆ.

ಅಧ್ಯಕ್ಷರು:- ರೂಲ್ 68ರ ಅಡಿಯಲ್ಲಿ ನಡೆದ ಗಲಭೆ ವಿಚಾರದ ಬಗ್ಗೆ ಚರ್ಚೆಯನ್ನು ಇಲ್ಲಿಗೆ ಮುಕ್ತಾಯಗೊಳಿಸಲಾಗಿದೆ.

ಶ್ರೀ ಎಸ್.ಬಂಗಾರಪ್ಪ:- ಮಾನ್ಯ ಸಭಾಧ್ಯಕ್ಷರೇ ನಾನು ಈಗಲೇ ಉತ್ತರ ಹೇಳಿ ಎಂದು ಹೇಳುತ್ತಾ ಇದ್ದೆ; ಯೋಚನೆ ಮಾಡುವುದಕ್ಕಲ್ಲ ಹೇಳಿದ್ದು. ಈ ಸರ್ಕಾರಕ್ಕೆ ಯೋಚನೆ ಮಾಡುವುದಕ್ಕೆ ಬಿಡುವಷ್ಟು ನಾವು ಮೂರ್ಖರಲ್ಲ ಇಲ್ಲಿ ಯೋಚನೆ ಮಾಡಿ ಹೇಳಿ ಎಂದರೆ ಯೋಚನೆ ಮಾಡುವುದಕ್ಕೆ ಟೈಮ್ ಕೊಡುವುದಿಲ್ಲ. ವಿಷಯ ಇಲ್ಲಿ ಚರ್ಚೆ ಮಾಡಿ ಇಲ್ಲಿ ಹೇಳದೆ ಈ ರೀತಿ ಹೊರಟುಬಿಟ್ಟರೆ? ಏನು ಮಾಡುತ್ತಾರೆ ವೀರಪ್ಪ ಮೊಯಿಲಿ ಅವರು? ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುತ್ತಿರೋ ಅಥವಾ ಇಲ್ಲವೋ?

ಶ್ರೀ ಎಂ.ವೀರಪ್ಪ ಮೊಯಿಲಿ:- ತಮ್ಮ ಭಾಷೆಯಲ್ಲಿ ತಾವು ಸ್ಪಷ್ಟವಾಗಿ ಹೇಳಿದ್ದೀರಿ. ಇದರ ಬಗ್ಗೆ ಯೋಚನೆ ಮಾಡಿ ಎಂದು. ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿ ಎಂದು ಹೇಳಲಿಲ್ಲ ಅವರು.

ಶ್ರೀ ಎಸ್.ಬಂಗಾರಪ್ಪ:-ಯೋಚನೆ ಮಾಡಿ ಈಗಲೇ ಹೇಳಬೇಕು ರೈಟ್‌ನೌ ಎಂದು ಹೇಳಿದೆ. ಇಂಗ್ಲೀಷ್ ನಿಮಗೆ ಬರುತ್ತದೆಂದು ನಾನು ತಿಳಿದುಕೊಂಡಿದ್ದೆ.

ಶ್ರೀ ಎಂ.ವೀರಪ್ಪ ಮೊಯಿಲಿ:- ಹೇಳಲಿಲ್ಲ ಅವರು.

ಶ್ರೀ ಎಸ್.ಬಂಗಾರಪ್ಪ:-ಹೇಳಿದ್ದೇನೆ. ಓದಿಸಿ ನೋಡಿ ಅಲ್ಲಿದೆ.

ಶ್ರೀ ಎಂ.ವೀರಪ್ಪ ಮೊಯಿಲಿ:- ತಾವು ಕೊಟ್ಟ ಸಲಹೆಗೆ ಮೊದಲೇ ಹೇಳಿದೆ I will deal with them as criminals. I don't want to give them a respectable place by ordering an enquiry.

ಅದಕ್ಕೆ ತಾವು ಯೋಚನೆ ಮಾಡಿ ಎಂದು ತಿದ್ದುಪಡಿ ಮಾಡಿ ಹೇಳಿದಿರಿ; ಯೋಚನೆ ಮಾಡುವುದು ಒಳ್ಳೆಯ ಸಲಹೆ ಇದೆ; ಯೋಚನೆ ಮಾಡುತ್ತೇವೆ.

ಅಧ್ಯಕ್ಷರು:-ಇದನ್ನು ಮುಕ್ತಾಯಗೊಳಿಸಿದ್ದೇನೆ.

ಶ್ರೀ ಎಸ್.ಬಂಗಾರಪ್ಪ:-ನಾನು ಹೇಳಿದೆ.

ಅಧ್ಯಕ್ಷರು:-ಇಲ್ಲ ಬಂಗಾರಪ್ಪನವರೇ, ಚರ್ಚೆ ಮುಕ್ತಾಯವಾಗಿದೆ.

ಶ್ರೀ ಎಸ್.ಬಂಗಾರಪ್ಪ:-ರೈಟ್‌ನೌ ಹೇಳಬೇಕು ಎಂಬ ವಿಚಾರವನ್ನು ಸಭಾಧ್ಯಕ್ಷರೇ. ಮುಖ್ಯಮಂತ್ರಿಯವರಿಗೆ ನಾನು ತಿಳಿಸಿದೆ. ಅವರು ಹೇಳುವುದಕ್ಕೆ ತಯಾರಿಲ್ಲ. He is not prepared to announce a judicial enquiry in the matter. Therefore I and my friends stage a walk out as a matter of protest to the statement made by the government in not instituting a judicial enquiry about the Bhadravathi incident.

(Sri.S.Bangarappa and others staged a walk out.)

Sri. Qumarul Islam:- On behalf of IUML I also demanded judicial enquiry. I also walk out.

(Sri Qumurul Islam staged a walk-out)

ಶ್ರೀ ವಾಟಾಳ್ ನಾಗರಾಜ್:-ಸರ್ಕಾರ ಕೆಲವು ಹೇಳಿಕೆಗಳನ್ನು ಕೊಡಬೇಕಾಗಿದೆ.

ಅಧ್ಯಕ್ಷರು-ಅದನ್ನು ಮಾಡಿಸೋಣ; ಎರಡು ಬಿಲ್ ಇಂಟ್ರೊಡ್ಯೂಸ್ ಮಾಡುವುದಿದೆ.

ಶ್ರೀ ವಾಟಾಳ್ ನಾಗರಾಜ್:-ಇಲ್ಲ....

ಅಧ್ಯಕ್ಷರು:-ವಾಟಾಳ್‌ನಾಗರಾಜ್ ಅವರೇ, ಸ್ವಲ್ಪ ಸಮಾಧಾನ ತೆಗೆದುಕೊಳ್ಳಿ ಸ್ವಾಮಿ. ಇವತ್ತು ಎಲ್ಲಾ ಕಾರ್ಯಕಲಾಪ ಮುಗಿಸೋಣ. ರಾತ್ರಿ 12 ಗಂಟೆಯ ವರೆಗೂ ಕುಳಿತುಕೊಳ್ಳೋಣ.

**ಶಾಸನ ರಚನಾ ಕಲಾಪ**

**1994ನೇ ಸಾಲಿನ ಕೂಡಲಸಂಗಮ ಅಭಿವೃದ್ಧಿ ಮಂಡಲಿ ವಿಧೇಯಕ**

**(ಮಂಡನೆಗೆ ಅನುಮತಿ ಕೋರಿಕೆ )**

ಶ್ರೀ ಎಂ.ವೀರಪ್ಪ ಮೊಯಿಲಿ (ಮುಖ್ಯಮಂತ್ರಿಯವರು):-ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರ ಪರವಾಗಿ 1994ನೇ ಸಾಲಿನ ಕೂಡಲಸಂಗಮ ಅಭಿವೃದ್ಧಿ ಮಂಡಳಿ ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು:- ವಾಟಾಳ್ ನಾಗರಾಜ್ ಅವರೇ ಕೇಳಿ ಕೂಡಲ ಸಂಗಮದ್ದು.

ಶ್ರೀ ವಾಟಾಳ್ ನಾಗರಾಜ್:- ನನಗೇಕೆ ಹೇಳುತ್ತಿದ್ದೀರಿ ಕೂಡಲಸಂಗಮ ಎಂದು. ನನಗೇನು?

ಅಧ್ಯಕ್ಷರು:- ನೀವು ಕೇಳುತ್ತಾ ಇದ್ದೀರಿ; ಅದಕ್ಕೆ ಈ ವಿಧೇಯಕ ಬಂದಿದೆ ಎಂದು ಹೇಳಿದೆ.